ಶನಿವಾರ, ಡಿಸೆಂಬರ್ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 352 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚರ್ಚೆ: ಅತುಲ್ ಆತ್ಮಹತ್ಯೆ ಕಾನೂನು ಬದಲಾವಣೆ ಮಾಡಬೇಕಿದೆಯೇ?
'ರೈಲ್ವೆ ಪೂರ್ಣ ಮೊತ್ತ ಭರಿಸಿ' 12
ಕೆನಡಾ ಸಾಕ್ಷ್ಯ ಒದಗಿಸಿಲ್ಲ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,041 ▼	23,587 ▼	₹79,200 (ಬೆಂಗಳೂರು)	₹90,600 (ಬೆಂಗಳೂರು)	85.04

ಕೆಡವುವುದು ಸುಲಭ, ಕಟ್ಟುವುದು ಕಷ್ಟ: ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಗೊರುಚ ಕಿವಿಮಾತು

'ಧರ್ಮದ ದುರುಪಯೋಗ ನಿಲ್ಲಲಿ'

ಅಧ್ಯಕ್ಷರ ಹಕ್ಕೊತ್ತಾಯಗಳು... ಹತ್ತನೆಯ ತರಗತಿಯವರೆಗೆ ಬೋಧನೆಯಲ್ಲಿ ಕನ್ನಡ ಮಾಧ್ಯಮವೇ ಕಡ್ಡಾಯವಾಗಲಿ • ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿ • ಕಚೇರಿಗಳನ್ನು ಸ್ಥಳಾಂತರಿಸಿ– ಬೆಂಗಳೂರಿನ ಒತ್ತಡವನ್ನು ತಪ್ಪಿಸಿ • ಗಣಿಗಾರಿಕೆಗೆ ಅವಕಾಶ ನೀಡಬೇಡಿ

• ಕೆ.ನರಸಿಂಹಮೂರ್ತಿ

ಮಂಡ್ಯ: 'ಗುಡಿ, ಮಸೀದಿ, ಗುರುದ್ವಾರ, ಚೈತ್ಯಾಲಯ, ಬಸದಿಗಳು ಮತೀಯ ಸಂಘರ್ಷದ ಕೇಂದ್ರಗಳಾಗುತ್ತಿರುವುದು ಖೇದನೀಯ. ನಾವು ಕಟ್ಟುವವರಾಗಬೇಕೇ ವಿನಾ ಕೆಡವುವವರಾಗಬಾರದು. ಕೆಡವುವುದು ಸುಲಭ, ಕಟ್ಟುವುದು ಕಷ್ಟ. ಹಿಂದಿನ ತಪ್ಪುಗಳು ಮರುಕಳಿಸಬಾರದು; ನಾವು ಮುಂದೆ ಹೋಗಬೇಕೇ ವಿನಾ ಹಿಂದೆ ಹೋಗಬಾರದು'

– ಶುಕ್ರವಾರ ಇಲ್ಲಿ ಆರಂಭವಾದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಸಮ್ಮೇಳನದ ಅಧ್ಯಕ್ಷ ಗೊ.ರು.ಚನ್ನಬಸಪ್ಪ, ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಿಂದ ಕನ್ನಡಿಗರಿಗೆ ಹೇಳಿದ ಕಿವಿಮಾತು ಇದು.

ಸಾವಿರಾರು ಕನ್ನಡಾಭಿಮಾನಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆರಂಭವಾದ ಸಮ್ಮೇಳನ ಉದ್ಘಾಟಿಸಿದ ಅವರು, ತಮ್ಮ ಸುದೀರ್ಘ 48 ಪುಟಗಳ ಭಾಷಣದಲ್ಲಿ, 'ಧರ್ಮದ ದುರುಪಯೋಗವಾಗಬಾರದು' ಎಂದು ಒತ್ತಿ ಹೇಳಿದರು. ಕೋಮು ಸೌಹಾರ್ದದ ಅಗತ್ಯದ ಕಡೆಗೆ ಗಮನ ಸೆಳೆದರು.

'ಭಾರತ ಬಹುಧರ್ಮಗಳ ನೆಲೆ. ತುಂಬ ವಿಷಾದದ ಸಂಗತಿಯೆಂದರೆ, ಜನರನ್ನು, ಸಮಾಜವನ್ನು, ಜನ ಸಮೂಹವನ್ನು ಕಾಯಬೇಕಾಗಿದ್ದ, ಒಂದುಗೂಡಿಸಬೇಕಿದ್ದ ಧರ್ಮಗಳು ಅಸಹನೆಯನ್ನು, ಅಸಮಾನತೆಯನ್ನು ಬಿತ್ತುವ ಸಾಧನಗಳಾಗಿ ಬಿಟ್ಟಿವೆ. ಧರ್ಮದ, ಧಾರ್ಮಿಕ ಸಂಸ್ಥೆಗಳ ದುರುಪಯೋಗವಾಗುತ್ತಿದೆ' ಎಂದು ಪ್ರಚಲಿತ ವಿದ್ಯಮಾನಗಳಿಗೆ ಕನ್ನಡಿ ಹಿಡಿದರು.

'12ನೇ ಶತಮಾನದಲ್ಲಿ ಸಿದ್ಧರಾಮ 'ಶರಣರು ಒಬ್ಬರ ಮನವ ನೋಯಿಸದವನೆ, ಒಬ್ಬರ ಮನವ ಘಾತವ ಮಾಡದವನೆ ಪರಮ ಪಾವನ' ಎಂದಿದ್ದಾರೆ. ಇಂದು ಈ ನೈತಿಕತೆಯನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಹಬ್ಬ-ಹರಿದಿನಗಳು, ಉತ್ಸವ- ಆರಾಧನೆಗಳು, ಧಾರ್ಮಿಕ ಮುಖಂಡರ ಜಯಂತಿಗಳು ಜನರನ್ನು ಒಟ್ಟಿಗೆ ತರುವ ಬದಲು ಸಮಾಜವನ್ನು ಒಡೆಯುವ ಆಯುಧಗಳಾಗುತ್ತಿವೆ. ದಯೆಯ ಬದಲಾಗಿ ಹಿಂಸೆಯನ್ನು ವಿಜೃಂಭಿಸಲಾಗುತ್ತಿದೆ. ದುಡಿಮೆಗೆ, ದುಡಿಮೆಗಾರರಿಗೆ, ಕಷ್ಟಸಹಿಷ್ಣುಗಳಿಗೆ ದೊರೆಯಬೇಕಾದಷ್ಟು ಮನ್ನಣೆ, ಪ್ರೋತ್ಸಾಹ, ನೆರವು ದೊರೆಯುತ್ತಿಲ್ಲ' ಎಂದು ವಿಷಾದಿಸಿದರು.

ಹೆಣ್ಣುಮಕ್ಕಳು ಹುಟ್ಟುವುದೇ ದುರ್ಲಭ: 'ಮಹಿಳೆಯರ ಮೇಲಿನ ದೌರ್ಜನ್ಯದ ಬಗ್ಗೆ ಏನನ್ನೂ ಹೇಳದಿರುವುದೇ ಲೇಸು' ಎಂದು ವಿಷಾದಿಸಿದ ಅವರು, 'ಹೆಣ್ಣು ಮಕ್ಕಳು ಹುಟ್ಟುವುದೇ ದುರ್ಲಭ; ಹುಟ್ಟಿದ ಮೇಲೆ ಬದುಕುಳಿಯುವುದು, ಉಳಿದರೆ ಬೆಳೆಯುವುದು, ಬೆಳೆದರೆ ಬದುಕನ್ನು ಸಮೃದ್ಧಗೊಳಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.

'ಮಹಿಳಾ ಸಮಾನತೆ - ಲಿಂಗ ಸಮಾನತೆ ಎನ್ನುವುದು ಔಪಚಾರಿಕವಾದ ಕ್ಲೀಷೆಯ ಸಂಗತಿಯಾಗಿಬಿಟ್ಟಿದೆ. ನಮ್ಮದು ಮೂಲತಃ ಪುರುಷ ಪ್ರಧಾನ - ಗಂಡಾಳಿಕೆಯ ಸಮಾಜವೆಂಬುದಕ್ಕೆ ಪುರಾವೆಗಳ ಕೊರತೆಯೇನಿಲ್ಲ. ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಇಬ್ಬರ ನಡುವೆ ತೀವ್ರ ಅಸಮಾನತೆಗಳಿವೆ' ಎಂದು ಹೇಳಿದರು.

4ನೇ ಪುಟ ನೋಡಿ



ಹಬ್ಬ-ಹರಿದಿನಗಳು ಜನರನ್ನು ಒಟ್ಟಿಗೆ ತರುವ ಬದಲು ಸಮಾಜವನ್ನು ಒಡೆಯುವ ಆಯುಧ ಆಗುತ್ತಿವೆ

ಸಾಹಿತ್ಯ ಸಮ್ಮೇಳನವನ್ನು ಹೊಂಬಾಳೆ ಬಿಡಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಶಾಸಕರಾದ ಡಿ.ರವಿಶಂಕರ್, ಪಿ.ಎಂ. ನರೇಂದ್ರಸ್ವಾಮಿ, ಸಚಿವ ಡಾ.ಎಚ್.ಸಿ.ಮಹದೇವಪ್ಪ, ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಸರ್ವಾಧ್ಯಕ್ಷ ಗೊ.ರು.ಚನ್ನಬಸಪ್ಪ, ನಿರ್ಮಲಾನಂದ ಸ್ವಾಮೀಜಿ, ಕಸಾಪ ಅಧ್ಯಕ್ಷ ಮಹೇಶ್ ಜೋಶಿ, ಸಚಿವ ಶಿವರಾಜ ತಂಗಡಗಿ, ಶಾಸಕರಾದ ಎಚ್.ಟಿ.ಮಂಜು, ಮಾಜಿ ಶಾಸಕ ಮರಿತಿಬ್ಬೇಗೌಡ, ಶಾಸಕ ಪಿ. ರವಿಕುಮಾರ್ ಪಾಲ್ಗೊಂಡರುಚಿತ್ರ: ಅನೂಪ್ ಟಿ ರಾಘ

ಹೋರಾಟದ ಕಿಚ್ಚು: ಅಭಿಮಾನದ ಕೆಚ್ಚು

ಸದಾ ಹೋರಾಟದ ಕಿಚ್ಚು ಮತ್ತು ಅಭಿಮಾನದ ಕೆಚ್ಚನ್ನು ಮನ–ಮನೆಯೊಳಗಿಟ್ಟುಕೊಂಡ ಅಚ್ಚಕನ್ನಡ ಜಿಲ್ಲೆ, ಸಕ್ಕರೆ ಜಿಲ್ಲೆಯಲ್ಲಿ ಎಲ್ಲಿ ನೋಡಿದರೂ ಈಗ ಸಾಹಿತ್ಯ ಸಂಭ್ರಮ. ಸಾಹಿತ್ಯಪ್ರೇಮಿಗಳಷ್ಟೇ ಅಲ್ಲದೆ, ರೈತರು, ವಿದ್ಯಾರ್ಥಿಗಳು, ಶಿಕ್ಷಕರು, ಸಾಫ್ಟ್‌ವೇರ್ ಎಂಜಿನಿಯರುಗಳು, ವೈದ್ಯರು, ಪ್ರಕಾಶಕರು ಸೇರಿ ಎಲ್ಲ ಕ್ಷೇತ್ರಗಳ ಲಕ್ಷಕ್ಕೂ ಹೆಚ್ಚು ಮಂದಿ ಬಂದು ಶುಕ್ರವಾರ 87ನೇ ನುಡಿಜಾತ್ರೆಯ ತೇರನ್ನು ಸಂಭ್ರಮದಿಂದ ಎಳೆದರು.

ಕಿಲೋಮೀಟರುಗಟ್ಟಲೆ ನಡೆದ ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಸಾವಿರಾರು ಕಲಾವಿದರು ಪಾದಸುಡುತ್ತಿದ್ದ ಬಿರುಬಿಸಿಲನ್ನು ಲೆಕ್ಕಿಸದೆ ಕುಣಿದರು. ಅವರನ್ನು ಉತ್ತೇಜಿಸುವಂತೆ ಅಧ್ಯಕ್ಷ ಗೊ.ರು. ಚನ್ನಬಸಪ್ಪನವರೂ ಎಳನೀರು, ಹಣ್ಣಿನ ರಸ ಸೇವಿಸುತ್ತಾ ಜನರೆಡೆಗೆ ಕೈಬೀಸುತ್ತಲೇ ಇದ್ದರು.

ಸಮ್ಮೇಳನದ ಉದ್ಘಾಟನೆ ಭಾಷಣಗಳು ಸಮಾನತೆ ಮತ್ತು ವೈಚಾರಿಕತೆಯ ಮಂಡನೆಗೆ ವೇದಿಕೆಯಾಗಿದ್ದವು. ಗಣ್ಯರು ಮಂಡ್ಯದ ಜನರನ್ನು ಬಾಯಿತುಂಬಾ ಹೊಗಳಿದರು. ಸಮಾನಾಂತರ ಗೋಷ್ಠಿಗಳು ಹಲವು ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದವು.

ಉತ್ತರ ಮತ್ತು ದಕ್ಷಿಣ ಕರ್ನಾಟಕ ಶೈಲಿಯ ರುಚಿಕರ ಊಟವನ್ನು ಸವಿದ ಕನ್ನಡಾಭಿಮಾನಿಗಳು ಸಂಗೀತ ಸಂಜೆಯಲ್ಲಿ ತಡರಾತ್ರಿವರೆಗೂ ಮಿಂದರು.

ಮಾರ್ಗ ಮಧ್ಯೆ ರವಿ ಬಿಡುಗಡೆ

ಸಚಿವೆ ಲಕ್ಷ್ಮೀಯನ್ನು ನಿಂದಿಸಿದ ಪ್ರಕರಣ: ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಸುವರ್ಣ ವಿಧಾನಸೌಧದಲ್ಲೇ ಆಕ್ಷೇಪಾರ್ಹ ಪದಗಳಿಂದ ನಿಂದಿಸಿದ ಆರೋಪದ ಮೇಲೆ ಬೆಳಗಾವಿಯ ಹಿರೇಬಾಗೇವಾಡಿ ಪೊಲೀಸರು ಬಂಧಿಸಿದ್ದ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರನ್ನು ಬೆಂಗಳೂರಿನ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆತರುತ್ತಿದ್ದಾಗ ಹೈಕೋರ್ಟ್ ಆದೇಶದಂತೆ ಶಿಗ್ಗಾವಿಯಲ್ಲಿ ಮಾರ್ಗಮಧ್ಯೆಯೇ ಬಿಡುಗಡೆ ಮಾಡಲಾಯಿತು.

ಈ ಪ್ರಕರಣ ಆಡಳಿತರೂಢ ಕಾಂಗ್ರೆಸ್ ಮತ್ತು ಪ್ರಮುಖ ವಿರೋಧ ಪಕ್ಷ ಬಿಜೆಪಿ ಮಧ್ಯೆ ಎರಡು ದಿನ ವಾಕ್ಸಮರ, ಸಂಘರ್ಷಕ್ಕೆ ಕಾರಣವಾಯಿತು. ಕಾಂಗ್ರೆಸ್ ನಾಯಕರು ಸಚಿವೆ ಲಕ್ಷ್ಮೀ ಅವರ ನಿಲುವನ್ನು ಪ್ರಬಲವಾಗಿ ಸಮರ್ಥಿಸಿಕೊಂಡರೆ, ಬಿಜೆಪಿ ನಾಯಕರು ರವಿ ಅವರ ಬೆಂಬಲಕ್ಕೆ ನಿಂತಿದ್ದರು.

ರವಿ ಅವರನ್ನು ಗುರುವಾರ ಸಂಜೆ ವಶಕ್ಕೆ ಪಡೆದಿದ್ದ ಹಿರೇಬಾಗೇವಾಡಿ ಠಾಣೆ ಪೊಲೀಸರು, ರಾತ್ರಿ ವೇಳೆಗೆ ಬಂಧಿಸಿದ್ದರು. ಇಡೀ ರಾತ್ರಿ ನಾಟಕೀಯ ಬೆಳವಣಿಗೆಗಳು ನಡೆದವು. ಹಿರೇಬಾಗೇವಾಡಿಯಿಂದ ರವಿ ಅವರನ್ನು ಖಾನಾಪುರ ಪೊಲೀಸ್ ಠಾಣೆಗೆ ಸ್ಥಳಾಂತರಿಸಲಾಯಿತು. ಬಳಿಕ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ಹಲವು ಕಡೆಗಳಿಗೆ ಕರೆದೊಯ್ಯಲಾಯಿತು.



ಸಿ.ಟಿ ರವಿ ಅವರು ಚಿಂತಕರ ಚಾವಡಿಯಲ್ಲಿ 'ಆ' ಮಾತು ಬಳಸಿದ್ದು ನಿಜ. ನಾನು ಇಡೀ ರಾಜ್ಯದ ಮಹಿಳೆಯರ ಪ್ರತಿನಿಧಿ. ನಾನೇಕೆ ಸುಳ್ಳು ಹೇಳಲಿ
ಲಕ್ಷ್ಮೀ ಹೆಬ್ಬಾಳಕರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ



ಸತ್ಯಕ್ಕೆ ಜಯ ದೊರೆತಿದೆ. ಕಾಂಗ್ರೆಸ್ ಸರ್ಕಾರ ಪೊಲೀಸ್ ಬಲ ಉಪಯೋಗಿಸಿಕೊಂಡು ಮಾನಸಿಕವಾಗಿ ಕುಗ್ಗಿಸಲು ಮುಂದಾದರೂ ನಾನು ಎಳ್ಳಷ್ಟೂ ಕುಗ್ಗುವುದಿಲ್ಲ
ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಒಂದೇ ದಿನ ಮೂರು ಕಡೆ ವಿಚಾರಣೆ

ಸಿ.ಟಿ. ರವಿ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ ಒಂದು ಮತ್ತು ಬೆಂಗಳೂರಿನ ಎರಡು ನ್ಯಾಯಾಲಯಗಳಲ್ಲಿ ಶುಕ್ರವಾರ ಒಂದೇ ದಿನ ವಿಚಾರಣೆ ನಡೆಯಿತು.

ಬೆಳಗಾವಿಯ ಐದನೇ ಜೆಎಂಎಫ್ ನ್ಯಾಯಾಲಯದಲ್ಲಿ ಮಧ್ಯಾಹ್ನದವರೆಗೂ ವಿಚಾರಣೆ ನಡೆದರೆ, ಮಧ್ಯಾಹ್ನದ ಬಳಿಕ ಪ್ರಕರಣ ಬೆಂಗಳೂರಿನ ನ್ಯಾಯಾಲಯಗಳಿಗೆ ವರ್ಗಾವಣೆ ಆಯಿತು. ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಧ್ಯಂತರ ಜಾಮೀನು ಕೋರಿದ್ದ ಅರ್ಜಿಯ ವಿಚಾರಣೆ ನಡೆಸಿತು. ಹೈಕೋರ್ಟ್‌ನಲ್ಲಿ ಪ್ರಕರಣಕ್ಕೆ ತಡೆ ಕೋರಿದ್ದ ಅರ್ಜಿಯ ವಿಚಾರಣೆ ನಡೆಯಿತು.

ನಸುಕಿನ ಜಾವ 3.30ರ ವೇಳೆಗೆ ರಾಮದುರ್ಗ ಸರ್ಕಾರಿ ಆಸ್ಪತ್ರೆಯಲ್ಲಿ ತಲೆಯಲ್ಲಿನ ಗಾಯಕ್ಕೆ ಚಿಕಿತ್ಸೆ ಕೊಡಿಸಲಾಯಿತು. ಅಲ್ಲಿಂದ ಮುತಗಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಆರೋಗ್ಯ ತಪಾಸಣೆ ನಡೆಸಲಾಯಿತು.

ಶುಕ್ರವಾರ ಬೆಳಿಗ್ಗೆ ಬೆಳಗಾವಿಯ ಐದನೇ ಜೆಎಂಎಫ್ ನ್ಯಾಯಾಲಯಕ್ಕೆ ರವಿ ಅವರನ್ನು ಬಿಗಿ ಪೊಲೀಸ್ ಭದ್ರತೆಯಲ್ಲಿ ಹಾಜರುಪಡಿಸಲಾಯಿತು.

8ನೇ ಪುಟ ನೋಡಿ

ಲಕ್ಷ್ಮೀ ಬೆಂಬಲಕ್ಕೆ ಕೈ ಪಡೆ

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಬಹುತೇಕ ನಾಯಕರು, ಮುಖಂಡರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಬೆಂಬಲಕ್ಕೆ ನಿಂತಿದ್ದಾರೆ.

ಮಂಡ್ಯದಲ್ಲಿ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, 'ಯಾವ ಹೆಣ್ಣು ಮಕ್ಕಳೂ ಇಂತಹ ವಿಚಾರದಲ್ಲಿ ಸುಳ್ಳು ಹೇಳುವುದಿಲ್ಲ. ಅವಾಚ್ಯ ಪದ ಬಳಸದೇ ಇದ್ದರೆ ರವಿ ಅವರ ಬಂಧನ ಏಕೆ ಆಗುತ್ತಿತ್ತು' ಎಂದು ಪ್ರಶ್ನಿಸಿದರು. ಬೆಳಗಾವಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ರವಿ 12 ಬಾರಿ ಆ ಪದದಿಂದ ಲಕ್ಷ್ಮೀ ಅವರನ್ನು ನಿಂದಿಸಿದ್ದಾನೆ. ನಿಮ್ಮ ಬಳಿ ದಾಖಲೆ ಇಲ್ಲದಿದ್ದರೆ ಹೇಳಿ, ನಾನೇ ಕೊಡುತ್ತೇನೆ' ಎಂದರು.

ಹಲವೆಡೆ ಪ್ರತಿಭಟನೆ

ಸಿ.ಟಿ. ರವಿ ಬಂಧನ ವಿರೋಧಿಸಿ ಅವರ ಸ್ವಂತ ಊರು ಚಿಕ್ಕಮಗಳೂರಿನಲ್ಲಿ ಶುಕ್ರವಾರ ಬಂದ್ ನಡೆಸಲಾಯಿತು. ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಬೆಂಗಳೂರು, ಉಡುಪಿ, ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆಗಳನ್ನು ನಡೆಸಲಾಯಿತು.

ರಾಹುಲ್ ಗಾಂಧಿ ವಿಚಾರಣೆ ಸಾಧ್ಯತೆ

ನವದೆಹಲಿ (ಪಿಟಿಐ): ಸಂಸತ್ ಆವರಣದಲ್ಲಿ ಗುರುವಾರ ನಡೆದ ತಳ್ಳಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಗಾಯಗೊಂಡಿರುವ ಇಬ್ಬರು ಬಿಜೆಪಿ ಸಂಸದರ ಹೇಳಿಕೆಗಳನ್ನು ದಾಖಲಿಸುವ ಸಾಧ್ಯತೆಯಿದೆ. 13

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮಂದಿರ-ಮಸೀದಿಗಳ ಹೊಸ ವಿವಾದ: ಭಾಗವತ್ ಕಳವಳ

ಪುಣೆ (ಪಿಟಿಐ): ದೇಶದಲ್ಲಿ ಹೊಸದಾಗಿ ಮಂದಿರ – ಮಸೀದಿಗಳ ವಿವಾದಗಳನ್ನು ಹುಟ್ಟುಹಾಕುತ್ತಿರುವುದಕ್ಕೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಮೋಹನ್ ಭಾಗವತ್

'ಕೆಲವು ವ್ಯಕ್ತಿಗಳು, ಅಯೋಧ್ಯೆಯ ರಾಮ ಮಂದಿರ ನಿರ್ಮಾಣದ ನಂತರ, ಅಂತಹ ವಿವಾದಗಳನ್ನು ಕೆರಳಿಸುವ ಮೂಲಕ ಹಿಂದೂಗಳ ನಾಯಕರಾಗಬಹುದೆಂದು ಭಾವಿಸಿದ್ದಾರೆ. ಆದರೆ, ಅದು ಸ್ವೀಕಾರಾರ್ಹವಲ್ಲ' ಎಂದೂ ಅವರು ಹರಿಹಾಯ್ದಿದ್ದಾರೆ.

ಗುರುವಾರ ಇಲ್ಲಿ ಸಹಜೀವನ ವ್ಯಾಖ್ಯಾನಮಾಲಾದಲ್ಲಿ (ಉಪನ್ಯಾಸ ಮಾಲಿಕೆ) 'ಭಾರತ – ವಿಶ್ವಗುರು' ವಿಷಯದ ಬಗ್ಗೆ ಉಪನ್ಯಾಸ ನೀಡಿದ ಅವರು, ಎಲ್ಲರನ್ನೂ ಒಳಗೊಳ್ಳುವ ಸಮಾಜದ ಅಗತ್ಯವಿದೆ. ದೇಶವು ಸಾಮರಸ್ಯದಿಂದ ಬದುಕಬಹುದು ಎಂಬುದನ್ನು ಜಗತ್ತಿಗೆ ತೋರಿಸಬೇಕಾಗಿದೆ ಎಂದರು.

ಭಾರತೀಯ ಸಮಾಜದ ಬಹುತ್ವವನ್ನು ಎತ್ತಿ ತೋರಿಸಿದ ಅವರು, 'ರಾಮಕೃಷ್ಣ ಮಿಷನ್‌ನಲ್ಲಿ ಕ್ರಿಸ್‌ಮಸ್ ಆಚರಿಸಲಾಗುತ್ತದೆ. ನಾವು ಹಿಂದೂಗಳಾಗಿರುವುದರಿಂದ ಮಾತ್ರ ಇದನ್ನೆಲ್ಲವನ್ನು ಮಾಡುತ್ತಿದ್ದೇವೆ' ಎಂದು ಹೇಳಿದರು.

13ನೇ ಪುಟ ನೋಡಿ

'ಬ್ರಿಟಿಷರಿಂದಾಗಿ ಪಾಕಿಸ್ತಾನ ಅಸ್ತಿತ್ವಕ್ಕೆ'

'ಅಯೋಧ್ಯೆಯಲ್ಲಿ ರಾಮಮಂದಿರವನ್ನು ಹಿಂದೂಗಳಿಗೆ ನೀಡಬೇಕು ಎಂದು ನಿರ್ಧರಿಸಲಾಗಿತ್ತು. ಆದರೆ, ಬ್ರಿಟಿಷರು ಅದನ್ನು ಗ್ರಹಿಸಿ, ಎರಡು ಸಮುದಾಯಗಳ ನಡುವೆ ಬಿರುಕು ಮೂಡಿಸಿದರು. ಅಂದಿನಿಂದ, ಈ ಪ್ರತ್ಯೇಕವಾದ ಪ್ರಜ್ಞೆಯು ಅಸ್ತಿತ್ವಕ್ಕೆ ಬಂದಿತು. ಇದರ ಪರಿಣಾಮವಾಗಿ ಪಾಕಿಸ್ತಾನ ಅಸ್ತಿತ್ವಕ್ಕೆ ಬಂದಿತು' ಎಂದು ಮೋಹನ್ ಭಾಗವತ್ ಅವರು ಹೇಳಿದರು.

13ನೇ ಪುಟ ನೋಡಿ

ಒಂದು ಚುನಾವಣೆ ಮಸೂದೆ ಜೆಪಿಸಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿ 'ಇಂಡಿಯಾ' ಮೈತ್ರಿಕೂಟ ನಡೆಸುತ್ತಿದ್ದ ಧರಣಿಯ ನಡುವೆಯೇ, 'ಒಂದು ದೇಶ–ಒಂದು ಚುನಾವಣೆ' ಮಸೂದೆಗಳನ್ನು ಪರಾಮರ್ಶೆಗಾಗಿ ಶುಕ್ರವಾರ ಸಂಸತ್ತಿನ ಜಂಟಿ ಸಮಿತಿಗೆ (ಜೆಪಿಸಿ) ವಹಿಸಲಾಗಿದೆ.

ಮಸೂದೆಗಳ ಕುರಿತು ವಿಸ್ತೃತ ಸಮಾಲೋಚನೆ ನಡೆಸುವ ಪ್ರಯತ್ನದ ಭಾಗವಾಗಿ ಸಮಿತಿಯ ಸದಸ್ಯರ ಸಂಖ್ಯೆಯನ್ನು 31ರಿಂದ 39ಕ್ಕೆ ಹೆಚ್ಚಿಸಲಾಗಿದೆ. ಜಂಟಿ ಸಮಿತಿಯಲ್ಲಿ ಲೋಕಸಭೆಯಲ್ಲಿ 21 ಸಂಸದರ ಬದಲಿಗೆ 27 ಮತ್ತು ರಾಜ್ಯಸಭೆಯಲ್ಲಿ ಹತ್ತು ಜನರ ಬದಲಿಗೆ 12 ಮಂದಿ ಇರಲಿದ್ದಾರೆ. ಬಿಜೆಪಿಯ ಹಿರಿಯ ಸಂಸದರಾದ ಪಿ.ಪಿ.ಚೌಧರಿ ಅಥವಾ ಭರ್ತೃಹರಿ ಮಹತಾಬ್ ಅವರು ಸಮಿತಿಯ ಅಧ್ಯಕ್ಷರಾಗುವ ಸಂಭವ ಇದೆ.

'ಸಂವಿಧಾನ (129ನೇ ತಿದ್ದುಪಡಿ) ಮಸೂದೆ– 2024' ಮತ್ತು 'ಕೇಂದ್ರಾಡಳಿತ ಪ್ರದೇಶಗಳ ಕಾನೂನು (ತಿದ್ದುಪಡಿ) ಮಸೂದೆ– 2024' ಅನ್ನು ಸಂಸತ್ತಿನ ಜಂಟಿ ಸಮಿತಿಗೆ ಉಲ್ಲೇಖಿಸಲು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಉಭಯ ಸದನಗಳಲ್ಲಿ ಶುಕ್ರವಾರ ನಿರ್ಣಯ ಮಂಡಿಸಿದರು.

13ನೇ ಪುಟ ನೋಡಿ

ಗೋಗಿ: ವಶಪಡಿಸಿಕೊಂಡಿದ್ದ ಜಮೀನಿನಲ್ಲಿದ್ದ ಅಕ್ರಮ ಶೆಡ್‌ಗಳ ತೆರವು

ಯುರೇನಿಯಂ ಗಣಿಗಾರಿಕೆಗೆ ಸಿದ್ಧತೆ

• ಟಿ.ನಾಗೇಂದ್ರ

ಶಹಾಪುರ (ಯಾದಗಿರಿ ಜಿಲ್ಲೆ): ದಶಕದ ಹಿಂದೆ ತಾಲ್ಲೂಕಿನ ಗೋಗಿ ಗ್ರಾಮದಲ್ಲಿ ಯುರೇನಿಯಂ ಗಣಿಗಾರಿಕೆಗಾಗಿ ವಶಪಡಿಸಿಕೊಂಡಿದ್ದ ಜಮೀನಿನಲ್ಲಿ ಗಣಿಗಾರಿಕೆ ಆರಂಭಕ್ಕೆ ಮತ್ತೆ ಸಿದ್ಧತೆ ನಡೆದಿದೆ. ವಶಪಡಿಸಿಕೊಂಡ ಜಮೀನಿನಲ್ಲಿ ಸರ್ವೆ ಕಾರ್ಯ, ನೀಲನಕ್ಷೆ ಸಿದ್ಧಪಡಿಸಿಕೊಳ್ಳುವ ಕಾರ್ಯ ಭರದಿಂದ ಸಾಗಿದ್ದು, ಈ ಭಾಗದ ಜನರಲ್ಲಿ ಗಣಿಗಾರಿಕೆಯ ಭೀತಿ ಉಂಟಾಗಿದೆ.

'ಭೀಮರಾಯನಗುಡಿ ಪ್ರದೇಶದಲ್ಲಿ ಭೂಸ್ವಾಧೀನ ಪಡಿಸಿಕೊಂಡಿದ್ದ ಜಮೀನಿನಲ್ಲಿ ಕೆಲ ವ್ಯಕ್ತಿಗಳು 15 ದಿನಗಳ ಹಿಂದೆ ಅತಿಕ್ರಮಣ ಮಾಡಿಕೊಂಡು ಶೆಡ್ ನಿರ್ಮಿಸಿದ್ದರು. ಗಣಿ ಸಿಬ್ಬಂದಿ ಜೆಸಿಬಿ ಯಂತ್ರದಿಂದ ಕೆಲ ಗಂಟೆಯಲ್ಲಿಯೇ ಅದನ್ನು ತೆರವುಗೊಳಿಸಿದ್ದಾರೆ. ಯಾವುದೇ ಮಾಹಿತಿಯನ್ನೂ ಅವರು ನೀಡಲಿಲ್ಲ. ಈಗ ಯುರೇನಿಯಂ ಗಣಿಗಾರಿಕೆಗೆ ಮರು ಜೀವ ಬಂದಿದೆ' ಎಂಬ ಮಾಹಿತಿ ಕಂದಾಯ ಇಲಾಖೆಯ ಅಧಿಕಾರಿಗಳಿಂದ ತಿಳಿದು ಬಂದಿದೆ.

'ತಾಲ್ಲೂಕಿನ ಗೋಗಿ, ದಿಗ್ಗಿ, ಸೈದಾಪುರ, ಉಮರದೊಡ್ಡಿ ಗ್ರಾಮದ 150ಕ್ಕೂ ಹೆಚ್ಚು ಎಕರೆ ಜಮೀನನ್ನು ಯುರೇನಿಯಂ ಕಾರ್ಪೊರೇಷನ್ ಆಫ್ ಇಂಡಿಯಾ(ಯುಸಿಐಎಲ್) ಗಣಿಗಾರಿಕೆಗಾಗಿ ಭೂಸ್ವಾಧೀನ ಪಡಿಸಿಕೊಂಡಿದ್ದು, ರೈತರಿಗೆ ಭೂ ಪರಿಹಾರವನ್ನೂ ನೀಡಲಾಗಿದೆ. ವಶಪಡಿಸಿಕೊಂಡ ಜಮೀನಿನಲ್ಲಿ ಮೂರು ಹಂತದ ಗಣಿಗಾರಿಕೆಯ ಕೆಲಸ ಆರಂಭಗೊಳ್ಳಲಿದೆ. ಮನುಕುಲಕ್ಕೆ ಕಂಟಕವಾಗಿರುವ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಹೋರಾಟ ನಡೆಸುವುದು ಅನಿವಾರ್ಯವಾಗಿದೆ' ಎಂದು ಯುರೇನಿಯಂ ವಿರೋಧಿ ಹೋರಾಟ ಸಮಿತಿ ಸಂಚಾಲಕ ಯಲ್ಲಯ್ಯ ನಾಯಕ ವನದುರ್ಗ ಅವರು ತಿಳಿಸಿದರು.

'ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಗೋಗಿಯಲ್ಲಿ 2010ರ ನವೆಂಬರ್ 16ರಂದು ಸಾರ್ವಜನಿಕ ಅಹವಾಲು ಸಭೆ ನಡೆಸಿತ್ತು. ಆಗ ಭಾರತ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿಯನ್ನು ರದ್ದು ಮಾಡಿತ್ತು. ಅಲ್ಲದೇ ಪರಿಸರ ಇಲಾಖೆಯಿಂದಲೂ ಅನುಮತಿ ರದ್ದುಗೊಂಡಿತ್ತು' ಎಂದು ಅವರು ಸ್ಮರಿಸಿದರು.

'ಗಣಿಗಾರಿಕೆಯ ಬಗ್ಗೆ ಜಿಲ್ಲಾಡಳಿತಕ್ಕೆ ಎಲ್ಲವೂ ಗೊತ್ತಿದೆ. ಆದರೆ, ಸಾರ್ವಜನಿಕರಿಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ವಿಷಕಾರಕ ಗಣಿಗಾರಿಕೆ ಆರಂಭವಾದರೆ ದೊಡ್ಡ ಪ್ರಮಾಣದಲ್ಲಿ ಪ್ರಾಣ ಹಾನಿಯಾಗುವುದರಲ್ಲಿ ಸಂಶಯವಿಲ್ಲ. ನಾವೆಲ್ಲರೂ ನಮ್ಮ ಉಳಿವಿಗಾಗಿ ಹಾಗೂ ನಮ್ಮ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಗೋಗಿಯಲ್ಲಿ ಯುರೇನಿಯಂ ಗಣಗಾರಿಕೆ ಸ್ಥಾಪನೆಗೆ ಅವಕಾಶ ಕೊಡದಂತೆ ಜಾಗೃತಗೊಳ್ಳುವುದು ಅಗತ್ಯವಾಗಿದೆ' ಎನ್ನುತ್ತಾರೆ ಹೋರಾಟ ಸಮಿತಿಯ ಸದಸ್ಯರು.



ಯುರೇನಿಯಂ ಗಣಿಗಾರಿಕೆಗಾಗಿ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನಿನಲ್ಲಿ ನಿರ್ಮಿಸಿದ್ದ ಅನಧಿಕೃತ ಶೆಡ್‌ಗಳನ್ನು ತೆರವುಗೊಳಿಸಲಾಗಿದೆ

ಜಮೀನಿನಲ್ಲಿ ಮುಂದಿನ ಕ್ರಮಗಳ ಬಗ್ಗೆ ಎಂಜಿನಿಯರ್ ಹಾಗೂ ಗಣಿಗಾರಿಕೆಯ ಸಿಬ್ಬಂದಿ ಸರ್ವೆ ಕಾರ್ಯ ನಡೆಸಿದ್ದಾರೆ. ಅಗತ್ಯ ಭೂದಾಖಲೆಗಳನ್ನು ನೀಡಿದ್ದೇವೆ
ಉಮಾಕಾಂತ ಹಳ್ಳೆ, ತಹಶೀಲ್ದಾರ್

ಮನುಕುಲಕ್ಕೆ ಕಂಟಕವಾದ ಯುರೇನಿಯಂ ಗಣಿಗಾರಿಕೆ ಸ್ಥಗಿತಕ್ಕೆ ಮತ್ತೆ ಹೋರಾಟಕ್ಕೆ ಸಜ್ಜಾಗಬೇಕಾಗಿದೆ
ಅನಂತ ಹೆಗಡೆ ಆಶೀಸರ, ಪರಿಸರವಾದಿ

ಶನಿವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆ ಸಾಧ್ಯತೆ.

ಮುನ್ಸೂಚನೆ: ಭಾನುವಾರ 27° 19° | ಸೋಮವಾರ 27° 18° | ಮಂಗಳವಾರ 27° 18°

ಮೊಮ್ಮಗನಿಗಾಗಿ ಅಜ್ಜಿಯ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಲ್ಕು ವರ್ಷ 9 ತಿಂಗಳ ಮೊಮ್ಮಗನನ್ನು ತನ್ನ ವಶಕ್ಕೆ ನೀಡುವಂತೆ ಕೋರಿ, ಬೆಂಗಳೂರಿನ ಟೆಕಿ ಅತುಲ್ ಸುಭಾಷ್ ಅವರ ತಾಯಿ ಅಂಜು ದೇವಿ ಅವರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ. ಅಂಜು ದೇವಿ ಅವರು ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಗೆ ಪ್ರತಿಕ್ರಿಯಿಸುವಂತೆ ಬಿ.ವಿ.ನಾಗರತ್ನ ಮತ್ತು ಎನ್. ಕೋಟೀಶ್ವರ ಸಿಂಗ್ ಅವರ ಪೀಠವು ಉತ್ತರ ಪ್ರದೇಶ, ಹರಿಯಾಣ ಮತ್ತು ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ಇದೇ 7ಕ್ಕೆ ನಿಗದಿಪಡಿಸಿತು.

ಪತ್ನಿಯ ಶೋಷಣೆಯಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅತುಲ್ ವಿಡಿಯೊದಲ್ಲಿ ದಾಖಲಿಸಿದ್ದರು.

'ಈ ಪ್ರಕರಣದ ಸಂಬಂಧ ಅತುಲ್ ಅವರ ಪತ್ನಿ ನಿಖಿತಾ ಸಿಂಘಾನಿಯಾ ಮತ್ತು ಅವರ ತಾಯಿ ನಿಶಾ ಸಿಂಘಾನಿಯಾ ಬಂಧನದಲ್ಲಿದ್ದಾರೆ. ನನ್ನ ಮೊಮ್ಮಗ ಎಲ್ಲಿದ್ದಾನೆ ಮತ್ತು ಹೇಗಿದ್ದಾನೆ ಎಂಬುದು ತಿಳಿದಿಲ್ಲ. ಹಾಗಾಗಿ ಮೊಮ್ಮಗನನ್ನು ಹುಡುಕಿ, ನನ್ನ ವಶಕ್ಕೆ ಒಪ್ಪಿಸಿ' ಎಂದು ಅವರು ಅರ್ಜಿಯಲ್ಲಿ ಕೋರಿದ್ದಾರೆ.

ಲೋಕಾಯುಕ್ತ ಶೋಧ: ₹7 ಲಕ್ಷ ವಶ

ಜಲಮಂಡಳಿ, ಬೆಸ್ಕಾಂ ಗುತ್ತಿಗೆದಾರರು ಹಾಗೂ ಸಿಬ್ಬಂದಿ ಬಳಿ ನಗದು ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 45 ಕಚೇರಿಗಳಲ್ಲಿ ನಡೆದಿದ್ದ ಶೋಧ ಕಾರ್ಯಾಚರಣೆ
- ಸಿಬ್ಬಂದಿ, ಗುತ್ತಿಗೆದಾರರ ಬಳಿ ನಗದು ಪತ್ತೆ
- ಡಿಜಿಟಲ್ ಪಾವತಿ ವಹಿವಾಟಿನ ಸಾಕ್ಷ್ಯಗಳೂ ಲಭ್ಯ

ಬೆಂಗಳೂರು: ಲೋಕಾಯುಕ್ತದ ತನಿಖಾ ತಂಡಗಳು ಬೆಸ್ಕಾಂ ಮತ್ತು ಜಲಮಂಡಳಿ ಕಚೇರಿಗಳಲ್ಲಿ ಗುರುವಾರ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಗುತ್ತಿಗೆದಾರರು ಹಾಗೂ ಸಿಬ್ಬಂದಿ ಬಳಿ ಇದ್ದ ₹7.11 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ.

ದುರಾಡಳಿತ, ಕರ್ತವ್ಯಲೋಪ ಆರೋಪದಡಿ ಬೆಸ್ಕಾಂ ಮತ್ತು ಜಲಮಂಡಳಿ ಅಧಿಕಾರಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರು ವಿಚಾರಣೆ ಆರಂಭಿಸಿದ್ದಾರೆ. ಅದರ ಭಾಗವಾಗಿ ಲೋಕಾಯುಕ್ತದ ನ್ಯಾಯಾಂಗ ಮತ್ತು ಪೊಲೀಸ್ ವಿಭಾಗಗಳ ಅಧಿಕಾರಿಗಳನ್ನು ಒಳಗೊಂಡ ಜಂಟಿ ತಂಡಗಳು ಬೆಸ್ಕಾಂನ 25 ಹಾಗೂ ಜಲಮಂಡಳಿಯ 20 ಕಚೇರಿಗಳ ಮೇಲೆ ಗುರುವಾರ ದಾಳಿ ಮಾಡಿ, ಶೋಧ ನಡೆಸಿದ್ದವು.

'ಇಂದಿರಾನಗರದ ಜಲಮಂಡಳಿ ಕಚೇರಿ ಒಂದರಲ್ಲೇ ₹4,89,480 ನಗದು ವಶಕ್ಕೆ ಪಡೆಯಲಾಗಿದೆ. ಮೂವರು ಗುತ್ತಿಗೆದಾರರ ಬಳಿ ಅನುಕ್ರಮವಾಗಿ ₹1.93 ಲಕ್ಷ, ₹50,000 ಮತ್ತು ₹27,900 ಪತ್ತೆಯಾಗಿತ್ತು. ಒಬ್ಬ ಕಚೇರಿ ಹಿರಿಯ ಸಹಾಯಕನ ಬಳಿ ₹1,86,750 ಮತ್ತು ಇನ್ನೊಬ್ಬ ಕಚೇರಿ ಕಿರಿಯ ಸಹಾಯಕನ ಬಳಿ ₹31,830 ಪತ್ತೆಯಾಗಿತ್ತು. ಎಲ್ಲವನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಕುಂದಲಹಳ್ಳಿಯ ಜಲಮಂಡಳಿ ಕಚೇರಿಯಲ್ಲಿ ₹1.30 ಲಕ್ಷ, ವಿಜಯನಗರ ಜಲಮಂಡಳಿ ಕಚೇರಿಯಲ್ಲಿ ₹66,800, ಕ್ರೆಸೆಂಟ್ ರಸ್ತೆಯ ಬೆಸ್ಕಾಂ ಕಚೇರಿಯಲ್ಲಿ ಒಬ್ಬ ಸಿಬ್ಬಂದಿ ಬಳಿ ₹12,000 ಮತ್ತು ಬಾಣಸವಾಡಿಯ ಬೆಸ್ಕಾಂ ಕಚೇರಿಯಲ್ಲಿ ಸಿಬ್ಬಂದಿ ಬಳಿ ₹13,000 ನಗದು ವಶಪಡಿಸಿಕೊಳ್ಳಲಾಗಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

'ಜಲಮಂಡಳಿ ಮತ್ತು ಬೆಸ್ಕಾಂ ಕಚೇರಿಗಳಲ್ಲಿ ಗುರುವಾರ ತಡರಾತ್ರಿಯವರೆಗೂ ತಪಾಸಣೆ ನಡೆಸಲಾಗಿದೆ. ನಗದು ಕುರಿತು ಸರ್ಕಾರಿ ನೌಕರರು ಮತ್ತು ಗುತ್ತಿಗೆದಾರರ ವಿಚಾರಣೆ ನಡೆಸಲಾಯಿತು. ಅವರಿಂದ ಸಮರ್ಪಕ ಉತ್ತರ ಬರಲಿಲ್ಲ. ಬಳಿಕ ನಗದನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಲೋಕಾಯುಕ್ತ ಪ್ರಕಟಣೆಯಲ್ಲಿ ಹೇಳಿದೆ.

ಎರಡೂ ಸಂಸ್ಥೆಗಳ ಅನೇಕ ಅಧಿಕಾರಿಗಳು, ಸಿಬ್ಬಂದಿ ಯುಪಿಐ ಪಾವತಿ ಆ್ಯಪ್‌ಗಳ ಮೂಲಕವೂ ಹಣದ ವಹಿವಾಟು ನಡೆಸಿರುವ ಬಗ್ಗೆಯೂ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಈ ಕುರಿತೂ ತನಿಖೆ ನಡೆಸಲಾಗುತ್ತದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

ಲೋಪಗಳು ಪತ್ತೆ: ಬನಶಂಕರಿ ಬೆಸ್ಕಾಂ ಕಚೇರಿಯ ಜನಸ್ನೇಹಿ ವಿದ್ಯುತ್ ಸೇವೆಗಳ ಕೇಂದ್ರದಲ್ಲಿ ಆನ್‌ಲೈನ್ ಮೂಲಕ ಸಲ್ಲಿಕೆಯಾಗಿರುವ 104 ಹಾಗೂ 'ರಿಕ್ವೆಸ್ಟ್ ಎಸ್ಟಿಮೇಟ್'ನಲ್ಲಿ 122 ಅರ್ಜಿಗಳು ಬಾಕಿ ಇರುವುದು ಕಂಡುಬಂದಿದೆ.

ಬಹುತೇಕ ಕಚೇರಿಗಳಲ್ಲಿ ಹಾಜರಾತಿ ಕಡತ, ನಗದು ಘೋಷಣಾ ಕಡತ, ಅಧಿಕಾರಿಗಳು ಮತ್ತು ಸಿಬ್ಬಂದಿಯ ಚಲನ–ವಲನಗಳ ಕಡತ ನಿರ್ವಹಣೆ ಮಾಡದೇ ಕರ್ತವ್ಯಲೋಪ ಎಸಗಿರುವುದು ಪತ್ತೆಯಾಗಿದೆ ಎಂದು ಲೋಕಾಯುಕ್ತ ಹೇಳಿದೆ.

ಸಹಾಯಕ ನಿರ್ದೇಶಕ ಸೇರಿ ಮೂವರ ಸೆರೆ

ರೈಲ್ವೆ ಇಲಾಖೆಯಲ್ಲಿ ನೌಕರಿ ಕೊಡಿಸುವುದಾಗಿ ಆಮಿಷ: ₹80 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರೈಲ್ವೆ ಇಲಾಖೆಯಲ್ಲಿ ಟಿಕೆಟ್ ತಪಾಸಣೆ ಅಧಿಕಾರಿ ನೌಕರಿ ಕೊಡಿಸುವುದಾಗಿ ರಾಜ್ಯದ ಹಲವು ಜಿಲ್ಲೆಗಳ ಉದ್ಯೋಗ ಆಕಾಂಕ್ಷಿಗಳಿಗೆ ಆಮಿಷವೊಡ್ಡಿ ₹80 ಲಕ್ಷಕ್ಕೂ ಅಧಿಕ ಹಣ ಪಡೆದು ವಂಚಿಸಿದ್ದ ಆರೋಪದಡಿ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕಲಬುರಗಿಯ ವಿದ್ಯಾನಗರದ ನಿವಾಸಿ, ಎಲೆಕ್ಟ್ರಾನಿಕ್ ಗುತ್ತಿಗೆದಾರ ಲಕ್ಷ್ಮೀಕಾಂತ್ ಹೊಸಮನಿ (46), ಬೆಂಗಳೂರು ಉತ್ತರಹಳ್ಳಿಯಲ್ಲಿ ನೆಲಸಿದ್ದ; ತಮಿಳುನಾಡಿನಲ್ಲಿ ಕಿರುತೆರೆ ಕಾರ್ಯಕ್ರಮಗಳ ಸಹಾಯಕ ನಿರ್ದೇಶಕರಾಗಿರುವ ಮುರಳಿ(42), ಕಲಬುರಗಿ ಜಿಲ್ಲೆ ಅಫ್ಜಲಪುರ ತಾಲ್ಲೂಕಿನ ಉಡಚಣ ಗ್ರಾಮದ ಕುಲಪ್ಪ ಸಿಂಗೇ(38) ಬಂಧಿತರು. ಇದೇ ಪ್ರಕರಣದಲ್ಲಿ ವಿಜಯಪುರ ಜಿಲ್ಲೆಯ ಭೀಮರಾವ್ ಎಂಟಮಾನಿ, ಬಸು ಕಾಸಪ್ಪ ಮಯೂರ, ಶ್ರೀಧರ್, ಸಂತೋಷ ನಾಯಕ್ ತಲೆಮರೆಸಿಕೊಂಡಿದ್ದು, ಶೋಧ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

ಅಭ್ಯರ್ಥಿಗಳಿಂದ ಆರೋಪಿಗಳು ಪಡೆದುಕೊಂಡಿದ್ದ ಹಣ ಖರ್ಚು ಮಾಡಿಕೊಂಡಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ 10 ದಿನ ಸಿಸಿಬಿ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ವಿಜಯಪುರ ಜಿಲ್ಲೆಯ ಆಲಮೇಲದ ಹುಸನಪ್ಪ ಮಾಡ್ಯಾಳ ಅವರು ಡಿ.9ರಂದು ನೀಡಿದ್ದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು. ನಗರದ ವಿವಿಧೆಡೆ ಮೂವರು ಆರೋಪಿಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಉದ್ಯೋಗ ಆಕಾಂಕ್ಷಿಗಳಿಂದ ನಗದು ಹಾಗೂ ಬ್ಯಾಂಕ್ ಖಾತೆಗಳ ಮೂಲಕ ಹಣ ಪಡೆದು ನಕಲಿ ನೇಮಕಾತಿ ಆದೇಶ ಪತ್ರವನ್ನು ಅಂಚೆ ಹಾಗೂ ಇ–ಮೇಲ್ ಮೂಲಕ ಕಳುಹಿಸಿ ವಂಚಿಸಿದ್ದರು ಎಂದು ಪೊಲೀಸರು ಹೇಳಿದರು.



ಲಕ್ಷ್ಮೀಕಾಂತ್



ಮುರಳಿ



ಕುಲಪ್ಪ ಶಿಂಗೆ

'ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ಆರೋಪಿಗಳು ಲಕ್ಷ್ಮೀಕಾಂತ್ ಬಳಿ ಹೇಳಿಕೊಂಡಿದ್ದರು. ಲಕ್ಷ್ಮೀಕಾಂತ್ ಅವರು ತಮ್ಮ ಸಂಬಂಧಿಗಳು ಹಾಗೂ ಇತರೆ ಅಭ್ಯರ್ಥಿಗಳ ಬಳಿ ಈ ಮಾಹಿತಿ ಹಂಚಿಕೊಂಡಿದ್ದರು. ಹಣ ನೀಡಿದರೆ ಕೆಲಸ ಕೊಡಿಸುವುದಾಗಿ ಆಮಿಷ ಒಡ್ಡಿದ್ದರು. ಪ್ರತಿ ಅಭ್ಯರ್ಥಿಯಿಂದ ₹16 ಲಕ್ಷದಿಂದ ₹20 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಪಡೆದ ಹಣದಲ್ಲಿ ಲಕ್ಷ್ಮೀಕಾಂತ್ ಅವರು ₹4 ಲಕ್ಷ ಇಟ್ಟುಕೊಂಡು ಉಳಿದ ಹಣವನ್ನು ಇತರೆ ಆರೋಪಿಗಳಿಗೆ ನೀಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಉದ್ಯೋಗ ಆಕಾಂಕ್ಷಿಗಳಿಗೆ ಆರೋಪಿಗಳು ಆನ್‌ಲೈನ್ ಮೂಲಕ ನಕಲಿ ನೇಮಕಾತಿ ಪ್ರತಿಯನ್ನು ಕಳುಹಿಸಿದ್ದರು. ಅಲ್ಲದೇ ಆಕಾಂಕ್ಷಿಗಳನ್ನು ಮುಂಬೈ ಹಾಗೂ ಉತ್ತರ ಪ್ರದೇಶದ ಕಾನ್ಪುರಕ್ಕೆ ಕರೆದೊಯ್ದು, ಅಲ್ಲಿನ ಕಚೇರಿಯಲ್ಲಿ ಸುಳ್ಳು ತರಬೇತಿ ಕೊಡಿಸಿದ್ದರು. ಕೆಲವು ದಿನಗಳ ಬಳಿಕ ತಮಗೆ ನೀಡಿದ್ದು ನಕಲಿ ನೇಮಕಾತಿ ಪತ್ರ ಎಂಬುದು ಅಭ್ಯರ್ಥಿಗಳಿಗೆ ಗೊತ್ತಾಗಿತ್ತು. ಹಣ ವಾಪಸ್ ನೀಡುವಂತೆ ಲಕ್ಷ್ಮೀಕಾಂತ್ ಹಾಗೂ ಮುರಳಿ ಅವರ ಬಳಿ ಕೇಳಿಕೊಂಡಿದ್ದರು. ಆಗ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದರು' ಎಂದು ಸಿಸಿಬಿ ಪೊಲೀಸರು ಹೇಳಿದರು.

₹39 ಲಕ್ಷ ಮೌಲ್ಯದ 54 ದ್ವಿಚಕ್ರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸಿರುವ ಹೆಬ್ಬಾಳ ಹಾಗೂ ಮಹದೇವಪುರ ಠಾಣೆ ಪೊಲೀಸರು, ₹39 ಲಕ್ಷ ಮೌಲ್ಯದ 54 ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ.

ವಾಹನ ನಿಲುಗಡೆ ಸ್ಥಳಗಳು, ಮನೆ ಎದುರು ಹಾಗೂ ಮೆಟ್ರೊ ನಿಲ್ದಾಣಗಳ ಬಳಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಆರೋಪಿಗಳು ಕಳವು ಮಾಡಿ ಪರಾರಿ ಆಗುತ್ತಿದ್ದರು. ವಾಹನಗಳ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಕದ್ದ ವಾಹನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು. ಬಂಧಿತರು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಯ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಆಂಧ್ರಪ್ರದೇಶದಿಂದ ಬಸ್‌ನಲ್ಲಿ ಬಂದು ಬೈಕ್ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದಿಂದ ರಾತ್ರಿ ವೇಳೆ ಬಸ್‌ನಲ್ಲಿ ನಗರಕ್ಕೆ ಬಂದು, ಬೈಕ್ ಕಳ್ಳತನ ಮಾಡಿಕೊಂಡು ಹೋಗುತ್ತಿದ್ದ ಇಬ್ಬರನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ವೆಂಕಟೇಶ್ ಹಾಗೂ ನಂದನ್ ಬಂಧಿತರು. ಬಂಧಿತರಿಂದ ₹13 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ಪೊಲೀಸ್ ಕ್ವಾರ್ಟರ್ಸ್ ಸಮೀಪದ ಬಾಡಿಗೆ ಮನೆಯ ಎದುರು ನಿಲ್ಲಿಸಿದ್ದ ಬೈಕ್ ಕಳವಾಗಿತ್ತು. ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.



ವೆಂಕಟೇಶ್



ನಂದನ್

ಕಳವು ಮಾಡಿದ್ದ ಬೈಕ್‌ನಲ್ಲಿ ಇಬ್ಬರೂ ಆರೋಪಿಗಳು ಭುವನೇಶ್ವರಿ ನಗರ ಮಂಜುನಾಥ್ ಗ್ರ್ಯಾಂಡ್ ಹೋಟೆಲ್ ಸಮೀಪ ತೆರಳುತ್ತಿದ್ದರು. ಆಗ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಬೈಕ್ ಕಳ್ಳತನ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕದ್ದ ಬೈಕ್‌ಗಳನ್ನು ಬಾಗೇಪಲ್ಲಿ ಟೋಲ್, ಜಿಗಣಿ ಕೈಗಾರಿಕಾ ಪ್ರದೇಶ ಹಾಗೂ ದೇವನಹಳ್ಳಿಯಲ್ಲಿ ನಿಲ್ಲಿಸಿದ್ದರು. ಅಲ್ಲಿಂದ ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಮಕ್ಕಳ ಆಸಕ್ತಿ ಪ್ರೋತ್ಸಾಹಿಸಿ: ಗೋಪಿಚಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ಮಗುವಿನಲ್ಲೂ ಪ್ರತಿಭೆ ಇರುತ್ತದೆ. ಮಗುವಿನ ಆಸಕ್ತಿಯ ಕ್ಷೇತ್ರ ಗಮನಿಸಿ ಪ್ರೋತ್ಸಾಹ ನೀಡುವುದು ಪೋಷಕರ ಜವಾಬ್ದಾರಿ' ಎಂದು ಭಾರತ ಬ್ಯಾಡ್ಮಿಂಟನ್ ತಂಡದ ತರಬೇತುದಾರ ಪುಲ್ಲೇಲ ಗೋಪಿಚಂದ್ ಹೇಳಿದರು.

ದಿ ಸ್ಪೋರ್ಟ್ಸ್ ಸ್ಕೂಲ್‌ನ ಕ್ಯಾಂಪಸ್‌ನಲ್ಲಿ ಪ್ರಯೋಗ ಮತ್ತು ದಿ ಸ್ಪೋರ್ಟ್ಸ್ ಸ್ಕೂಲ್ ಸಹಕಾರದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ನಾನು ತರಬೇತುದಾರ ಮತ್ತು ಕ್ರೀಡಾಪಟುವಾಗಿ ಹೇಳುತ್ತಿದ್ದೇನೆ. ಜೀವನದಲ್ಲಿ ಗುರಿ ಸಾಧನೆಯತ್ತ ಗಮನ ಕೊಡಬೇಕು. ವಿಜ್ಞಾನ ಮತ್ತು ಗಣಿತ ವಿಷಯ ಕಲಿಕೆ ಕಷ್ಟವಾಗಿತ್ತು. ಆದರೆ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದೆ' ಎಂದರು.



ನಗರದ ದಿ ಸ್ಪೋರ್ಟ್ಸ್ ಸ್ಕೂಲ್‌ನ ಕ್ಯಾಂಪಸ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಿರುಹೊತ್ತಿಗೆಯನ್ನು ಪುಲ್ಲೇಲ ಗೋಪಿಚಂದ್ (ಎಡದಿಂದ ಮೂರನೇಯವರು) ಬಿಡುಗಡೆ ಮಾಡಿದರು. ದಿಲೀಪ್ ಕುಮಾರ್, ಡಾ.ಎಚ್.ಎಸ್.ನಾಗರಾಜ, ಡಾ. ಚೆನ್‌ರಾಜ್ ರಾಯ್‌ಚಂದ್, ಟಿ. ಆರ್. ಶ್ರೀನಿವಾಸ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರೈನ್ ಮ್ಯಾಟರ್‌ನ ಸಹ-ಸಂಸ್ಥಾಪಕ ದಿಲೀಪ್ ಕುಮಾರ್, ಪ್ರಯೋಗದ ಮುಖ್ಯ ಮಾರ್ಗದರ್ಶಕ ಡಾ.ಎಚ್.ಎಸ್.ನಾಗರಾಜ, ಜೆಜಿಐ ಗ್ರೂಪ್ ಮುಖ್ಯಸ್ಥ ಡಾ. ಚೆನ್‌ರಾಜ್ ರಾಯ್‌ಚಂದ್ ಮತ್ತು ದಿ ಸ್ಪೋರ್ಟ್ಸ್ ಸ್ಕೂಲ್ ಸಹ ಸಂಸ್ಥಾಪಕ ಟಿ. ಆರ್. ಶ್ರೀನಿವಾಸ್ ಮಾತನಾಡಿದರು.

ನಗರದಲ್ಲಿ ಇಂದು

ವಿಶ್ವ ಧ್ಯಾನ ದಿನದ ಪ್ರಯುಕ್ತ 1,500 ಜನರಿಂದ ವಿಶೇಷ ಧ್ಯಾನ: ಆಯೋಜನೆ: ಆರ್ಟ್ ಆಫ್ ಲಿವಿಂಗ್, ಸ್ಥಳ: ವಿಧಾನಸೌಧದ ಮೆಟ್ಟಿಲುಗಳು, ಬೆಳಿಗ್ಗೆ 6.30

ಪದ್ಮನಾದೋತ್ಸವ, ಆರ್.ಕೆ. ಪದ್ಮನಾಭ ಅವರಿಗೆ ಗುರುನಮನ: ಸಭಾ ಕಾರ್ಯಕ್ರಮದ ಅಧ್ಯಕ್ಷತೆ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ವಿಚಾರ ಗೋಷ್ಠಿ, ಗಾಯನ ಹಾಗೂ ಸಂಗೀತ ಕಛೇರಿ, ಆಯೋಜನೆ: ಡಾ.ಆರ್.ಕೆ. ಸರ್ ಅಭಿನಂದನಾ ಸಮಿತಿ, ಸ್ಥಳ: ವಾದಿರಾಜ ಕಲಾ ಭವನ, ಬೆಳಿಗ್ಗೆ 9.30



ವಿದ್ವಾನ್ ಆರ್.ಕೆ. ಪದ್ಮನಾಭ

'ಕರಿಯರ್ ಉತ್ಸವ' ಶೈಕ್ಷಣಿಕ ಮೇಳ: 'ಡೂ ವಾಟ್ ಯು ಲವ್, ಲವ್ ವಾಟ್ ಯು ಡೂ' ಗೋಷ್ಠಿ: ಚೇತನ್ ಭಗತ್, ಸ್ಥಳ: ಪ್ರಿನ್ಸೆಸ್ ಶೈನ್, ಅರಮನೆ ಮೈದಾನ್ (ಗೇಟ್ ಸಂಖ್ಯೆ 9), ಬೆಳಿಗ್ಗೆ 9.30

ಬಸವನಗುಡಿ ವಾರ್ಡ್ ನಂ.154 ನಿವಾಸಿಗಳ ಸಂಘದ ಉದ್ಘಾಟನೆ: ಮುಖ್ಯ ಅತಿಥಿಗಳು: ಶ್ರೀನಾಥ್ ಎಂ. ಜೋಶಿ, ಸುರಳ್ಕರ್ ವಿಕಾಸ್ ಕಿಶೋರ್, ಆರ್. ರಾಮ ರಾಜ್ ಅರಸ್, ನೀತು ವನಜಾಕ್ಷಿ, ಸುಶೀಲಮ್ಮ ರಾವ್, ವೆಂಕಟೇಶ್ ಪ್ರಸಾದ್, ಸಾಂಸ್ಕೃತಿಕ ಕಾರ್ಯಕ್ರಮ: ಅನನ್ಯ ರಾಜಾರಾಮ್, ಕೃತಿ ಭಟ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಪ್ರಥಮ ವಾರ್ಷಿಕೋತ್ಸವ: ಮುಖ್ಯ ಅತಿಥಿಗಳು: ನ್ಯಾ.ಅರವಿಂದ್ ಕುಮಾರ್, ನ್ಯಾ.ಎನ್.ವಿ. ಅಂಜಾರಿಯಾ, ಆಯೋಜನೆ: ಎಸ್‌ಜೆಆರ್‌ಸಿಎಲ್ ಹಳೆ ವಿದ್ಯಾರ್ಥಿಗಳ ಒಕ್ಕೂಟ, ಸ್ಥಳ: ಶ್ರೀ ಜಗದ್ಗುರು ರೇಣುಕಾಚಾರ್ಯ ಕಾನೂನು ಕಾಲೇಜು, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಎಂ.ಎಚ್. ಜಯಪ್ರಕಾಶ್ ನಾರಾಯಣ್ ಅವರ ಜನ್ಮದಿನ, ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ವಿದ್ಯಾರ್ಥಿಗಳ ಸಮಾವೇಶ: ಮುಖ್ಯ ಅತಿಥಿ: ಬಸವರಾಜ ಹೊರಟ್ಟಿ, ಆರ್.ವಿ. ದೇಶಪಾಂಡೆ, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ನಾಗರಬಾವಿ, ಬೆಳಿಗ್ಗೆ 11

ಅಮರೇಶ್ ಅವರಿಗೆ ನುಡಿ ನಮನ ಮತ್ತು ಹೃದಯ ರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ: ಆಯೋಜನೆ: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಜಯನಗರದ ಯುನೈಟೆಡ್ ಆಸ್ಪತ್ರೆ, ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಬಿಬಿಎಂಪಿ ಕೇಂದ್ರ ಕಚೇರಿ, ಬೆಳಿಗ್ಗೆ 11.30

ಎಸ್.ವಿ. ನಾರಾಯಣಸ್ವಾಮಿ ರಾವ್ ಜನ್ಮಶತಮಾನೋತ್ಸವ ಹಾಗೂ 'ಎಸ್.ವಿ. ನಾರಾಯಣಸ್ವಾಮಿ ರಾವ್ ಜನ್ಮಶತಮಾನೋತ್ಸವ ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ಟಿ.ಬಿ. ಜಯಚಂದ್ರ, ಎ.ವಿ. ಆನಂದ್, ಯೆಲ್ಲಾ ವೆಂಕಟೇಶ್ವರ ರಾವ್, ಸಂಪತ್ ರಾಜು, ಆಯೋಜನೆ: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್, ಸ್ಥಳ: ಎಸ್.ವಿ.ಎನ್. ಮೆಮೋರಿಯಲ್ ಹಾಲ್, ನೆಟ್ಟಿಗೆರೆ ಗ್ರಾಮ, ಸೋಮನಹಳ್ಳಿ, ಬೆಳಿಗ್ಗೆ 9.45

ವಾರ್ಷಿಕೋತ್ಸವ ಸಮಾರಂಭ: ಮುಖ್ಯ ಅತಿಥಿ: ಎ.ಆರ್. ಗೋವಿಂದ ಸ್ವಾಮಿ, ಅಧ್ಯಕ್ಷತೆ: ಜಿ.ಪಿ. ನಾಯ್ಕ್, ಆಯೋಜನೆ ಹಾಗೂ ಸ್ಥಳ: ಲೀಗ್ ಗ್ಲೋಬಲ್ ಸ್ಕೂಲ್ ಬೇಗಿಹಳ್ಳಿ, ಮಧ್ಯಾಹ್ನ 1.30

ಕರ್ನಾಟಕ ಶಾಸ್ತ್ರೀಯ ಸಂಗೀತ: ದ್ವಂದ್ವ ಗಾಯನ: ಕಲಾಂಬಿಕ ಸಹೋದರಿಯರು, ವಾದ್ಯ ಸಹಕಾರ: ವಿಶ್ವಜಿತ್ ಮತ್ತೂರು, ಸಿ.ಚೆಲುವರಾಜು, ಎಸ್. ಶ್ರೀಶೈಲ, ಆಯೋಜನೆ: ಎಂ.ಇ.ಎಸ್ ಕಲಾವೇದಿ ಸಂಸ್ಥೆ, ಸ್ಥಳ: ಎಂ.ಇ.ಎಸ್ ಕಾಲೇಜು ಸಭಾಂಗಣ, ಎಂ.ಪಿ.ಎಲ್. ಶಾಸ್ತ್ರಿ ರಸ್ತೆ, ಮಲ್ಲೇಶ್ವರ, ಸಂಜೆ 6.30

ವಾರ್ಷಿಕ ಕ್ರೀಡಾಕೂಟ: ಅತಿಥಿ: ತಿಪ್ಪೇಶ್ ವೈ.ಬಿ., ರಾಧಾ ಜಿ.ಆರ್., ಆಯೋಜನೆ ಹಾಗೂ ಸ್ಥಳ: ದಿ ಶೀಲಾ ಕೊಥವಾಲಾ ಇನ್‌ಸ್ಟಿಟ್ಯೂಟ್ ಫಾರ್ ದಿ ಡೆಫ್, ಎಚ್‌ಎಎಲ್ ರಸ್ತೆ, ಮಧ್ಯಾಹ್ನ 2

'ಶೆಹನಾಯ್ ಮೊಳಗುವಾಗ...' ಕಾದಂಬರಿ ಬಿಡುಗಡೆ: ಹಂ.ಪ. ನಾಗರಾಜಯ್ಯ, ಮೂಲ ಲೇಖಕ: ಪ್ರೇಮಾಜ್ ಕೆ.ಕೆ., ಅನುವಾದ: ಕೆ. ಪ್ರಭಾಕರನ್, ಸ್ಥಳ: ಗಾಂಧಿ ಭವನ, ಕುಮಾರ ಕೃಪ ರಸ್ತೆ, ಮಧ್ಯಾಹ್ನ 3

'ಒಲವಿನ ಉಡುಗೊರೆ ಕೊಡಲೇನು' ಚಲನಚಿತ್ರ ಗೀತೆಗಳ ನುಡಿನಮನ: ಗಾಯನ: ಬಿ.ಎ. ಶ್ರೀನಿವಾಸುಲು, ಎಚ್.ಕೆ. ರಘು, ಶೈಲಜಾ ವಿ., ಉಪಸ್ಥಿತಿ: ರೇವಣ್ಣ, ಆಯೋಜನೆ: ಸಾಯಿ ಗೀತಾಂಜಲಿ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಮಧ್ಯಾಹ್ನ 3.30

ಭರತನಾಟ್ಯ ರಂಗಪ್ರವೇಶ: ಅನುಷ್ಕಾ ಎಂ. ಅಶೋಕ್, ಉಪಸ್ಥಿತಿ: ಎಂ. ಸೂರ್ಯಪ್ರಸಾದ್, ಸುಮಾ ನಾಗೇಶ್, ಎಂ.ಆರ್. ಕಮಲಾ, ಆಯೋಜನೆ: ವಿ.ವಿಜಯಶ್ರೀ ಮತ್ತು ಎಂ.ಎಲ್. ಅಶೋಕ್ ಕುಮಾರ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಅಮೃತಾ ವೈಭವ್ ಜಿ.ಆರ್., ಅತಿಥಿಗಳು: ಎಸ್. ಅಹಲ್ಯಾ, ಎಸ್.ಸಿ. ಶರ್ಮಾ, ವಸುಂಧರಾ ಸಂಪತ್ ಕುಮಾರ್, ಬಾಲಸುಬ್ರಮಣ್ಯ ವಿ.ಕೆ., ಟಿ.ಎಸ್. ನಾಗರಾಜ ಉಪಾಧ್ಯಾಯ, ಲೀಲಾವತಿ ಉಪಾಧ್ಯಾಯ, ಆಯೋಜನೆ: ನೃತ್ಯ ದೇಗುಲ ಸ್ಕೂಲ್ ಆಫ್ ಡ್ಯಾನ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಊಂಜಲ್ ಸಂಗೀತೋತ್ಸವ: ಅಹಿಕಾ ನಾಗದೀಪ್, ವಾದ್ಯ ಸಹಕಾರ: ಶಶಿಧರ್, ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

ತಿಂಗಳ ನಾಟಕ ಸಂಭ್ರಮ: ಅತಿಥಿ: ಜೆ. ಲೋಕೇಶ್, ಕೆ.ವಿ.ಶಂಕರಗೌಡ ಅವರ ಜೀವನಾಧಾರಿತ 'ನಿತ್ಯಸಚಿವ' ನಾಟಕ ಪ್ರದರ್ಶನ, ನಿರ್ದೇಶನ: ಪ್ರಮೋದ್ ಶಿಗ್ಗಾಂವ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಯು.ಆರ್. ಅನಂತಮೂರ್ತಿ ದತ್ತಿ ಉಪನ್ಯಾಸ: 'ಹೌ (ನಾಟ್) ಟು ರೈಟ್ ದಿ ಹಿಸ್ಟರಿ ಆಫ್ ಇಂಡಿಯನ್ ಲಿಟರೇಚರ್', ಉಪನ್ಯಾಸ: ಹರೀಶ್ ತ್ರಿವೇದಿ, ಆಯೋಜನೆ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಖುಜುವಾತು, ಸ್ಥಳ: ಬಿಐಸಿ, ದೊಮ್ಮಲೂರು, ಸಂಜೆ 6.30



ಯು.ಆರ್. ಅನಂತಮೂರ್ತಿ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in


ಫ್ಲಾಟ್
₹7,000
ರಿಯಾಯಿತಿ
ಪ್ರತಿ ಕ್ಯಾರೆಟ್‌ಗೆ*
ಪಡೆಯಿರಿ
ಉಚಿತವಾಗಿ
1 ಗ್ರಾಂ
ಚಿನ್ನದ ನಾಣ್ಯವನ್ನು
ಪ್ರತಿ ಕ್ಯಾರೆಟ್‌ನೊಂದಿಗೆ*
ಹೆಚ್ಚುವರಿಯಾಗಿ
10%
ಉಳಿಸಿ ಮೇಕಿಂಗ್ ಶುಲ್ಕದ ಮೇಲೆ
ಹಳೆಯ ವಜ್ರಾಭರಣಗಳ ವಿನಿಮಯ/ಚಿನ್ನಾಭರಣದ ಖರೀದಿಗಳೊಂದಿಗೆ*
ಕೊಡುಗೆಗಳು ಡಿಸೆಂಬರ್ 9, 2024 ರಿಂದ ಜನವರಿ 5, 2025 ರವರೆಗೆ
BHIMA
BHIMA BRILLIANCE
DIAMOND JEWELLERY
FESTIVAL
Pure Since 1925
ಭೀಮ
ನವನವೀನ ಬೆಸ್ಪೋಕ್ ಆಭರಣಗಳ
ಅನುಭವ ನಿಮಗಾಗಿ ಕಾದಿದೆ.
ಕಮರ್ಷಿಯಲ್ ಸ್ಟ್ರೀಟ್ ಶೋರೂಮ್, 3ನೇ ಮಹಡಿಯಲ್ಲಿ ಮಾತ್ರ.
ವೈಯಕ್ತೀಕರಿಸಲಾದ ಆಭರಣಗಳ ಅನುಭವಕ್ಕಾಗಿ
7022431818 ಕ್ಕೆ ಕರೆ ಮಾಡಿ.
BHIMA Helpline
1800-121-9076
(10:00 a.m. to 7:00 p.m.)
FORMERLY BHIMA
ಬೆಂಗಳೂರು: ಡಿಕನ್ಸನ್ ರಸ್ತೆ • ಜಯನಗರ 3ನೇ ಬ್ಲಾಕ್ • ಕೋರಮಂಗಲ • ಎಚ್ ಬಿ ಆರ್ ಲೇಔಟ್ • ರಾಜಾಜಿನಗರ • ಮಾರತಹಳ್ಳಿ • ಹೂಡಿ • ಮಲ್ಲೇಶ್ವರಂ • ಜಯನಗರ 4ನೇ ಬ್ಲಾಕ್ • ಕಮರ್ಷಿಯಲ್ ಸ್ಟ್ರೀಟ್
ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ
bhimagold.com


Reliance
ಡಿಜಿಟಲ್
ಸಂತೋಷದ
ಉಡುಗೊರೆ
ಈ ಕ್ರಿಸ್ಮಸ್‌ನ ಪ್ರತಿ
ಆಚರಣೆಯನ್ನು ಸ್ಮರಣೀಯವಾಗಿಸಿ
ವಿಶೇಷವಾಗಿಸುತ್ತದೆ!
₹15000 ವರೆಗೆ ಇನ್‌ಸ್ಟಂಟ್ ರಿಯಾಯಿತಿ
BOBCARD FEDERAL BANK HSBC
ICICI Bank IDFC FIRST Bank one
Reliance digital
PERSONALISING TECHNOLOGY
FOR THE ENTERTAINMENT LOVERS!
QLED SMART TV 81CM (32)
OLED TV 139CM (55)
NEO QLED TV 139CM (55)
81CM (32) Starting from ₹15490*
139CM (55) Starting from ₹85990*
139CM (55) Starting from ₹109990*
FLAT 30% OFF*
UP TO ₹26000 CASH BACK*
Offer Valid on Select TVs*
AirPods 4
AirPods Pro 2nd Gen
₹11500*
₹20999*
*Price Inclusive of Bank Cashback
boAt Airdopes Loop
₹7990
₹2299*
FREE** NECKBAND
FOR THE GO GETTERS!
OnePlus Pad Go WiFi 8/128
₹17999*
LAPTOPS with Intel® Core™ i5
Starting from ₹41999*
REDMI NOTE 14
₹18999
₹17999*
iPhone 15 128 GB
₹69900
₹59900*
Price after bank cashback*
SHOP Home & Kitchen Appliances
GET GIFTS WORTH UP TO ₹7000*
FOR THE GO GETTERS!
TITAN SMART 3
AMOLED DISPLAY
₹11995
₹4995*
WATCH SERIES 10
₹49900
₹47400*
Price inclusive of bank cashback*
digital DIVA
UPGRADE YOUR LAUNDRY GAME WITH AI.
ASSURED BENEFITS WORTH ₹8000*
TRENDS VOUCHERS WORTH ₹2000*
UP TO ₹750 INSTANT DISCOUNT* ON LEADING BANK CARDS
UP TO 30% CLEARANCE SALE DISCOUNT*
FREE** True Wireless Stereo Earbuds
on select washing machine
UP TO 20% CASH BACK*
UP TO ₹5000 EXCHANGE BENEFITS*
UP TO 30% DISCOUNT* CLEARANCE SALE
on select Washing Machines & Refrigerators
FOR THE MEAL PLANNERS!
FROST FREE REFRIGERATORS Starting from ₹20990*
SIDE BY SIDE REFRIGERATORS Starting from ₹48990*
SCAN QR CODE FOR STORE LOCATION
RECYCLE OLD MOBILE ACCESSORIES & GET 5% OFF* UP TO ₹500 ON MOBILE ACCESSORIES
ALSO SHOP ON: reliancedigital.in
SHOP ANY ELECTRONICS AT MY JIO STORE
Jio DIGITAL LIFE

ರಾಷ್ಟ್ರೀಯ ಬ್ಯಾಡ್ಮಿಂಟನ್: ಹೂಡಾ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರು 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಆತಿಥ್ಯದಲ್ಲಿ ನಡೆಯುತ್ತಿರುವ ಕೂಟದ ಮೂರನೇ ದಿನವಾದ ಶುಕ್ರವಾರ ಹರಿಯಾಣದ 17 ವರ್ಷ ವಯಸ್ಸಿನ ಹೂಡಾ ಮೊದಲ ಸುತ್ತಿನಲ್ಲಿ (128ರ ಘಟ್ಟ) 21-10, 21-9ರಿಂದ ಜಮ್ಮು ಕಾಶ್ಮೀರದ ಉನ್ನತಿ ಜರೆಲ್ ಅವರನ್ನು ಮಣಿಸಿದರು. ಶ್ರೇಯಾಂಕ ರಹಿತ ಆಟಗಾರ್ತಿಯಾಗಿರುವ ಹೂಡಾ, ತಂಡ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಹರಿಯಾಣ ತಂಡವನ್ನು ಮುನ್ನಡೆಸಿದ್ದರು.



ಉನ್ನತಿ ಹೂಡಾ ಆಟದ ವೈಖರಿ —ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಮೊದಲ 12 ಶ್ರೇಯಾಂಕದ ಆಟಗಾರರು ಮೊದಲ ಸುತ್ತಿನಲ್ಲಿ ಬೈ ಪಡೆದರು. ಪುರುಷರ ವಿಭಾಗದಲ್ಲಿ ಸತೀಶ್ ಕುಮಾರ್ ಮತ್ತು ಆಯುಷ್ ಶೆಟ್ಟಿ ಹಾಗೂ ಮಹಿಳೆಯರ ವಿಭಾಗದಲ್ಲಿ ಆಕರ್ಷಿ ಕಶ್ಯಪ್ ಮತ್ತು ಅನುಪಮಾ ಉಪಾಧ್ಯಾಯ ಕ್ರಮವಾಗಿ ಮೊದಲೆರಡು ಶ್ರೇಯಾಂಕ ಪಡೆದಿದ್ದಾರೆ.

ಕರ್ನಾಟಕದ ಇಲಿಶಾ ಪಾಲ್ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಮೂರು ಗೇಮ್‌ಗಳ ಹೋರಾಟದಲ್ಲಿ ಗೆಲುವು ಸಾಧಿಸಿ ಎರಡನೇ ಸುತ್ತು ಪ್ರವೇಶಿಸಿದರು.

ಫಲಿತಾಂಶ (ಕರ್ನಾಟಕದ ಆಟಗಾರರು ಮಾತ್ರ): ಮೊದಲ ಸುತ್ತು: ಪುರುಷರ ಸಿಂಗಲ್ಸ್: ಅಭಿಷೇಕ್ ಎಲಿಗಾರ್ 21-2, 21-7ರಿಂದ ಎಂ. ಅಂಶದ್ (ಅಂಡಮಾನ್ ಮತ್ತು ನಿಕೋಬರ್) ವಿರುದ್ಧ; ನರೇನ್ ಅಯ್ಯರ್ 21-6, 21-15ರಿಂದ ಸೌಮ್ಯದೀಪ್ ಸಹಾ (ತ್ರಿಪುರ) ವಿರುದ್ಧ; ರಘು ಎಂ. 21-17, 21-17ರಿಂದ ಹರ್ಷಲ್ ಭೋಯರ್ (ಚಂಡೀಗಢ) ವಿರುದ್ಧ; ತುಷಾರ್ ಸುವೀರ್ 21-14, 21-11ರಿಂದ ಭಾಸ್ಕರ್ ಚಕ್ರವರ್ತಿ (ಆರ್‌ಬಿಐ) ವಿರುದ್ಧ; ಅಭಿನವ್ ಗರ್ಗ್ 22-20, 21-14ರಿಂದ ಸ್ಯಾಮ್ಯುವೆಲ್ ತಮಾಂಗ್ (ಅರುಣಾಚಲ ಪ್ರದೇಶ) ವಿರುದ್ಧ ಜಯ ಸಾಧಿಸಿದರು.

ಮಹಿಳೆಯರ ಸಿಂಗಲ್ಸ್: ತಾನ್ಯಾ ಹೇಮಂತ್ 21-7, 21-6ರಿಂದ ಮಾನ್ಯಾ ರಾಲ್ಹಾನ್ (ಪಂಜಾಬ್) ವಿರುದ್ಧ; ಪ್ರೇರಣಾ ಶೇಟ್ 21-18, 21-14ರಿಂದ ಸಾದ್ ಧರ್ಮಾಧಿಕಾರಿ (ಮಹಾರಾಷ್ಟ್ರ) ವಿರುದ್ಧ; ರುಜುಲಾ ರಾಮು 21-3, 21-4ರಿಂದ ಶೀತಲ್ ಜೋಶಿ (ಮೇಘಾಲಯ) ವಿರುದ್ಧ; ಸ್ನೇಹಾ ಎಸ್ 21-13, 21-10ರಿಂದ ಆದ್ಯಾ ಶೈನ್ (ಕೇರಳ) ವಿರುದ್ಧ; ಇಲಿಶಾ ಪಾಲ್ 22-24, 21-19, 21-7ರಿಂದ ದಿವ್ಯಾಂಶಿ ಗೌರಮ್ (ಉತ್ತರ ಪ್ರದೇಶ) ವಿರುದ್ಧ ಗೆಲುವು ಸಾಧಿಸಿದರು.

ಟಿಟಿ: ಕ್ವಾರ್ಟರ್‌ಗೆ ಸಿದ್ಧಾಂತ್, ಅಥರ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಿದ್ಧಾಂತ್ ಧಾರೀವಾಲ್ ಮತ್ತು ಅಥರ್ವ ನವರಂಗ ಅವರು ಯುಟಿಟಿ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ 15 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಆರನೇ ದಿನವಾದ ಶುಕ್ರವಾರ 32ರ ಘಟ್ಟದ ಪಂದ್ಯದಲ್ಲಿ ಸಿದ್ಧಾಂತ್ 11-6, 11-8, 12-10ರಿಂದ ಟಿಟಿಎಫ್‌ಐನ ಆರವ್ ಆಚಾರ್ಯ ಅವರನ್ನು ಮಣಿಸಿದರು.

ಅಥರ್ವ 11-8, 11-7, 11-3ರಿಂದ ತಮಿಳುನಾಡಿನ ಜಿಷ್ಣು ಬಾಲಾಜಿ ಅವರನ್ನು ಸೋಲಿಸಿ ಮುಂದಿನ ಸುತ್ತು ಪ್ರವೇಶಿಸಿದರು. ಆದರೆ, ಗೌರವ್ ಗೌಡ, ಅರ್ಣವ್ ನವೀನ್ ಮತ್ತು ಕೇಶವ ಶಶಾಂಕ್ ರಾವ್ ನಿರಾಸೆ ಮೂಡಿಸಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಹಿಯಾ ಸಿಂಗ್ 16ರ ಘಟ್ಟಕ್ಕೆ ಮುನ್ನಡೆದರು. ಅವರು 3–1ರಿಂದ ಪಶ್ಚಿಮ ಬಂಗಾಳದ ಆರುಷಿ ನಂದಿ ಅವರನ್ನು ಮಣಿಸಿದರು. ರಾಜ್ಯದ ಮತ್ತೊಬ್ಬ ಸ್ಪರ್ಧಿ ಕೈರಾ ಬಾಳಿಗ 1–3ರಿಂದ ದೆಹಲಿಯ ತುಸ್ತಿ ಸೂದ್ ಅವರಿಗೆ ಶರಣಾದರು.



ಕರ್ನಾಟಕದ ಸಿದ್ಧಾಂತ್ ಧಾರೀವಾಲ್ ಆಟದ ವೈಖರಿ —ಪ್ರಜಾವಾಣಿ ಚಿತ್ರ:ಬಿ.ಕೆ. ಜನಾರ್ದನ

13 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನ ಗುಂಪು ಹಂತದ ಪಂದ್ಯದಲ್ಲಿ ಕರ್ನಾಟಕದ ವಿಶ್ವಾಸ್ ಯಶ್, ಶ್ರೀರಾಮ್ ಕಿರಣ್, ಸಿದ್ಧಾಂತ್ ಮಂಜುನಾಥ್, ಅಂಕುಶ ಬಾಳಿಗಾ, ಮೋಹಿತ್ ಬೆಳವಾಡಿ ಮತ್ತು ಶರ್ವಿಲ್ ಕಾಂಬ್ಳೇಕರ್ ಅವರು ಜಯ ಸಾಧಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Airport Road

"30X40-CORNER 60`FEET`ROAD BIAPPA`approved E_Katha`before International Airport near`KIABD`& Bagalur Police_station 23`houses`built families_staying`in our`Layout 65`Lakhs only`genuine buyers. 9845286505"

Devanahalli

GATEWAY RESIDENCY BIAAPA AND RERA APPROVED PLOTS NEAR BANGALORE INTERNATIONAL AIRPORT. Price: 64 Lakhs onwards. Pay 25% Rest in EMI, Loans by SBI, HDFC. Contact: 97421-16699.

Electronic City

SALE KIADB 28,000sft Industrial/ Commercial Land at Electronic City Phase-2, Facing North & South with 150KV, VERNA DEVELOPERS, MG.Road, Bangalore. 9916310226/ 9620253180

Hennur

HENNUR MAIN Road Near By 40,300 Sqft Land For Sale Call: 9845623970/ 9739400838 Brokers Excuse

J P Nagar

JP.NAGAR 2ND Phase BDA 30x42, 45x60, Rs.30,000/- 40X60, 6BHK, New House Rs.11Cr Call-9845704509

Kanakapura Road

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

BDA SITE FOR SALE @ Kempegowda Layout 40x60, 50x80 Good Location Contact: 9845555666

Mysore Road

"BMRDA APPROVED 760 Sqft 60 Feet Road Corner Site Hejjala Railway Station 25 Lakhs. 9845178335"

Mysore

SITES_@MYSORE DTCP Facing State_Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD_Kote Road, 10Minutes to Airport,Ring Road, 15Minutes to Palace, 9845287802 /8050001571

Vishweshwariah Layout

SITE SALE 30x40, 40x60 East, Visweshawaryya Layout 6th Block, RHCS Layout 2nd_Stage 40x60 East. 8105688602.

"AVAILABLE/ WANTED Sites Vishveshwaraiah any Block Kempegowda Layout Good location, Genuine Buyers/ Sellers Contact: 7259675150"

DIRECT OWNER 40x60 N/F BDA Site Sale VISHVESWARAIAH LAYOUT BLOCK-1 near KHB Platinum Apartment. 9742681666

Mangaluru

SITES FOR SALE- MANGALORE KAVOOR MALLI LAYOUT 15 cents 10.25/ Cent, Hosabettu near Nilgiris 15 cents 8.30/ Cent. Call: 70222-66660

Kengeri Satellite Town

SITE FOR Sale site no. 4412, 4413, 30x40, 40 Feet Road, Nadaprabhu Kempegowda Layout 3rd Block, L.Sector South Face close to PRR Road, Price Rs. 7700/- sq.feet. Negotiable. 9980339217/ 9448709882.

Srirampura

30X50 SITE FOR SALE Srirampura 2 mins from metro 16000/sqft Ph:9739732433

Flat

Hennur



3 BHK LUXURY FLATS DREAMVILLE HOME
BBMP & PERA Approved
Hennur Main Road, Kothanur
8073977742 / 9731374392
promaxdreamvillehome.com

J P Nagar

PANDURANGANAGAR CLOSE to J.P.Nagar Dollars_Colony, prime location 3_BHK Ultra Premium`Flats, 2595`Sft., 2.60Cr. ready to occupy, Italian Marble flooring, 2`Car-parking, Forest`Facing Corner`Plot, Vastu Complient, Call-9845296068 /9740292904.

Agricultural Land

Outskirts

60KM FROM Bangalore 1.5 acr and_3acr Farmland For_Sale 59 Lakhs Contact: 8951240669

Out-Station

9LAKH PER_ACRE Agriculture, and Poultry and Solar Project Land For Sale 190km from Bangalore Call:8951240669

House

Jayanagar

JAYANAGAR 5TH Block Corner Site 65x35 Excellent location 40' Road, near_Metro Station 9,10,00,000/- -9731775536.

Kanakapura Road

HOUSE FOR Sale Corner 40x50 With 4 Shops & 2 Bedrooms Konanakunte Near Sowdhamini: 9845289422

Villas/Bunglows

Thanisandra

SALE: DUPLEX VILLA SOBACITY- ARISTOS F44. Near Thanisandra B'lore 3 BRs, 1Servent quarter, 2carpark, Fully furnished. Cost 5.25 Crs. Contact: 94483-51294.

REAL ESTATE BUYING

Commerical

Rajajinagar

WANTED: PURE Commercial Property Minimum 2 lakh Rent Coming Property. Location; Rajajinagar, Mahalakashmi Layout, Malleshawaram, Basaveshwaranagar, Vijaynagar and Chandra Layout: 7899570235

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40 40x60 Anjanapura BDA, Banashankari 6th_Stage, Narayan`Nagar BCCHS_Layout, Gubblala, Agent_Excuse. Call: 9008259222.

M G Road And Around

LOOKING AT residential Site or old House 40x60 or 60x50 surrounding M.G Road and Trinity metro station. preference to corner site corner side. WhatsApp only 99800-20666.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Building Contractors

BUILDIYA PROJECTS Will Develop Well-Equipped Residential, Commercial Buildings and Complexes Beautifully By Using Planning and Designed By Skilled Architects and Engineers 30-Years Of-Experience Contact:9148691980

RENTAL PROPERTIES

Accommodation Available

Commercial

AVAILABLE ON RENT 900 Sqft. Space for office/Godown near Dhobhi_Ghat, Rajajinagar, Bengaluru. Contact: 9449853323, 9845922704.

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

Farm House/Land/ Resorts

LAND FOR Rent 25000 Sqft Ullal Near 100ft Road SMVL 6th Block & 40×60 Site 100ft Road 2nd Block: 9980433004

JOB OPPORTUNITIES

Teachers/ Professors

TEACHER REQUIRED for Maths and as head Master for
High school contact Kenmore School Basavanagudi whatsapp 9901501185 and Email: kenmoreschool@gmail.com

BUSINESS

Business Offers

Business Centre

WANTED BUSINESS partner in Branded Rice & Dryfruit Business only interested person Call: 9000182908

PERSONAL

Change of Name

CHANGE OF NAME
I, **B.S. UMMAI SADIYA** D/o B.S.Suhil, residing at Biskuru Village, Kudur Hobli, Magadi Taluk, Ramanagara Dist., have changed my name to **UMME SADIYA B.S.** D/o B.S.Suhail, vide affidavit dated 23-09-2024, before notary Rajaiah, S.D. Halli, Ramanagara Dist. Henceforth I shall be called as **UMME SADIYA B.S.** only

WE, PUNEET N JUMANI & DEEPIKA M RAJPAL, both are residing at No. 271, 1st Block, 8th Cross, R.T Nagar, Bangalore-560032, we have changed our son's name from NIVAAN P JUMANI to AKAAY P JUMANI vide Affidavit dated 20-12-2024 sworn before advocate and notary V. Rajashekhara, Bangalore

I, ASHOK KUMAR S/o LATE. SUMER MAL. aged about 60 years, R/at No. 32, B.Lal Masjid street, Shivajinagar Bangalore- 560051, I declare that in present tax paid reciept, my father's name has been wrongly mentioned as SANCHILAL KEVAL CHAND INSTEAD OF SUMER MAL, vide affidavit dated 18/12/2024 sworn before V.Rajashekhara Advocate and Notary Bangalore.

CHANGE OF NAME
I, **JAGDISH UTTAMLAL DAMANIA** S/o Uttamlal Lallubhai Damania, residing at #605, RMV Clusters 2nd Phase, Block 4, Devinagar, LG Halli, Bengaluru-560094, declare that my name is **JAGDISHCHANDRA U DAMANIA** vide affidavit dated 19/12/2024, before notary Chandrakala, Bengaluru.

CHANGE OF NAME
I, **PHANI KUMAR K V** S/o Kovuru Nageshwara Rao, residing at #231, Flat 208,Hemanth Avocados, Horamavu Main Road, Horamavu, Bengaluru-560043, have changed my name to **KOVURU VENKATA PHANI KUMAR** vide affidavit dated 20-12-2024 was sworn before notary L. Gopalakrishna, Bengaluru.

CHANGE OF NAME
I, **Gurumurthy. R,** residing at #22, Mysore Road, Lakshmisagara, Manchanayakanahalli Post, Ramanagar Dist & Taluk-562109, Karnataka, have changed my name to **JAYANTH GOWDAA. R** Vide affadiavit dated 03.12.2024, before Notary B.M. Srivatsa, Ramanagara.

ನಿವೇಶನ ಅಕ್ರಮ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆಗಳನ್ನು ಬಳಸಿ ನಿವೇಶನ ಮಾರಾಟದಲ್ಲಿ ತೊಡಗಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಲಿಂಗರಾಜಪುರದ ಆರೀಫ್ ಉಲ್ಲಾ ಖಾನ್, ಜಿ.ವಾಸು ಹಾಗೂ ನಾಗೇಂದ್ರ ಬಂಧಿತರು. ಕಾಕ್ಸ್‌ಟೌನ್ ನಿವಾಸಿ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ವಿವಿಧ ದಾಖಲೆ ಪತ್ರಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳೆಲ್ಲರೂ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ದೂರುದಾರರ ಮಾವ ಈಶ್ವರ್ ಪ್ರಸಾದ್ ಅವರು, ಕೊತ್ತನೂರು ಗ್ರಾಮದ ಬಳಿಯಿರುವ ಅಂದಾಜು ₹8 ಕೋಟಿ ಮೌಲ್ಯದ 13 ಗುಂಟೆಯ ಜಮೀನಿನ ಮಾಲೀಕರಾಗಿದ್ದರು. ಅನಾರೋಗ್ಯದಿಂದ ಅವರು ಎರಡು ವರ್ಷಗಳ ಹಿಂದೆ ಮೃತರಾಗಿದ್ದರು. ಇದನ್ನು ಅರಿತ ಆರೋಪಿಗಳು ಮೃತರ ಹೆಸರಿನಲ್ಲಿ ನಕಲಿ ಜಿಪಿಎ ಮಾಡಿಸಿಕೊಂಡಿದ್ದರು. ಅಲ್ಲದೇ ಮೃತ ವ್ಯಕ್ತಿ, ಆರೋಪಿ ವಾಸು ಹೆಸರಿಗೆ ಜಮೀನು ಮಾರಾಟ ಮಾಡಿರುವ ರೀತಿ ಸೇಲ್ ಡೀಡ್ ಮಾಡಿಸಿಕೊಂಡಿದ್ದರು ಎಂಬುದು ತನಿಖೆ ವೇಳೆ ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

ಪಾವಗಡ: ವಿಷ ಸೇವಿಸಿ ಇಬ್ಬರು ಆತ್ಮಹತ್ಯೆ

ಪಾವಗಡ: ಪಟ್ಟಣದ ಚಳ್ಳಕೆರೆ ರಸ್ತೆ ಬಳಿ ಜಮೀನಿನಲ್ಲಿ ಶುಕ್ರವಾರ ಇಬ್ಬರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತರನ್ನು ತಾಲ್ಲೂಕಿನ ಆಂಧ್ರ ಕುಂದುರ್ಪಿ ಮಂಡಲಂ ವೆಂಕಟಂಪಲ್ಲಿ ಗೋವಿಂದರೆಡ್ಡಿ (40), ತಮಿಳುನಾಡಿನ ಹೊಸೂರು ಬಳಿಯ ಬಾಗಲೂರಿನ ಭಾಗ್ಯಮ್ಮ (32) ಎಂದು ಗುರುತಿಸಲಾಗಿದೆ.

ಸಹೋದ್ಯೋಗಿಗಳಾಗಿದ್ದ ಇವರಿಬ್ಬರು ಪಟ್ಟಣದ ಖಾಸಗಿ ವಸತಿ ಗೃಹದಲ್ಲಿ ಹಲವು ದಿನಗಳಿಂದ ತಂಗಿದ್ದರು. ಶುಕ್ರವಾರ ಬೆಳಿಗ್ಗೆ ವಿಷ ಸೇವಿಸಿದ್ದಾರೆ. ಭಾಗ್ಯಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗೋವಿಂದರೆಡ್ಡಿ ತಾಲ್ಲೂಕು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕೌಟುಂಬಿಕ ವಿಚಾರಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಗೋವಿಂದರೆಡ್ಡಿ ಆಸ್ಪತ್ರೆಯಲ್ಲಿ ತಿಳಿಸಿದ್ದಾರೆ.





ಮಂಡ್ಯದಲ್ಲಿ ಶುಕ್ರವಾರ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಮೆರವಣಿಗೆಯಲ್ಲಿ ಮಹಿಳಾ ಸಮಿತಿ ಸದಸ್ಯರು ಪುಸ್ತಕ ಹಾಗೂ ಕನ್ನಡ ಬಾವುಟವುಳ್ಳ ಬಿದಿರಿನ ಬುಟ್ಟಿಯೊಂದಿಗೆ ನಡೆದು ಗಮನ ಸೆಳೆದರು (ಎಡಚಿತ್ರ) ನುಡಿಜಾತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಸೇರಿದ್ದ ಜನಸ್ತೋಮ

ದ್ವೇಷ ಬಿತ್ತಲು ಬಂದವರನ್ನು ಓಡಿಸಿದ ಮಂಡ್ಯದ ಜನ– ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ

ನುಡಿ ಮೂಲಕ ವೈಚಾರಿಕತೆಯ 'ಡಿಂಡಿಮ'

• ವಿಕ್ರಂ ಕಾಂತಿಕೆರೆ

ಸಕ್ಕರೆ ನಾಡಿನ ಜನರ ಗೋವಿನ ಹಾಡಿನಿಂದ, ಕುವೆಂಪು ಅವರ ಕನ್ನಡ ಡಿಂಡಿಮದವರೆಗೆ ನುಡಿಯ ಸೊಬಗನ್ನು ಸ್ಮರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ತಮ್ಮ ಉದ್ಘಾಟನಾ ಭಾಷಣವನ್ನು ವೈಚಾರಿಕ ಕ್ರಾಂತಿಯ ಪ್ರತಿಪಾದನೆಯಿಂದ ಸಂಪನ್ನಗೊಳಿಸಿದರು.

ಹೊಂಬಾಳೆಯನ್ನು ಬಿಡಿಸುವ ಮೂಲಕ, ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿದ ಅವರು, 'ದ್ವೇಷ ಬಿತ್ತಲು ಬಂದವರನ್ನು ಓಡಿಸಿರುವ ಇಲ್ಲಿನ ಜನ, ಧ್ವಜ ಸತ್ಯಾಗ್ರಹದ ಮೂಲಕ ಪೂರ್ವಿಕರು ಬಿತ್ತಿದ್ದ ಜಾತ್ಯತೀತ ಗುಣ ತಮ್ಮಲ್ಲಿ ಇನ್ನೂ ಉಳಿದಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಎಂದು ಕೊಂಡಾಡಿದರು. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಈ ಹಿಂದೆ ನಾಲ್ಕು ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ್ದು ಇದು ಐದನೆಯದಾಗಿದೆ.

'ರಾಜ್ಯಕ್ಕೆ ತೆರಿಗೆ ಮೊತ್ತ ಹಂಚಿಕೆಯಲ್ಲಿ ಅನ್ಯಾಯವಾಗುತ್ತಿದೆ' ಮತ್ತು 'ರಾಷ್ಟ್ರಭಾಷೆಯ ಹೆಸರಿನಲ್ಲಿ ಹಿಂದಿ ಹೇರಿಕೆ ಆಗುತ್ತಿದೆ' ಎಂಬ ಅವರ ಅಸಮಾಧಾನವು ಸಮ್ಮೇಳನ ವೇದಿಕೆಯಲ್ಲೂ ವ್ಯಕ್ತವಾಯಿತು.

'ಸಿದ್ಧಾಂತಕ್ಕಿಂತ ಬದುಕುವ ವಿಧಾನ ಮುಖ್ಯವಾಗಬೇಕು. ಜನಪರ ನಿಲುವು ಯಾವುದು, ಜನವಿರೋಧಿ ಯಾವುದೆಂಬುದನ್ನು ತೂಗಿನೋಡಲು ಸಾಹಿತ್ಯಕ್ಕೆ ಸಾಧ್ಯವಾಗಬೇಕು' ಎಂದು ಪ್ರತಿಪಾದಿಸಿದರು.

'ಮಂಡ್ಯ, ಅಪ್ಪಟ ಕನ್ನಡದ ನೆಲ. ದೇಶದ ಯಾವುದೇ ಭಾಗದಿಂದ ಬಂದವರಿಗೂ ಕನ್ನಡ ಕಲಿಸುವ ಗಟ್ಟಿತನವಿದೆ. ಕವಿರಾಜಮಾರ್ಗಕಾರ ಕಾವೇರಿಯಿಂದಮಾ ಗೋದಾವರಿವರ-ಮಿರ್ಪ ನಾಡು ಎಂದು ಉಲ್ಲೇಖಿಸುವಾಗ ಮಂಡ್ಯವನ್ನು ಮರೆತಿರಲು ಸಾಧ್ಯವಿಲ್ಲ. ಹಲವು ಪ್ರಕಾರದ ಸಾಹಿತ್ಯ ರಚನೆಯಾದ ನೆಲದಲ್ಲಿ ವೈಚಾರಿಕತೆ ಮೂಲ ಸ್ತೋತ್ರವಾಗಿ ಹರಿದಿದೆ' ಎಂದು ಬಣ್ಣಿಸಿದರು.

ಟಿಪ್ಪು, ಹೈದರಾಲಿ ಮೈಸೂರಿನ ಮಹಾರಾಜರಿಂದ ಈಚೆಗೆ ನಿಧನರಾದ ಎಸ್.ಎಂ.ಕೃಷ್ಣ ಅವರನ್ನು ಪ್ರಸ್ತಾಪಿಸಿ, 'ಇವರೆಲ್ಲರೂ ನಾಡಿನ ಪರಂಪರೆಯನ್ನು ಎತ್ತಿಹಿಡಿದಿದ್ದಾರೆ, ನಾಡಿನ ಅಸ್ಮಿತೆಯನ್ನು ಉಳಿಸುವ ಅಗತ್ಯ ಈಗ ಹೆಚ್ಚಾಗಿದ್ದು, ನುಡಿಯು ಬಿದ್ದುಹೋದರೆ ಮತ್ತು ಭಾಷೆಗೇಡಿತನ ತೋರಿಸಿದರೆ ಭವಿಷ್ಯದಲ್ಲಿ ತೊಂದರೆಯಾಗಲಿದೆ. ಭಾಷೆಯ ಅಳಿವು ಭಾಷಾಸಮುದಾಯದ ಅಳಿವಿಗೆ ಕಾರಣವಾಗಲಿದೆ. ಆದ್ದರಿಂದ ಭಾಷೆಯನ್ನು ಬಳಸುವ ಮೂಲಕವೇ ಉಳಿಸಬೇಕು' ಎಂದರು.

'ಕನ್ನಡ ನೆಲದಲ್ಲಿ ಕನ್ನಡವೇ ಸಾರ್ವಭೌಮ. ಹೀಗಾಗಿ ಕನ್ನಡದ ಉಳಿವಿಗೆ ಸರ್ಕಾರ ಬದ್ಧವಾಗಿದೆ. ಹಿಂದಿನ ಅವಧಿಯಲ್ಲಿ ಸರ್ಕಾರ ಕನ್ನಡದ ಕೆಲಸಗಳಿಗಾಗಿ ₹1,161 ಕೋಟಿ ಮೀಸಲಿಟ್ಟಿದ್ದು, ಈ ಬಾರಿ ₹506 ಕೋಟಿ ಬಿಡುಗಡೆ ಮಾಡಲಾಗಿದೆ. ಯಾವುದೇ ವಿಷಯ ಕಲಿತರೂ ಮಾತೃಭಾಷೆಯೇ ಹೃದಯದ ಭಾಷೆಯಾಗಿರುತ್ತದೆ. ಶಿಕ್ಷಣದಲ್ಲಿ ಕರುಣೆ ಮತ್ತು ಕೌಶಲಕ್ಕೆ ಆದ್ಯತೆ ನೀಡಿದ ಬುದ್ಧ, ಗಾಂಧೀಜಿಯವರ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕಾಗಿದೆ ಎಂದರು.

ಜನರ ನೋವು ಬಿಂಬಿಸಲು ಸಲಹೆ

'ಸಾಹಿತಿಗಳು ಜನರ ನೋವು–ನಲಿವನ್ನು ಅರ್ಥಮಾಡಿಕೊಳ್ಳಬೇಕು. ವಿಜ್ಞಾನ, ತಂತ್ರಜ್ಞಾನ ವಿಷಯಗಳೂ ಸಾಹಿತ್ಯದಲ್ಲಿ ಬರಬೇಕು. ಅಪಾಯದ ಬಗ್ಗೆ ಎಚ್ಚರಿಸುವ ಕೆಲಸವೂ ಆಗಬೇಕು. ಖಡ್ಗವಾಗಲಿ ಕಾವ್ಯ ಎಂಬ ಮಾತಿನ ಮರ್ಮವನ್ನು ತಿಳಿದುಕೊಳ್ಳುವ ಕಾಲ ಬಂದಿದೆ' ಎಂದು ಸಿದ್ದರಾಮಯ್ಯ ಹೇಳಿದರು.

'ವಿಚಾರ ಶಕ್ತಿ ಕುಗ್ಗಿಹೋಗಿದ್ದು ಯಂತ್ರನಾಗರಿಕತೆ ಬೆಳೆದಿದೆ. ಅದನ್ನು ಸರಿಪಡಿಸಲು ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿ ಬೆಳೆಯಬೇಕು. ಬಸವಾದಿ ಶರಣರ ಆಶಯವನ್ನೇ ಒಳಗೊಂಡ ಕುವೆಂಪು ಅವರ ಗುಡಿಚರ್ಚು ಮಸೀದಿಗಳನು ಬಿಟ್ಟುಬನ್ನಿ ಎಂಬ ಕರೆಯಂತೆ ಪ್ರಜಾಸತ್ತೆ ಮತ್ತೆ ಸಕ್ರಿಯವಾಗಬೇಕು ಎಂದು ತಮ್ಮ ಭಾಷಣವನ್ನು ಮುಗಿಸಿದರು.

ಸಮ್ಮೇಳನಾಧ್ಯಕ್ಷರ 21 ಹಕ್ಕೊತ್ತಾಯ

- ಒಂದರಿಂದ ಹತ್ತನೆಯ ತರಗತಿಯವರೆಗೆ ಬೋಧನೆಯಲ್ಲಿ ಕನ್ನಡ ಮಾಧ್ಯಮವೇ ಕಡ್ಡಾಯವಾಗಬೇಕು. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಸರ್ಕಾರ ತೆರೆಯುವುದನ್ನಾಗಲಿ, ಖಾಸಗಿ ಶಾಲೆಗಳಿಗೆ ಅನುಮತಿ ಕೊಡುವುದನ್ನಾಗಲೀ ಕೂಡಲೇ ನಿಲ್ಲಿಸಬೇಕು.
- ಅಗತ್ಯವೆನಿಸಿರುವ ಇಂಗ್ಲಿಷ್ ಕಲಿಕೆಗೆ ಪ್ರತ್ಯೇಕ ವ್ಯವಸ್ಥೆ ಮಾಡಿ, ಬೋಧನೆಗೆ ತರಬೇತಿ ಪಡೆದ ಶಿಕ್ಷಕರನ್ನು ನೇಮಿಸಬೇಕು ಮತ್ತು ಗ್ರಾಮೀಣ ಭಾಗದ ಕನ್ನಡ ಶಾಲೆಗಳನ್ನು, ಎಲ್ಲ ಸೌಲಭ್ಯಗಳಿಂದ ಪೂರ್ಣವಾಗಿ ಸಜ್ಜುಗೊಳಿಸಬೇಕು. ರಾಜ್ಯದ ಆಯವ್ಯಯದಲ್ಲಿ ಕನಿಷ್ಠ ಶೇ 15ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಬೇಕು.
- ಅನೇಕ ದಶಕಗಳಿಂದ ನನೆಗುದಿಗೆ ಬಿದ್ದಿರುವ ಸರೋಜಿನ ಮಹಿಷಿ ವರದಿಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು. ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಬೇಕು. ಸಾರ್ವಜನಿಕವಿರಲಿ, ಖಾಸಗಿಯಿರಲಿ ಉದ್ಯೋಗಾವಕಾಶಗಳಲ್ಲಿ ವಿಶೇಷ ಅರ್ಹತೆಯ ಉನ್ನತ ಹುದ್ದೆಗಳ ಹೊರತಾಗಿ ಸಿ ಮತ್ತು ಡಿ ವರ್ಗದ ಹುದ್ದೆಗಳನ್ನು ಪೂರ್ಣವಾಗಿ ಕನ್ನಡಿಗರಿಗೇ ಮೀಸಲಿಡಬೇಕು.
- ಕನ್ನಡ ವಿಶ್ವವಿದ್ಯಾಲಯ ಮತ್ತು ಜಾನಪದ ವಿ.ವಿಗಳು ಅನುಭವಿಸುತ್ತಿರುವ ಹಣಕಾಸು ಮತ್ತು ಬೋಧನಾ ಸಿಬ್ಬಂದಿ ಕೊರತೆಯನ್ನು ನಿವಾರಿಸಬೇಕು.
- ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಸ್ವತಂತ್ರ ಸ್ವಾಯತ್ತ ಕೇಂದ್ರವನ್ನಾಗಿ ಬೆಳೆಸಲು ಮತ್ತು ಕೇಂದ್ರದ ನೆರವನ್ನು ಪಡೆಯಲು ಅಗತ್ಯ ವ್ಯವಸ್ಥೆ ಮಾಡಬೇಕು.
- ಅಪಾರ ಸಂಭಾವ್ಯ ಸಾಮರ್ಥ್ಯವಿರುವ ಪ್ರವಾಸೋದ್ಯಮವನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದಷ್ಟೇ ಅಲ್ಲದೆ ಆದಾಯ ಮತ್ತು ಉದ್ಯೋಗಾವಕಾಶ ದೃಷ್ಟಿಯಿಂದಲೂ ವಿಸ್ತರಿಸಿ ಅಭಿವೃದ್ಧಿಗೊಳಿಸಬೇಕು.
- ಕೈಗಾರಿಕೋದ್ಯಮಗಳ ಸ್ಥಾಪನೆ ಎಲ್ಲ ಜಿಲ್ಲೆಗಳಿಗೂ ಹಂಚಿಕೆಯಾಗಬೇಕು. ಯಾವುದೇ ಉದ್ಯಮವಿರಲಿ, ಕನ್ನಡಿಗರಿಗೆ ಉದ್ಯೋಗಾವಕಾಶದ ಕಟ್ಟುನಿಟ್ಟಿನ ಷರತ್ತು ವಿಧಿಸಿ, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು.
- ಸರ್ಕಾರದ ಸಚಿವಾಲಯ ಕಚೇರಿಗಳ ಹೊರತಾಗಿ, ಉಳಿದ ಇಲಾಖೆಗಳ ನಿರ್ದೇಶನಾಲಯ ಕಚೇರಿಗಳನ್ನು ವಿವಿಧ ಜಿಲ್ಲಾ ಕೇಂದ್ರಗಳಿಗೆ ವರ್ಗಾಯಿಸಿ ಬೆಂಗಳೂರಿನ ಒತ್ತಡವನ್ನು ತಪ್ಪಿಸಬೇಕು.
- ಶಿಕ್ಷಣ ಮಾಧ್ಯಮ, ಅಂತಾರಾಜ್ಯ ಗಡಿ, ಜಲ ಮತ್ತು ವಲಸೆ ಸಮಸ್ಯೆ ಪರಿಹರಿಸಲು ರಾಷ್ಟ್ರೀಯ ನೀತಿ ರೂಪಿಸುವಂತೆ ಕೇಂದ್ರವನ್ನು ಒತ್ತಾಯಿಸಬೇಕು.
- ಪ್ರಾದೇಶಿಕ ಅಸಮಾನತೆ ಸರಿಪಡಿಸಲು ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಭಾಗದ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸಬೇಕು.
- ಬಸವಣ್ಣನವರನ್ನು ರಾಜ್ಯದ 'ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿರುವ ಮತ್ತು ಬಸವ ಕಲ್ಯಾಣದಲ್ಲಿ ನೂತನ ಅನುಭವ ಮಂಟಪವನ್ನು ನಿರ್ಮಿಸುತ್ತಿರುವ ರಾಜ್ಯ ಸರ್ಕಾರ, ಹನ್ನೆರಡನೆಯ ಶತಮಾನದ ಶರಣರ ಕ್ಷೇತ್ರಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಕ್ಕಾಗಿ ಸ್ವಾಯತ್ತ ಪ್ರಾಧಿಕಾರ ರಚಿಸಬೇಕು. ಈಗಾಗಲೇ ಆಶ್ವಾಸನೆ ನೀಡಿರುವಂತೆ ಮುಂದಿನ ಶೈಕ್ಷಣಿಕ ವರ್ಷದಿಂದ ವಚನ ವಿಶ್ವವಿದ್ಯಾಲಯವನ್ನು ಆರಂಭಿಸಬೇಕು.
- ರಾಜ್ಯದ ಎಲ್ಲ ಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳು, ಕಚೇರಿಗಳು, ಅಂಗಡಿ ಮುಂಗಟ್ಟುಗಳ ನಾಮಫಲಕಗಳು ಕನ್ನಡದಲ್ಲಿರುವುದು ಕಡ್ಡಾಯವಾಗಬೇಕು.
- ಪರಿಸರದ, ವಿಶೇಷವಾಗಿ, ಪಶ್ಚಿಮಘಟ್ಟಗಳ ರಕ್ಷಣೆಗೆ ಕಟ್ಟುನಿಟ್ಟಾದ ಕ್ರಮಕೈಗೊಳ್ಳಬೇಕು. ಅಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬಾರದು.
- ಗ್ರಂಥಾಲಯ ಪೋಷಣೆಗೆ ಪೂರ್ಣ ಗಮನಕೊಡಬೇಕು. ಗ್ರಂಥಗಳ ಸಗಟು ಖರೀದಿ ಪ್ರತಿ ವರ್ಷ ತಪ್ಪದೇ ನಡೆಯಬೇಕು. ಗ್ರಂಥಾಲಯ ತೆರಿಗೆಯಿಂದ ಸಂಗ್ರಹವಾದ ಹಣವನ್ನು ಗ್ರಂಥಾಲಯಗಳ ಅಭಿವೃದ್ಧಿಗೇ ಬಳಸಬೇಕು.
- ಹಿರಿಯ ಸಾಹಿತಿಗಳ ಸಮಗ್ರ ಸಾಹಿತ್ಯ ಪ್ರಕಟಣೆ ಉತ್ತಮ ಯೋಜನೆಯಾಗಿದ್ದು, ಅದನ್ನು ಮುಂದುವರಿಸಿಕೊಂಡು ಹೋಗಬೇಕು.
- ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು. ಕನ್ನಡ ಲಿಪಿಯನ್ನು ಆಧುನಿಕ ತಂತ್ರ ವಿಧಾನಗಳಿಗೆ ಹೊಂದಿಸುವ ಕೆಲಸ ತ್ವರಿತವಾಗಿ ನಡೆಯಬೇಕು. ಯಾಂತ್ರಿಕ ಬುದ್ಧಿಮತ್ತೆ ತಂತ್ರದ ಬಳಕೆ ಹೆಚ್ಚಾಗಬೇಕು.
- ಸಾಹಿತ್ಯ-ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಧನ ಸಹಾಯ ದೊರಕಿಸಬೇಕು.
- ಪ್ರಾದೇಶಿಕ ಭಾಷೆಗಳ ಮೇಲೆ ಹಿಂದಿ ಹೇರಿಕೆಗೆ ಅವಕಾಶ ಕೊಡಬಾರದು.
- ಕನ್ನಡದ ಕೃತಿಗಳನ್ನು ಅನ್ಯಭಾಷೆಗೆ ಅನುವಾದಿಸಿ ಪ್ರಕಟಿಸುವ ಕೆಲಸ ದೊಡ್ಡ ಪ್ರಮಾಣದಲ್ಲಿ ನಡೆಯಬೇಕು. ಅದಕ್ಕಾಗಿ ಭಾಷಾ ಪ್ರಾಧಿಕಾರಕ್ಕೆ ಅಗತ್ಯ ನೆರವು ಒದಗಿಸಬೇಕು.
- ಕನ್ನಡ ಸಾಹಿತ್ಯ ಪರಿಷತ್ತು ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ಅದು ನಡೆಸುವ ಇಂತಹ ಸಮ್ಮೇಳನಗಳಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ವಿಳಂಬ ಮಾಡದೆ ಅನುಷ್ಠಾನಗೊಳಿಸಬೇಕು.
- ಕನ್ನಡ ಸಾಹಿತ್ಯ ಪರಿಷತ್ತು ಶಾಲಾ ಶಿಕ್ಷಕರಿಗೆ ಸಾಹಿತ್ಯ-ಸಂಸ್ಕೃತಿಗಳ ಬಗೆಗೆ ನಿಯತಕಾಲಿಕ ಶಿಬಿರಗಳನ್ನು ನಡೆಸಿ, ಅವರಲ್ಲಿ ಸಾಹಿತ್ಯದ ಅಧ್ಯಯನಾಸಕ್ತಿ ಬೆಳೆಸಬೇಕು.

'ನಾವೆಲ್ಲ ಒಂದು' ಎಂಬ ಭಾವೈಕ್ಯ ಸಾರಿದ 157 ಕಲಾತಂಡ: ರಥದಲ್ಲಿ ಕಂಗೊಳಿಸಿದ ಗೊರುಚ

ಕಾವೇರಿ ನಾಡಲ್ಲಿ ಕನ್ನಡದ ತೇರು

• ಸಿದ್ದು ಆರ್.ಜಿ.ಹಳ್ಳಿ

'ಅಚ್ಚಗನ್ನಡದ ನೆಲೆ ಮಂಡ್ಯ ಜಿಲ್ಲೆ'ಯಲ್ಲಿ 87ನೇ ನುಡಿಜಾತ್ರೆಯ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಕನ್ನಡದ ಕಂಪು ಮತ್ತು ಸಾಂಸ್ಕೃತಿಕ ಸೌರಭವನ್ನು ಪಸರಿಸಿತು. ಕಾವೇರಿ ನಾಡಲ್ಲಿ ಕನ್ನಡ ಬಾವುಟವನ್ನು ಗಗನಕ್ಕೇರಿಸುತ್ತಾ, ಭಾಷಾಭಿಮಾನವನ್ನು ಬಡಿದೆಬ್ಬಿಸಿತು.

'ಸಕ್ಕರೆ ನಗರ'ದಲ್ಲಿ ಶುಕ್ರವಾರ ನಡೆದ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪನವರ ಮೆರವಣಿಗೆ 'ಕನ್ನಡದ ಸಿಹಿ'ಯನ್ನು ಸಾಹಿತ್ಯಾಸಕ್ತರಿಗೆ ಹಂಚಿತು. ವಿವಿಧ ಜಿಲ್ಲೆ, ಧರ್ಮ ಹಾಗೂ ವಿಭಿನ್ನ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಪರಿಸರದಿಂದ ಬಂದಿದ್ದ 157 ಕಲಾತಂಡಗಳ 2250 ಕಲಾವಿದರು 'ನಾವೆಲ್ಲ ಕನ್ನಡಿಗರು' ಎಂಬ ಭಾವೈಕ್ಯವನ್ನು ಮೂಡಿಸಿದರು. ಕುವೆಂಪು ಹೇಳುವಂತೆ 'ಕನ್ನಡ ಬರೀ ನುಡಿಯಲ್ಲ, ಮಂತ್ರ ಶಕ್ತಿ' ಎಂಬುದನ್ನು ಮೆರವಣಿಗೆ ನಿರೂಪಿಸಿತು.

ವಿಶೇಷ ರಥ: ಸಮ್ಮೇಳನಾಧ್ಯಕ್ಷರಿಗಾಗಿ ನಿರ್ಮಿಸಿದ್ದ 'ಅರಮನೆ ದರ್ಬಾರ್ ಮಾದರಿಯ ಸಿಂಹಾಸನ'ವಿದ್ದ ವಿಶೇಷ ರಥದಲ್ಲಿ ಕುಳಿತ ಗೊರುಚ ಅವರು ಮೆರವಣಿಗೆಯುದ್ದಕ್ಕೂ ಜನರಿಗೆ ಕೈ ಮುಗಿಯುತ್ತಾ, ಮಕ್ಕಳನ್ನು ಕಂಡಾಗ ಕಿರುನಗೆ ಬೀರಿದರು. ಶ್ವೇತವರ್ಣದ ಜುಬ್ಬಾ ಮತ್ತು ಕಪ್ಪು ಕನ್ನಡಕದಲ್ಲಿ ಕಂಗೊಳಿಸಿದರು.

ಬೆಳಿಗ್ಗೆ 8.25ಕ್ಕೆ ನಗರದ ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗದಿಂದ ಆರಂಭಗೊಂಡ ಮೆರವಣಿಗೆಯು 6 ಕಿ.ಮೀ. ಸಾಗಿ ಸಮ್ಮೇಳನದ ವೇದಿಕೆಯನ್ನು ಬೆಳಿಗ್ಗೆ 11.30ಕ್ಕೆ ತಲುಪಿತು.

ನಂದಿಧ್ವಜ, ಚಕ್ಕಡಿಗಾಡಿ, ಕೊಂಬು ಕಹಳೆ, ನಾದಸ್ವರ, ಮಹಿಳಾ ವೀರಗಾಸೆ, ಕೀಲುಕುದುರೆ, ಜಗ್ಗಲಿಗೆ ಮೇಳ, ನಗಾರಿ, ಖಾಸಬೇಡರ ಪಡೆ, ಹಗಲುವೇಷ, ಕೋಲಾಟ, ಚಿಟ್ಟಲಗಿ ಮೇಳ, ದೊಣ್ಣೆ ವರಸೆ, ಕರಡಿ ಮಜಲು, ಪೂಜಾ ಕುಣಿತ, ಹಾಲಕ್ಕಿ ಸುಗ್ಗಿ ಕುಣಿತ, ಮಹಿಳಾ ಡೊಳ್ಳು ಕುಣಿತ ಸೇರಿದಂತೆ 157 ಕಲಾ ಪ್ರಕಾರಗಳು ಜನರಿಗೆ ಸಾಂಸ್ಕೃತಿಕ ರಸದೌತಣ ನೀಡಿದವು.

ತಮಿಳುನಾಡಿನ ಕರಗಂ, ಪಂಜಾಬಿನ ಭಾಂಗ್ರಾ ನೃತ್ಯ, ಒಡಿಶಾದ ಸಂಬಲ್ಪುರಿ ಮತ್ತು ಧಾಪ್ ಬುಡಕಟ್ಟು ನೃತ್ಯ, ಮಧ್ಯಪ್ರದೇಶದ ಬಧಾಯಿ ಮತ್ತು ನೋರಾ ಕಲಾಪ್ರದರ್ಶನಗಳು ತಮ್ಮ ಸಂಸ್ಕೃತಿಯನ್ನು ಬಿಂಬಿಸಿದವು.

ಸಮ್ಮೇಳನಾಧ್ಯಕ್ಷರ ಭಾವಚಿತ್ರಗಳು: 87 ಸಮ್ಮೇಳನಾಧ್ಯಕ್ಷರ ಭಾವಚಿತ್ರಗಳನ್ನು ಹೊತ್ತ 87 ಆಟೊಗಳು ಜನರನ್ನು ಆಕರ್ಷಿಸಿದವು. 20 ಎತ್ತಿನಗಾಡಿಗಳು ಜಿಲ್ಲೆಯ ಕೃಷಿ ಸಂಸ್ಕೃತಿಯನ್ನು ಬಿಂಬಿಸಿದವು. 400ಕ್ಕೂ ಹೆಚ್ಚು ಮಹಿಳೆಯರು ಪೂರ್ಣಕುಂಭ ಹೊತ್ತು ಸಾಗಿದರು. ಮಹಿಳಾ ಸಮಿತಿಯ 100 ಸದಸ್ಯರು ಪುಸ್ತಕ ಮತ್ತು ಕನ್ನಡ ಬಾವುಟ ಒಳಗೊಂಡ ಬಿದಿರಿನ ಬುಟ್ಟಿಯನ್ನು ಹಿಡಿದು 'ಪುಸ್ತಕ ಮತ್ತು ಜಾನಪದ ಸಂಸ್ಕೃತಿ'ಯನ್ನು ಪಸರಿಸಿದರು.

ಸಂವಿಧಾನ ಪೀಠಿಕೆ ಸ್ತಬ್ಧಚಿತ್ರ: ಮಳವಳ್ಳಿ ತಾಲ್ಲೂಕಿನ ಸಂವಿಧಾನ ಪೀಠಿಕೆ ಮಾದರಿಯ ಸ್ತಬ್ಧಚಿತ್ರ ಜನರ ಗಮನಸೆಳೆಯಿತು. ಅಶ್ವದಳ, ಸ್ಕೌಟ್ಸ್ ಗೈಡ್ಸ್, ಭಾರತ್ ಸೇವಾದಳದವರು ಶಿಸ್ತಿನ ಹೆಜ್ಜೆ ಹಾಕಿದರು. ಕೈಯಲ್ಲಿ ಬಿಚ್ಚುಗತ್ತಿ ಹಿಡಿದಿದ್ದ ವೀರಗಾಸೆ ಕಲಾವಿದರ ವೇಷಭೂಷಣ, ಗಾರುಡಿ ಗೊಂಬೆ, ಯಕ್ಷಗಾನ ಗೊಂಬೆ, ಬೆಂಕಿ ಭರಾಟೆ, ದೊಣ್ಣೆ ವರಸೆ, ಹುಲಿ ವೇಷಧಾರಿಗಳು ಹಾಗೂ ವಾನರ ಸೇನೆ ಕಲಾತಂಡಗಳು ಮಕ್ಕಳ ಮನ ಗೆಲ್ಲುವಲ್ಲಿ ಯಶಸ್ವಿಯಾದವು.

ಸಮ್ಮೇಳನಾಧ್ಯಕ್ಷರ ರಥ ಸುರಕ್ಷಿತ ಮತ್ತು ಸುಗಮವಾಗಿ ಸಾಗಲು ಬಿಗಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು.



ಮಂಡ್ಯದಲ್ಲಿ ಶುಕ್ರವಾರ ಸಮ್ಮೇಳನದ ಉದ್ಘಾಟನೆಗೂ ಮುನ್ನ ಸಮ್ಮೇಳನದ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಅವರ ಮೆರವಣಿಗೆಯು ಪೊಲೀಸ್ ಬ್ಯಾಂಡ್ ಮತ್ತು ಕಲಾತಂಡಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು ಪ್ರಜಾವಾಣಿ ಚಿತ್ರ; ಅನೂಪ್ ಟಿ ರಾಘ

ಪೊಲೀಸ್ ಬ್ಯಾಂಡ್ ಮೆರುಗು

ಸಮ್ಮೇಳನದ ಇತಿಹಾಸದಲ್ಲಿ ಮೊದಲ ಬಾರಿಗೆ, ಮಂಡ್ಯ ನುಡಿಜಾತ್ರೆಯಲ್ಲಿ ಮೈಸೂರು ಪೊಲೀಸ್ ಬ್ಯಾಂಡ್ ಭಾಗವಹಿಸಿತ್ತು. ಡಿ.ನಾಗರಾಜು ನೇತೃತ್ವದ 30 ಕಲಾವಿದರು ಸುಮಧುರ ಕನ್ನಡ ಗೀತೆಗಳನ್ನು ನುಡಿಸಿ ಜನರ ಮನಗೆದ್ದರು.

ಮಂಡ್ಯ ಮಸೀದಿ ಮುಸ್ಲಿಂ ಬ್ಲಾಕ್ ತಂಡದ 30 ಸದಸ್ಯರು ಕನ್ನಡ ಬಾವುಟವನ್ನು ಹಿಡಿದು, ಕನ್ನಡಪರ ಘೋಷಣೆಗಳನ್ನು ಮೊಳಗಿಸಿ 'ನಾವೆಲ್ಲ ಕನ್ನಡಿಗರು' ಎಂಬ ಭಾವೈಕ್ಯ ಸಂದೇಶ ಸಾರಿದರು.

ಮೆರವಣಿಗೆಗೆ ಪ್ರಮೋದಾದೇವಿ ಗೈರು



ಪ್ರಮೋದಾ ದೇವಿ

ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಚಾಲನೆ ನೀಡಬೇಕಿದ್ದ ಮೈಸೂರು ಅರಮನೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಗೈರು ಹಾಜರಾಗಿದ್ದರು. ಹೀಗಾಗಿ ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಮ್ಮೇಳನಾಧ್ಯಕ್ಷರನ್ನು ವಿಶೇಷ ರಥಕ್ಕೆ ಬರಮಾಡಿಕೊಂಡು, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು. ನಂತರ ರಥಕ್ಕೆ ಚಾಲನೆ ನೀಡಿ ಶುಭ ಕೋರಿದರು.

ಬೆಳಿಗ್ಗೆ 7 ಗಂಟೆಗೆ ಆರಂಭವಾಗಬೇಕಿದ್ದ ಮೆರವಣಿಗೆಗೆ ಬೆಳಿಗ್ಗೆ 8.25ಕ್ಕೆ ಚಾಲನೆ ದೊರಕಿತು. ಅಂದರೆ ಒಂದೂವರೆ ಗಂಟೆ ತಡವಾಗಿ ಆರಂಭವಾಯಿತು. 6 ಕಿ.ಮೀ. ಉದ್ದದ ಮೆರವಣಿಗೆಯಲ್ಲಿ ಭಾಗಿಯಾಗಿದ್ದ ಕಲಾತಂಡಗಳ ನಡುವೆ ಅಂತರ ಹೆಚ್ಚಿದ್ದರಿಂದ ಮೆರವಣಿಗೆಯ ಸೊಬಗು ಕೊಂಚ ಕಳೆಗುಂದಿತು. ರಸ್ತೆಯ ಇಕ್ಕೆಲಗಳಲ್ಲಿ ಕಿಕ್ಕಿರಿದು ಜನ ಸೇರಿರುತ್ತಾರೆ ಎಂದು ನಿರೀಕ್ಷಿಸಿದ್ದ ಕಲಾವಿದರಿಗೆ ನಿರಾಸೆಯಾಯಿತು.

ಶಾಲಾ– ಕಾಲೇಜುಗಳ ವಿದ್ಯಾರ್ಥಿಗಳು ಕಲಾವಿದರ ಜೊತೆ ನೃತ್ಯ ಮಾಡುತ್ತಾ, ಸೆಲ್ಫಿ ಕ್ಲಿಕ್ಕಿಸಿಕೊಂಡು, ಜೈಕಾರ ಹಾಕುತ್ತಾ ಸಂಭ್ರಮಿಸಿದರು.

ಜೋಳದ ರೊಟ್ಟಿ, ಎಣ್ಣೆಗಾಯಿ ಸವಿ

ವಿವಿಧ ಜಿಲ್ಲೆಗಳಿಂದ ಬಂದವರು ಸಮ್ಮೇಳನದ ಮೊದಲ ದಿನದ ಮಧ್ಯಾಹ್ನದ ಊಟದಲ್ಲಿ ಕಾಯಿ ಹೋಳಿಗೆ, ಜೋಳದ ರೊಟ್ಟಿ, ಎಣ್ಣೆ ಗಾಯಿ ಊಟ ಸವಿದರು. ಉತ್ತರ ಕರ್ನಾಟಕ ಜಿಲ್ಲೆಗಳಿಂದ ಬಂದವರು ಜೋಳದ ರೊಟ್ಟಿಯ ಜೊತೆಗೆ ಮುದ್ದೆಯೂಟ ಮಾಡಿದರು.

'ಬಾಡೂಟ ಇದ್ದಿದ್ದರೆ, ಜನಜಂಗುಳಿ, ನೂಕುನುಗ್ಗಲು ಹೆಚ್ಚಾಗುತ್ತಿತ್ತು' ಎಂದು ಅಂಗನವಾಡಿ ಕಾರ್ಯಕರ್ತೆ ಡಿ.ಪಿ.ಆಶಾ ಪ್ರತಿಕ್ರಿಯಿಸಿದರೆ, ಕೆ.ಎಂ.ದೊಡ್ಡಿಯ ನಕುಲ್, 'ಮುದ್ದೆ ಜೊತೆ ಕೋಳಿ ಸಾರು, ಒಂದೆರಡು ಪೀಸ್ ಇದ್ದರೆ ಚೆನ್ನಾಗಿರುತ್ತಿತ್ತು' ಎಂದರು. ಸಾರ್ವಜನಿಕರಿಗಿದ್ದ ಮೂರು ಆಹಾರ ವಿತರಣೆ ಕೌಂಟರ್‌ಗಳೂ ಕಿಕ್ಕಿರಿದಿದ್ದವು. 'ಬಾಡೂಟವಿದ್ದಿದ್ದರೆ ನೂಕುನೂಗ್ಗಲು ಹೆಚ್ಚಾಗುತ್ತಿತ್ತು' ಎಂಬ ಅಭಿಪ್ರಾಯವೂ ಕೇಳಿಬಂತು.

'ಧರ್ಮದ ದುರುಪಯೋಗ ನಿಲ್ಲಲಿ'

ಒಂದನೇ ಪುಟದಿಂದ...

'ನಮ್ಮ ಸಮ್ಮೇಳನಗಳಲ್ಲಿ, ಸಮಾವೇಶಗಳಲ್ಲಿ 'ಅವರಿಗೂ ಒಂದು ಸ್ಥಾನ' ಎನ್ನುವಂತೆ ಮಹಿಳೆಯರ ವಿಷಯವನ್ನು ಚರ್ಚಿಸಲಾಗುತ್ತದೆ. ಆದರೆ ಅವರ ಹಕ್ಕುಗಳನ್ನು ಸಾಂವಿಧಾನಿಕ ನೆಲೆಯಲ್ಲಿ ನಾವು ನೀಡುವುದಕ್ಕೆ ಸಿದ್ಧವಿಲ್ಲ. ಇದಕ್ಕೆ ಅಪ್ಪಟ ನಿದರ್ಶನವೆಂದರೆ, ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ. ನಮಗೆ ಸ್ವಾತಂತ್ರ್ಯ ಬಂದ 77 ವರ್ಷಗಳಾದರೂ ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ನೀತಿಯನ್ನು ಅನುಷ್ಠಾನಗೊಳಿಸುವುದು ಸಾಧ್ಯವಾಗಿಲ್ಲ' ಎಂದು ವಿಷಾದಿಸಿದರು.

'ಮಹಿಳಾ ಮೀಸಲಾತಿ ಬಗ್ಗೆ ಆಶ್ವಾಸನೆಗಳಿಗೆ, ಲೋಕಸಭೆಯಲ್ಲಿನ ನಿರ್ಣಯಗಳಿಗೂ ಬರವಿಲ್ಲ. ಆದರೆ ವಸ್ತುಸ್ಥಿತಿಯೇನು? ಲೋಕಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಈಗ ಶೇ 13.65ರಷ್ಟಿದ್ದರೆ, ನಮ್ಮ ವಿಧಾನಸಭೆಯಲ್ಲಿ ಶೇ 5ರಷ್ಟಿದೆ. ರಾಜ್ಯದ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಲಿಂಗಸಮಾನತೆಯ ಬಗ್ಗೆ, ಮಹಿಳಾ ಸ್ವಾಯತ್ತತೆ ಬಗ್ಗೆ ಮಹಿಳೆಯರೇ ಮಾತನಾಡಿದ್ದು 12ನೇ ಶತಮಾನದ ವಚನ ಚಳವಳಿಯಲ್ಲಿ. ಅಂದು ಈ ನೆಲದಲ್ಲಿ ಬಿತ್ತನೆಯಾದ ಲಿಂಗ ಸಮಾನತೆಯ ಮೌಲ್ಯವನ್ನು ಇಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವನ್ನು ನಾವು ಮನಗಾಣಬೇಕು' ಎಂದು ಕರೆ ನೀಡಿದರು.

94ರ ವೃದ್ಧಾಪ್ಯದಲ್ಲಿರುವ ಅವರು ತಮ್ಮ ಭಾಷಣದಲ್ಲಿ ಮಂಡ್ಯದ ನೆಲವನ್ನು ಮನಃಪೂರ್ತಿಯಾಗಿ ಹೊಗಳಿದರು. ಇಡೀ ರಾಜ್ಯದ ಜ್ವಲಂತ ಸಮಸ್ಯೆಗಳ ಕುರಿತು ವಿಶ್ಲೇಷಿಸಿ ಪರಿಹಾರಗಳನ್ನೂ ಸೂಚಿಸುವ ವೇಳೆಯಲ್ಲಿ, ಸತ್ವ ಸಾಂಗತ್ಯಗಳನ್ನು ಮೇಳೈಸಿದರು.

'ಅಧ್ಯಕ್ಷರ ಭಾಷಣಗಳು ಕಾರ್ಯಗತಗೊಳ್ಳಲಿ': ಇದುವರೆಗಿನ ಅಧ್ಯಕ್ಷರ ಭಾಷಣಗಳಿಗೆ ಸರ್ಕಾರಗಳು ಪ್ರತಿಕ್ರಿಯಿಸಿರುವ ರೀತಿಯ ಕುರಿತು ವಿಷಾದಿಸಿ, '87 ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಕೇಳಿದ್ದೀರಿ. ಆದರೆ, ಕೇಳಿದ ನಂತರ ಮರೆಯುತ್ತೀರಿ. ಸರ್ಕಾರವಂತೂ ಕಿವಿಯೇ ಕೊಡುವುದಿಲ್ಲವೆಂಬ ಅಭಿಪ್ರಾಯ ಇದೆ. ಈ ಧೋರಣೆ ಬದಲಾಗಬೇಕು' ಎಂದು ಪ್ರತಿಪಾದಿಸಿದರು.

'ನನ್ನ ಭಾಷಣದಲ್ಲಿರುವ ಆಶಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಕಾರ್ಯಗತಗೊಳಿಸಲುತೊಡಗಬೇಕು. ಅದಕ್ಕೆ ಎಲ್ಲರೂ ಒತ್ತಡವನ್ನು ಹಾಕಬೇಕು' ಎಂದು ಕೋರಿದರು.

ಯೋಗಾಗೋಗ: 30 ವರ್ಷಗಳ ಹಿಂದೆ ಮಂಡ್ಯದಲ್ಲಿ ಪರಿಷತ್ತಿನ ಅಧ್ಯಕ್ಷರಾಗಿ ತಾವೇ ಸಂಘಟಿಸಿದ್ದ ಸಮ್ಮೇಳನವನ್ನು ನೆನಪು ಮಾಡಿಕೊಂಡ ಅವರು, 'ಈಗ ನನ್ನ ಸರ್ವಾಧ್ಯಕ್ಷತೆಯಲ್ಲೇ ಸಮ್ಮೇಳನ ನಡೆಯುತ್ತಿರುವುದು ಯೋಗಾಯೋಗ' ಎಂದು ಬಣ್ಣಿಸಿದರು. 'ಅನಿರೀಕ್ಷಿತವಾದ ಎಲ್ಲ ಅವಕಾಶಗಳನ್ನೂ ಹಿಂಜರಿಯದೆ ಒಪ್ಪಿಕೊಂಡು ಕರ್ತವ್ಯನಿಷ್ಠೆಯಿಂದ ನಿರ್ವಹಿಸಿರುವ ಸಮಾಧಾನವಿದೆ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಣಿವರಿಯದ ಸುದೀರ್ಘ ಭಾಷಣದ ಬಳಿಕ, ಮಾತನಾಡಿದ ಗೊರುಚ, ಪೂರ್ತಿ ಭಾಷಣವನ್ನು ಓದಲು ಆಗದೆ ಅರ್ಧಕ್ಕೇ ಮೊಟುಕುಗೊಳಿಸಿದರು.

ಅಂಧ ಕವಿಗಳು ತೋರಿದ 'ಲೋಕದೃಷ್ಟಿ'

ಸಮ್ಮೇಳನದಲ್ಲಿ ಇದೇ ಮೊದಲ ಬಾರಿಗೆ ಅಂಧರ ವಿಶೇಷ ಕವಿಗೋಷ್ಠಿ

• ಮೋಹನ್ ಕುಮಾರ ಸಿ.

ಕನ್ನಡ ಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲಿ ಮೊದಲ ಬಾರಿಗೆ ಆಯೋಜಿಸಿದ್ದ, 'ದೃಷ್ಟಿಚೇತನರ ವಿಶೇಷ ಕವಿಗೋಷ್ಠಿ'ಯು ಸಹೃದಯರ ಕಣ್ಣಾಲಿಗಳನು ತುಂಬಿಸಿತು. ಜೊತೆಗೆ, ಕವಿಗಳು ತಮ್ಮನ್ನು ಕುರಿತ 'ಲೋಕದೃಷ್ಟಿ'ಯನ್ನು ಸಹೃದಯರಿಗೆ ಕಾವ್ಯದ ಮೂಲಕ ಕಾಣಿಸಿದರು. ಅಂಧರು ಅನುಭವಿಸುವ ಕಷ್ಟ, ಅವಮಾನ, ಹುದುಗಲಾರದ ದುಃಖ ಅಲ್ಲಿ ಅನಾವರಣಗೊಂಡಿತ್ತು.

ಗೋಷ್ಠಿ ಉದ್ಘಾಟಿಸಿದ ಕವಿ ಮುದಿಗೆರೆ ರಮೇಶ್ ಕುಮಾರ್, 'ಬದುಕಿಗಿಂತ ಬೆಳಕು ದೊಡ್ಡದಲ್ಲವೆಂದು ನಂಬಿದವರು ನಾವು. ನಮ್ಮನ್ನು ಸಮ್ಮೇಳನದ ಭಾಗವಾಗಿಸಿದ್ದು, ಆತ್ಮ ತೃಪ್ತಿ ನೀಡಿದೆ' ಎಂದು ಹೇಳಿ, ನಂತರ ವಾಚಿಸಿದ 'ಆತ್ಮದ ಹಾಡು' ಕವಿತೆಯು ಎಲ್ಲರನ್ನೂ ಭಾವುಕಗೊಳಿಸಿತು.

'ಅರಿಯದೇ ಹೋದಿರಿ ಇದ್ದಾಗ ಜೀವ.. ಹಂಬಲಿಸಿ ಬಂದರೂ ತೆರೆಯದೆ ಮನವ.. ಇದ್ದಾಗ ಮರೆತವರು ನೀವು.. ನಾನು ಸತ್ತಾಗ ಏಕಿಷ್ಟು ನೋವು.. ಸಾಕು ನಿಲ್ಲಿಸಿ ನೀವು ಮುಖವಾಡದ ಯುದ್ಧ' ಎಂಬ ಸಾಲುಗಳು ಅಂಧರನ್ನು ಸಮಾಜ ನಿರ್ಲಕ್ಷಿಸುವ ಬಗೆಯನ್ನು ದಾಖಲಿಸಿತು.

ಮುಧೋಳದ ಬಾಪು ಖಾಡೆ ಅವರ 'ಲಕ್ಷ್ಮಿ– ಸರಸ್ವತಿ ಸಂವಾದ'ದ ಕವಿತೆಯಲ್ಲಿ ಸರಸ್ವತಿಯು ಲಕ್ಷ್ಮಿಯನ್ನು ಮಾತನಾಡಲು ಕರೆದಾಗ, 'ಹಣಕ್ಕಾಗಿ ಧಣಿಗಳು, ಸುಮಂಗಲೆಯರು ಫಲ ಪುಷ್ಪಗಳಿಂದ ಪೂಜಿಸುತ್ತಿಹರು.. ಬರಲಾಗುತ್ತಿಲ್ಲ' ಎಂದರೆ, ಸರಸ್ವತಿಯು 'ಏನ ಹೇಳಲಿ ನನ್ನ ಮಕ್ಕಳ ವ್ಯಥೆಯ.. ಇನ್‌ಸ್ಟಾಗ್ರಾಂ, ಫೇಸ್‌ಬುಕ್, ರೀಲ್ಸುಗಳಲ್ಲಿ ಕಳೆದುಹೋಗಿದ್ದಾರೆ.. ಹುಡುಕಿಕೊಡುವೆಯಾ' ಎಂಬ ಸಾಲುಗಳು ಪ್ರಸ್ತುತ ಸಾಮಾಜಿಕ ಸ್ಥಿತಿಯನ್ನು ಧ್ವನಿಸಿದವು.

ಹರೀಶ್, 'ನೊಂದು ಬೆಂದವರು ನನ್ನ ಮುಂದಾಗಿ ಬಂದಾಗ ಸಾಂತ್ವನ ನುಡಿಯಲು ಧ್ವನಿಯ ಕೊಡು ತಂದೆ.. ನಿಂದಕರು ಮಾತಿನಲಿ ಚುಚ್ಚಿ ಕೊಂದರೂ ನನ್ನ.. ನೋವಿಗೆ ಮಿಡಿಯುವ ಬಲವ ಕೊಡು ತಂದೆ' ಎಂದು ಗುರುವನ್ನು ಕಾವ್ಯದಲ್ಲಿ ಧೇನಿಸಿದರೆ, ಜಯನಂದ ಟೋಪುಗೋಳು ಅವರ 'ಅಂಧರ ಧ್ರುವತಾರೆ' ಕವಿತೆ ಅಕ್ಷರದ ಬೆಳಕು ನೀಡಿದ ಲೂಯಿ ಬ್ರೈಲ್‌ಗೆ ಹಾಕಿದ ನುಡಿಹಾರವಾಗಿತ್ತು.

ವಿಜಯಪುರದ ಕವಿ ಟಿ.ಎಂ. ತೋಟಯ್ಯ ಅವರು 'ಹವಣಿಕೆ' ಕವಿತೆಯನ್ನು ಹಾಡಿ, '600 ಕಿ.ಮೀಯಿಂದ ಮಂಡ್ಯಕ್ಕೆ ಬಂದಿದ್ದೇನೆ. ಮೂರು ನಿಮಿಷವನ್ನೂ ಕವಿತೆಗೆ ನೀಡುವುದಿಲ್ಲವೆಂದರೆ ಹೇಗೆ' ಎಂದು ಪ್ರಶ್ನಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಪ್ರೊ.ಶಿವರಾಜ ಶಾಸ್ತ್ರಿ ಹೇರೂರ, 'ಮಿಕ್ಕ ಕವಿಗೋಷ್ಠಿಗೆಲ್ಲ ಸಮಯದ ಒತ್ತಡ ವಿರುವುದಿಲ್ಲ. ನಮ್ಮ ಗೋಷ್ಠಿಗೆ ಒತ್ತಡವೇಕೆ ತರುತ್ತಿದ್ದೀರಾ' ಎಂದರು. 'ಅಂಧರ ಕವಿಗೋಷ್ಠಿ ನಡೆಸಿರುವ ಪರಿಷತ್ತು, ಹೆಚ್ಚು ಪ್ರಶಸ್ತಿಗಳನ್ನು ಅಂಗವಿಕಲ ಸಾಧಕರಿಗೆ ನೀಡಬೇಕು' ಎಂದೂ ಆಗ್ರಹಿಸಿದರು.

ಸೋಮಶೇಖರ್ ಬಳೆಗಾರ್ ಅವರ 'ಗುರು ಪುಟ್ಟರಾಜ', ರಮಾ ಫಣಿಭಟ್ ಗೋಪಿ ಅವರ 'ಅಶರೀರ ವಾಣಿ', ಶಿವಸ್ವಾಮಿ ಚಿನಕೇರ ಅವರ 'ಗಡಿನಾಡು', ಪ್ರೊ.ಕೃಷ್ಣ ಹೊಂಬಾಳ್ ಅವರ 'ನಿರ್ಭೀತರು', ಆನಂದ್ ಇಂದೂರಾ ಅವರ 'ಪ್ರೇಮ', ಹೇಮಂತ್‌ಕುಮಾರ್ ಕವಿತೆಗಳು ಗಮನ ಸೆಳೆದವು.



ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಶುಕ್ರವಾರ ನಡದ 'ದೃಷ್ಟಿಚೇತನರ ವಿಶೇಷ ಕವಿಗೋಷ್ಠಿ'ಯಲ್ಲಿ ಪ್ರೊ.ಕೃಷ್ಣ ಹೊಂಬಾಳ್ ಕವಿತೆ ವಾಚಿಸಿದರು

ಕೆಲವರ ಸ್ವಾರ್ಥಕ್ಕೆ ಚಿತ್ರರಂಗ ಬಲಿ: ರಾಜೇಂದ್ರಸಿಂಗ್ ಬಾಬು

'ಪರಭಾಷೆಗಳಿಂದ ಕನ್ನಡ ಸಿನಿಮಾ ಉಳಿಸಿ'

• ಟಿ.ಕೆ. ಲಿಂಗರಾಜು

'ರಾಜ್ಯದಲ್ಲಿ ಕನ್ನಡ ಚಿತ್ರರಂಗ ಉಳಿಸುವ ನಿಟ್ಟಿನಲ್ಲಿ ಪರಭಾಷೆ ಚಿತ್ರಗಳಿಗೆ ಹೆಚ್ಚಿನ ತೆರಿಗೆ ವಿಧಿಸಬೇಕು' ಎಂದು ಚಲನಚಿತ್ರ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ಆಗ್ರಹಿಸಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶುಕ್ರವಾರ ನಡೆದ 'ರಂಗಭೂಮಿ, ಚಲನಚಿತ್ರ, ಕಿರುತೆರೆ ಕ್ಷೇತ್ರದ ಸವಾಲುಗಳು' ಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, 'ಕನ್ನಡ ಚಿತ್ರರಂಗದಲ್ಲಿ ನಮ್ಮ ಬೆನ್ನಿಗೆ ನಾವೇ ಚೂರಿ ಹಾಕಿಕೊಳ್ಳುತ್ತೇವೆ. ನಮ್ಮಲ್ಲಿ ಒಗ್ಗಟ್ಟಿಲ್ಲದಿರುವುದರಿಂದ ಪರಭಾಷಿಗರು ನಮ್ಮ ಜನರ ಹಣವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಸಂಘಟಿತ ಹೋರಾಟ ಮಾಡುವವರೇ ಇಲ್ಲದ ಸ್ಥಿತಿ ನಮ್ಮದು. ಡಾ.ರಾಜ್ ಕುಮಾರ್ ಅವರಂಥ ನಟ ಕನ್ನಡ ಚಿತ್ರರಂಗಕ್ಕೆ ಬೇಕಾಗಿದೆ' ಎಂದರು.

'ಡಾ.ರಾಜ್ ಅವರು ಕೆಂಪೇಗೌಡ ರಸ್ತೆಗೆ ಬರುತ್ತಾರೆಂದರೆ ಅಂದಿನ ಮಂತ್ರಿಗಳು ಬಂದು ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ಆದರೆ ಈಗ ಕೆಲವರ ಸ್ವಾರ್ಥಕ್ಕೆ ಚಿತ್ರರಂಗ ಬಲಿಯಾಗುತ್ತಿದೆ. 'ಪ್ಯಾನ್ ಇಂಡಿಯಾ' ಹೆಸರಿನಲ್ಲಿ ವೈಯಕ್ತಿಕವಾಗಿ ಬೆಳೆಯಲು ಕೆಲ ನಟರು ಮುಂದಾಗಿದ್ದಾರೆ' ಎಂದು ಟೀಕಿಸಿದರು.

'ಹಿಂದೆ ಪರಭಾಷೆ ಸಿನಿಮಾ ವಿರುದ್ಧ ಹೋರಾಟ ಆರಂಭಿಸಿದ್ದಾಗ ನಮ್ಮವರೇ ಸುಪ್ರೀಂಕೋರ್ಟ್‌ಗೆ ಹೋಗಿ ತಡೆ ತಂದಿದ್ದರು. ಕನ್ನಡ ಶಕ್ತಿಯನ್ನು ನಶಿಸುವ ಪ್ರಯತ್ನ ನಡೆಯಲ್ಲ, ಮುಂದೊಂದು ದಿನ ಅದು ಸಿಡಿಯುವ ಕಾಲ ಬರುತ್ತದೆ' ಎಂದು ಹೇಳಿದರು.

'ಡಾ.ರಾಜಕುಮಾರ್, ನರಸಿಂಹ ರಾಜ್, ಬಾಲಕೃಷ್ಣ ಸೇರಿದಂತೆ ಅನೇಕರು ರಂಗಭೂಮಿಯಿಂದಲೇ ಬಂದಿದ್ದು, ಅಮೆರಿಕ, ಯುರೋಪ್‌ನಂಥ ದೇಶಗಳಲ್ಲಿ ಮತ್ತೆ ನಾಟಕ ಪ್ರದರ್ಶನಗೊಳ್ಳುತ್ತಿವೆ. ನಮ್ಮಲ್ಲೂ ಅಂಥ ಸಮಯ ಬರುತ್ತದೆ. ಸರ್ಕಾರ ಸಹ ನಾಟಕಗಳ ಪ್ರದರ್ಶನಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.




'ರಂಗಭೂಮಿ, ಚಲನಚಿತ್ರ, ಕಿರುತೆರೆ ಕ್ಷೇತ್ರದ ಸವಾಲುಗಳು' ಗೋಷ್ಠಿಯಲ್ಲಿ ಚಲನಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ಮಾತನಾಡಿದರು. ನಟಿ ರಂಜನಿ ರಾಘವನ್, ಸುಜಾತಾ ಜಂಗಮಶೆಟ್ಟಿ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ನಾಗರಾಜಮೂರ್ತಿ, ಡಿ.ಸತ್ಯಪ್ರಕಾಶ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಚಿತ್ರರಂಗಕ್ಕೆ ಪ್ರಧಾನ ವೇದಿಕೆ ಕಲ್ಪಿಸಿ'

'ಸಾಹಿತ್ಯ ಕ್ಷೇತ್ರದ ಬೆಳವಣಿಗೆಗೆ ಚಿತ್ರರಂಗ ಸಾಕಷ್ಟು ಕೊಡುಗೆ ನೀಡಿದೆ. ಸಾಹಿತ್ಯ ಸಮ್ಮೇಳನದ ಕನ್ನಡ ಚಿತ್ರರಂಗಕ್ಕೆ ಇಂಥ ಚಿಕ್ಕ ವೇದಿಕೆ ನೀಡಿರುವುದು ಸರಿಯಲ್ಲ' ಎಂದು ಎಸ್.ವಿ. ರಾಜೇಂದ್ರಸಿಂಗ್ ಬಾಬು ಆಕ್ಷೇಪಿಸಿದರು.

'ಸಮ್ಮೇಳನಕ್ಕೆ ನಾನು ಬರುವಾಗ ಗೊಂದಲವಾಯಿತು. ಮುಂದಿನ ಸಮ್ಮೇಳನದಲ್ಲಿ ಇಂಥ ತಪ್ಪು ಮರುಕಳಿಸಬಾರದು. ಅಲ್ಲದೇ ಕನ್ನಡ ಚಿತ್ರರಂಗಕ್ಕೆ ಪ್ರಧಾನ ವೇದಿಕೆಯಲ್ಲಿಯೇ ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.


ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
NEW YEAR SALE
ಮೆಗಾ ಡಿಸ್ಕೌಂಟ್ ಸೇಲ್
ನಿಶ್ಚಿತ ಕಡಿಮೆ ಬೆಲೆಯಲ್ಲಿ
EXCHANGE BONANZA
UPTO ₹25,000
ಪರಿಚಯ ಕಡಿತ ಹಳೆಯ ಎಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು
ಎಕ್ಸ್‌ಚೇಂಜ್ ಮೇಲೆ
WELCOME 2025 WITH SAVINGS
UPTO 70% OFF
CASH BACK BONANZA
UPTO 20%
ಕ್ಯಾಶ್ ಬ್ಯಾಕ್*
AXIS BANK citi HDFC BANK HSBC ICICI Bank IndusInd Bank kotak RBL BANK Union Bank YES BANK Standard Chartered Bank of Baroda FEDERAL BANK SBI card
ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ ₹20000
ಫೈನಾನ್ಸ್ ಬೊನಾಂಜಾ Upto ₹10,000 ಕ್ಯಾಶ್ ಬ್ಯಾಕ್*
FINANCE POWERED BY Groww 0% EMI 2,000 Cash Back MIN PRODUCT VALUE ₹10,000
1 ಇ.ಎಮ್.ಐ ಉಚಿತ*
INSTANT LOAN APPROVAL UPTO ₹4,00,000*
FEDERAL BANK 7.5% INSTANT DISCOUNT ON CC EMI* MIN SWIPE ₹5000 MAX DISCOUNT UPTO ₹2000
ASSURED GIFTS ON ALL LG PRODUCTS*
BT SPEAKER INDUCTION COOKER STEAM IRON KETTLE DRY IRON
24 HOURS EXPRESS DELIVERY*
LG 65 ಓಎಲ್ಇಡಿ EVO 4K SMART TV OLED65C46LA ಇ.ಎಮ್.ಐ ₹6,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 65 ಎಲ್ಇಡಿ 4K SMART TV 65S90D ಇ.ಎಮ್.ಐ ₹6,990
SONY BRAVIA 55 ಓಎಲ್ಇಡಿ 4K HDR GOOGLE TV K-55XR70 ಇ.ಎಮ್.ಐ ₹5,500
Haier 43 4K SMART GOOGLE ಎಲ್ಇಡಿ ಇ.ಎಮ್.ಐ ₹1,994 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
NVY LOWEST PRICE CHALLENGE 4K ಎಲ್ಇಡಿ 52% OFF NVY Official LED partner of RCB
Model | Price | EMI
43 4K SMART | ₹18,990 | ₹1,582
55 4K SMART | ₹29,490 | ₹2,457
mi NOTE 14 5G 6+128 EFFECTIVE PRICE ₹17,999* (PRICE AFTER CASH BACK) ಇ.ಎಮ್.ಐ ₹1,500 ಉಚಿತ: BT NECKBAND WORTH ₹1499*
oppo F27 5G 8+128 10% CASH BACK ₹19,650* ಇ.ಎಮ್.ಐ ₹1,638 ಉಚಿತ: BT NECKBAND WORTH ₹1499*
vivo Y300 5G 8+128 EFFECTIVE PRICE ₹19,080* (PRICE AFTER CASH BACK) ಇ.ಎಮ್.ಐ ₹1,590 ಉಚಿತ: BT NECKBAND WORTH ₹1499*
realme 14X 5G 6 + 128 EFFECTIVE PRICE ₹14,490* (PRICE AFTER CASH BACK) ಇ.ಎಮ್.ಐ ₹1,208 ಉಚಿತ: BT NECKBAND WORTH ₹1499*
iPhone 16 EFFECTIVE PRICE ₹73,690* (PRICE AFTER CASH BACK) EMI STARTS FROM ₹3,070 ಉಚಿತ: MAGSAFE POWERBANK 10000 MAH WORTH ₹7499
SAMSUNG S24 FE/ S24/ S24 Ultra EFFECTIVE PRICE ₹60,999* (PRICE AFTER CASH BACK) EMI STARTS FROM ₹2,542 GET: MAGSAFE POWERBANK 10000 MAH WORTH ₹7499 @ ₹199
hp 15 10% CASH BACK RYZEN 3-7320U 8GB, 512GB SSD 15.6 FHD WIN 11 MSO 21 OFFER PRICE ₹33,990 ಇ.ಎಮ್.ಐ ₹2,833 MRP ₹45,995 ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*
DELL INS 15 3530 10% CASH BACK 13TH GEN I3 1305U 16 GB, 512GB 15.6 FHD WIN 11 MSO 21 OFFER PRICE ₹43,990 ಇ.ಎಮ್.ಐ ₹3,666 MRP ₹48,827 ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*
Lenovo SLIM 3 10% CASH BACK RYZEN 5 7520U 16GB, 512GB SSD RADEON 610M 15.6 FHD WIN 11 MSO, 21 OFFER PRICE ₹ 44,990 ಇ.ಎಮ್.ಐ ₹3,749 MRP ₹64,800 ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*
hp VICTUS GAMING 10% CASH BACK RYZEN 5 5600H 16GB, 512GB SSD 4GB GFX RX6500M 15.6 FHD WIN 11 MSO 21 OFFER PRICE ₹54,990 ಇ.ಎಮ್.ಐ ₹4,583 MRP ₹67,264 ಉಚಿತ: BT CALLING SMART WATCH + QUICK HEAL AV INTERNET SECURITY WORTH ₹8999*
DELL INS 3530 10% CASH BACK 13TH GEN i5 1334U 16GB, 512GB SSD 15.6 FHD WIN 11 MSO21 OFFER PRICE ₹57,990 ಇ.ಎಮ್.ಐ ₹4,833 MRP ₹72,598 ಉಚಿತ: BT CALLING SMART WATCH + QUICK HEAL AV INTERNET SECURITY WORTH ₹8999*
LG 650L SIDE BY SIDE REFRIGERATOR WITH HYGIENE FRESH+™, DOORCOOLING+™, SMART DIAGNOSIS™, BLACK MIRROR FINISH, 3-STAR GL-B257DBM3 ಇ.ಎಮ್.ಐ ₹3,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 653 L BESPOKE CONVERTIBLE 5IN1 SIDE BY SIDE REFRIGERATOR RS76CB81A333 ಇ.ಎಮ್.ಐ ₹4,990
Whirlpool 411L INTELLIFRESH CONVERTIBLE FROST FREE DOUBLE-DOOR ಇ.ಎಮ್.ಐ ₹3,758 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,191 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Godrej 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹2,983 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG SOUND BAR SC9S, 3.1.3 CH, 400W, DOLBY ATMOS & IMAX ENHANCED. OFFER PRICE ₹31,290 EMI ₹2,608 MRP ₹89,990
BOSCH SERIES 6 13 PLACE SETTINGS FREE STANDING DISHWASHER WITH GLASS PROTECTION TECHNOLOGY ಇ.ಎಮ್.ಐ ₹4,287
Panasonic 27ಲೀ ಕನ್‌ವೆಂಕ್ಷನ್ ಮೈಕ್ರೋವೇವ್ ಇ.ಎಮ್.ಐ ₹1,366
OFFER VALID TILL STOCK LAST | OFFER VALID TILL STOCK LAST
MIXER GRINDER ₹1,299 ONWARDS
INDUCTION STOVE ₹1,299 ONWARDS
GEYSER ₹2,990 ONWARDS
WATER PURIFIER RO + UV ₹7,490 ONWARDS
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
GIRIAS THE CONSUMER DURABLE PEOPLE Since 1971
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.
165 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA



ಹೆಸರು ಬದಲಿಸುವ ಮುನ್ನ!

ಮಂಜುಶ್ರೀ ಕಡಕೋಳ

ಮಗುವೊಂದು ಹೆಣ್ಣಿನ ಒಡಲಲ್ಲಿ ಕುಡಿಯೊಡೆದ ಕ್ಷಣ... ಅದು ಹೆಣ್ಣಾದರೆ ಇಂಥ ಹೆಸರು, ಗಂಡಾದರೆ ಇಂಥ ಹೆಸರು ಇಡಬೇಕೆಂದು ಹೆತ್ತವರು ನೂರಾರು ಬಾರಿ ಯೋಚಿಸಿರುತ್ತಾರೆ, ಚರ್ಚಿಸಿರುತ್ತಾರೆ. ಅದರಲ್ಲೂ ಹೆಣ್ಣು ಮಗು ಹುಟ್ಟಿದರೆ ದೇವತೆಗಳ ಹೆಸರಿನಿಂದ ಹಿಡಿದು ಹುಟ್ಟಿದ ಸಮಯಕ್ಕೆ ತಕ್ಕ ರಾಶಿ, ನಕ್ಷತ್ರ, ಅಕ್ಷರಕ್ಕೆ ಹೊಂದುವಂಥ ನೂರಾರು ಹೆಸರುಗಳನ್ನು ಹುಡುಕಲಾಗುತ್ತದೆ. ಹತ್ತಾರು ಜನರಿಗೆ ತಮ್ಮ ಮಗಳಿಗೆ ಇಂಥ ಅಕ್ಷರ ಬಂದಿದೆ, ಒಳ್ಳೆಯದೊಂದು ಹೆಸರು ಸೂಚಿಸಿ ಅಂತಲೋ, ಹಿರಿಯರು, ಆತ್ಮೀಯರು, ದೇವಸ್ಥಾನದ ಅರ್ಚಕರೋ, ಸ್ವಾಮೀಜಿಗಳೋ ಸೂಚಿಸಿದ ಅಥವಾ ತಾವೇ ವಿಭಿನ್ನವಾದ ಹೆಸರೊಂದನ್ನು ಹುಡುಕಿ ಹೆತ್ತವರು ತಮ್ಮ ಮಗಳಿಗೆ ಮುದ್ದಾದ ಹೆಸರಿಡುತ್ತಾರೆ.

ನಾಮಕರಣ ಮಾಡಿದ ಹೆಸರು ಒಂದಾದರೆ, ಮಗಳಿಗೆ ಮನೆಯಲ್ಲಿ ಪ್ರೀತಿಯಿಂದ ಕರೆಯುವ ಹೆಸರುಗಳು ಹತ್ತಾರು. ಚಿನ್ನು, ಪುಟ್ಟಿ, ಕಂದಾ, ಅವ್ವಿ, ಮುನ್ನಿ, ಬೇಬಿ, ಬೇಟಿ, ಸ್ವೀಟಿ... ಹೀಗೆ ಮನೆ-ಮನ ತುಂಬುವ ಮಗಳಿಗೆ ಪ್ರೀತಿಯ ಹೂಮಳೆಯನ್ನೇ ಸುರಿಸಿ ಬೆಳೆಸುತ್ತಾರೆ.

ಆದರೆ, ಮಗಳಿಗೆ ಮದುವೆ ನಿಶ್ಚಯವಾಗುವುದೇ ತಡ ಬಹುತೇಕ ವರನ ಕುಟುಂಬಗಳಲ್ಲಿ 'ಜಾತಕ ಕೂಡಿ ಬಂದಿಲ್ಲ, ಈ ಹೆಸರು ನಮ್ಮ ಹುಡುಗನಿಗೆ ಹೊಂದುತ್ತಿಲ್ಲ... ಸಂಖ್ಯಾಶಾಸ್ತ್ರದ ಪ್ರಕಾರ ಈ ಹೆಸರಿಟ್ಟರೆ ಒಳ್ಳೆಯದಂತೆ...' ಹೀಗೆ ಹತ್ತುಹಲವು ನೆಪವೊಡ್ಡಿ ಹೆಣ್ಣಿನ ಹೆಸರು ಬದಲಿಸಲಾಗುತ್ತದೆ. ತವರುಮನೆಯಲ್ಲಿ ಅಪ್ಪ-ಅಮ್ಮ ಅಷ್ಟೊಂದು ಮುದ್ದಿನಿಂದ ಇಟ್ಟ ಹೆಸರು ಒಂದೇ ಘಳಿಗೆಯಲ್ಲಿ ಬದಲಾಗಿಬಿಡುವುದು ಸೋಜಿಗವೇ ಸೈ. ಹೆಣ್ಣಿನ ಹೆಸರನ್ನು ಬದಲಾಯಿಸಿದಂತೆ ಗಂಡುಮಕ್ಕಳ ಹೆಸರು ಬದಲಾಗಿರುವ ಒಂದೇ ಒಂದು ಪ್ರಕರಣವೂ ಅರಿವಿಗೆ ಬಾರದು. ಹೆಣ್ಣು ಹೆತ್ತವರು ಇದುವರೆಗೂ ತಮ್ಮ ಅಳಿಯನ ಹೆಸರು ತಮ್ಮ ಮಗಳಿಗೆ ಸರಿಹೊಂದುವುದಿಲ್ಲವೆಂದೋ, ಜಾತಕ ಕೂಡಿಬರುವುದಿಲ್ಲವೆಂದೋ ಆತನ ಹೆಸರು ಬದಲಿಸಿದ ನಿದರ್ಶನಗಳೂ ಸಿಗುವುದಿಲ್ಲ. ಹುಟ್ಟಿದಾಗಿನಿಂದಲೂ ಅಪ್ಪ-ಅಮ್ಮ ಇಟ್ಟ ಹೆಸರಿನಿಂದ ಗುರುತಾಗಿದ್ದ ಅವಳೀಗ ತನ್ನ ಹೆಸರಿನ ಅಸ್ಮಿತೆಯನ್ನು ಗಂಡನಿಗಾಗಿ, ಗಂಡನ ಮನೆಯವರಿಗಾಗಿ ಒಂದೇ ಮಾತಿಗೆ ಬಿಟ್ಟುಕೊಡಲು ಸಿದ್ಧಳಾಗಬೇಕು. ಶಾಲಾ-ಕಾಲೇಜು, ಕಚೇರಿಯ ದಾಖಲಾತಿಗಳು, ಹೆತ್ತವರು, ಗೆಳತಿಯರು ಹೀಗೆ ತನ್ನ ಬಂಧು-ಬಳಗದವರಿಂದ ಕರೆಸಿಕೊಳ್ಳುತ್ತಿದ್ದ ಹೆಸರು ವಿವಾಹದ ಆಮಂತ್ರಣ ಪತ್ರಿಕೆಯ ಮೂಲಕ ದಿಢೀರ್ ಅಂತ ಬದಲಾಗುವ ಪ್ರಕ್ರಿಯೆಗೆ ಆಕೆ ಒಡ್ಡಿಕೊಳ್ಳದೇ ವಿಧಿಯಿಲ್ಲ ಎನ್ನುವಂಥ ವಾತಾವರಣ ಸೃಷ್ಟಿಸಲಾಗುತ್ತದೆ ಇಲ್ಲವೇ ಅದು ಸಹಜ ಪ್ರಕ್ರಿಯೆ ಎಂಬಂತೆ ಹೆಣ್ಣನ್ನು, ಹೆಣ್ಣಿನ ಮನೆಯವರನ್ನು ಒಪ್ಪಿಸಲಾಗುತ್ತದೆ.

ನಮ್ಮ ದೇಶದಲ್ಲಿ ಬಹುತೇಕ ಹೆಣ್ಣುಮಕ್ಕಳಿಗೆ ಗಂಡನ ಮನೆಯಲ್ಲಿ ತಮ್ಮ ಹೆಸರು ಬದಲಾಯಿಸುವುದು ಮೇಲ್ನೋಟಕ್ಕೆ ಸರಳವೆನಿಸಿದರೂ, ಆ ಬದಲಾವಣೆ ಪ್ರಕ್ರಿಯೆ ಕೆಲವೊಮ್ಮೆ ಅವಳ 'ಅಸ್ಮಿತೆ'ಯನ್ನೇ ಪ್ರಶ್ನಿಸುವಂತಿರುತ್ತಿದೆ. ಮದುವೆಯಾಗುವ, ಗಂಡನ ಮನೆಗೆ ಹೋಗುವ ಹೆಣ್ಣಿನ ಹೆಸರಷ್ಟೇ ಬದಲಾಗದು.

ಹೆಸರು ಬದಲಾವಣೆಯ ನೆಪದಲ್ಲಿ ಈ ಹಿಂದಿದ್ದ ತನ್ನ ವ್ಯಕ್ತಿತ್ವ, ಸ್ವಭಾವ, ಅಭಿರುಚಿ ಇತ್ಯಾದಿಗಳನ್ನು ಬದಲಾಯಿಸಿಕೊಳ್ಳುವ ಪ್ರಕ್ರಿಯೆಗೆ ವಿವಾಹಿತೆ ಅಣಿಯಾಗಬೇಕಾಗುತ್ತದೆ. ಈಗ ಕಾಲ ಬದಲಾಗಿದೆ ಆ ಥರ ಏನಿಲ್ಲ ಎಂದು ನೀವೆಷ್ಟೇ ವಾದಿಸಿದರೂ, ಕೆಲ ಬದಲಾವಣೆಗಳಿಗೆ ಗಂಡಿಗಿಂತ ಹೆಣ್ಣೇ ಹೆಚ್ಚು ಒಡ್ಡಿಕೊಳ್ಳಬೇಕಿರುವಂಥದ್ದು ಸತ್ಯ.

ಮದುವೆ ಎಂಬುದು ಎರಡು ಮನಸುಗಳ ಮೌನ ಬೆಸುಗೆಯಷ್ಟೇ ಅಲ್ಲ, ಎರಡು ಕುಟುಂಬಗಳ ಸಮ್ಮಿಲನವಾಗಬೇಕೆಂಬ ಆಶಯಕ್ಕೆ ವಿರುದ್ಧವಾದ ನಡೆ ಮಗಳ ಹೆಸರು ಬದಲಾವಣೆಯಿಂದಲೇ ಮುನ್ನುಡಿ ಬರೆಯಲಾಗುತ್ತದೆ. ಅದು ಪ್ರೇಮ ವಿವಾಹವೇ ಇರಲಿ, ಮನೆಯವರು ನೋಡಿ ಮಾಡಿದ ಮದುವೆಯೇ ಇರಲಿ, ಇಲ್ಲಿ ಬದಲಾಗಬೇಕಿರುವುದು ಅವಳ ಹೆಸರು ಮತ್ತು ವಿಳಾಸವಷ್ಟೇ!

ತಾಳಿ, ಕಾಲುಂಗುರ, ಬೈತಲೆಯಲಿ ಸಿಂಧೂರ... ಅವಳನ್ನು ನೀನಿನ್ನು ವಿವಾಹಿತೆ ಅನ್ನುವುದನ್ನು ಪದೇಪದೇ ನೆನಪಿಸುವ ಸಂಕೇತಗಳಾದರೆ, ಅವನಿಗೆ ಮಾತ್ರ ಇದ್ಯಾವುದರ ಹಂಗಿಲ್ಲ. ಕೆಲವೊಮ್ಮೆ ಅವನಾಗಿಯೇ ಹೇಳಿಕೊಂಡರೆ, ಕೈಬೆರಳಿನಲ್ಲಿ ನಿಶ್ಚಿತಾರ್ಥ ಉಂಗುರವಿದ್ದರೆ ಇಲ್ಲವೇ ಸೋಷಿಯಲ್ ಮೀಡಿಯಾದ ತನ್ನ ಪ್ರೊಫೈಲ್‌ನಲ್ಲಿ 'ಮ್ಯಾರೀಡ್' ಅಂತ ನಮೂದಿಸಿದರೆ ಮಾತ್ರ ಅವನು ವಿವಾಹಿತ ಎಂಬುದು ತಿಳಿಯುತ್ತದೆ! (ಗಮನಿಸಿ ಎಫ್‌ಬಿ, ಇನ್‌ಸ್ಟಾಗ್ರಾಂಗಳಲ್ಲಿ ಬಹುತೇಕ ಗಂಡಸರ ಪ್ರೊಫೈಲ್‌ನಲ್ಲಿ ಸಿಂಗಲ್ ಅಂತಲೇ ಇರುತ್ತದೆ)

ವಿವಾಹವಾದ ನಂತರ ಹೆಣ್ಣಿನ ಹೆಸರಷ್ಟೇ ಅಲ್ಲ ಅವಳ ಸರ್‌ನೇಮ್ (ಉಪನಾಮ) ಕೂಡಾ ಬದಲಾಗಬೇಕಾಗುತ್ತದೆ. ಆ ಮೂಲಕ ಅವಳು ಇಂಥ ಕುಟುಂಬಕ್ಕೆ ಸೇರಿದವಳು ಅನ್ನುವುದು ಅವಳ ಗುರುತಾಗುತ್ತದೆ.

ಆಕೆ ಎಂಥದ್ದೇ ಉನ್ನತ ಹುದ್ದೆಯಲ್ಲಿದ್ದರೂ, ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಅಧಿಕಾರದಲ್ಲಿದ್ದರೂ ಮದುವೆಯಾದ ಮೇಲೆ ತನ್ನ ಹೆಸರಿನೊಂದಿಗಿನ ಸರ್‌ನೇಮ್ ಅನ್ನಾದರೂ ಬದಲಿಸಿಕೊಳ್ಳುವ ಅನಿವಾರ್ಯತೆ ಇರುತ್ತದೆ. ಒಂದು ವೇಳೆ ಬದಲಿಸಿಕೊಳ್ಳದಿದ್ದಲ್ಲಿ ಅವಳನ್ನು ಅಹಂನ ಕೋಟೆಯಲ್ಲಿರಿಸಲಾಗುತ್ತದೆಯೋ ಹೊರತು, ಅದು ಅವಳ ಸ್ವಾಭಿಮಾನ, ಆತ್ಮಾಭಿಮಾನ ಎಂದು ಗೌರವಿಸುವುದು ಅಷ್ಟುಕಷ್ಟೇ. ಇದಕ್ಕೆ ಹೊರತುಪಡಿಸಿದ ನಿದರ್ಶನಗಳು ಇದ್ದರೂ ಅವುಗಳ ಸಂಖ್ಯೆ ತೀರಾ ಕಮ್ಮಿ.

ಬಹುತೇಕ ಹೆಣ್ಣು ಮಕ್ಕಳು ತಮ್ಮ ಗಂಡನ ಮೇಲಿನ ಪ್ರೀತಿಗಾಗಿ ತನ್ನ ಹೆಸರಿನೊಂದಿಗೆ ಅವನ ಹೆಸರನ್ನು ಸೇರಿಸಿಕೊಂಡಿದ್ದೇವೆ ಎನ್ನುತ್ತಾರೆ. ಹಾಗಿದ್ದರೆ ಗಂಡನೂ ಅವಳ ಮೇಲಿನ ಪ್ರೀತಿಗಾಗಿ ತನ್ನ ಹೆಸರಿನ ಮುಂದೆ ಹೆಂಡತಿ ಹೆಸರು ಹಾಕಿಕೊಳ್ಳಬಹುದಲ್ಲ ಅಂತ ಪ್ರಶ್ನಿಸಿದರೆ ಅದಕ್ಕೆ ಬಹುತೇಕ ನೀರೆಯರು 'ನಿರುತ್ತರೆಯರು'!. ಈ ಪ್ರಶ್ನೆ ಬರೀ ಗಂಡನ ಹೆಸರನ್ನು ತನ್ನ ಹೆಸರಿನೊಂದಿಗೆ ಬಳಸಿಕೊಳ್ಳುವ ಪ್ರಶ್ನೆಗೆ ಮಾತ್ರ ಸೀಮಿತವಲ್ಲ. ತಂದೆಯ ಹೆಸರನ್ನು ಮಗಳ ಹೆಸರಿನೊಂದಿಗೆ ಜೋಡಿಸುವಲ್ಲೂ ಏಳುತ್ತದೆ. ನಾವ್ಯಾಕೆ ಅಪ್ಪನ ಹೆಸರನ್ನೇ ನಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳುತ್ತೇವೆ. ಮನೆಯೊಳಗೂ, ಮನೆಹೊರಗೂ ದುಡಿಯುವ ಅಮ್ಮನ ಹೆಸರನ್ನೇಕೆ ಇಟ್ಟುಕೊಳ್ಳುವುದಿಲ್ಲ? ಉತ್ತರ ಮಾತ್ರ ನಮ್ಮ ಮನಸ್ಸುಗಳಲ್ಲಿ ಜೋಪಾನವಾಗಿದೆ!.ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಆಸ್ತಿಯ ಭಾಗವೆಂದೇ ಪರಿಗಣಿಸಲಾಗುತ್ತದೆ. ಹಾಗಾಗಿ, ಗಂಡಿನ ಆಸೆ-ಆಕಾಂಕ್ಷೆಗಳಿಗೆ ತಕ್ಕಂತೆ ಆಕೆಯ ವ್ಯಕ್ತಿತ್ವವನ್ನು ಬದಲಿಸಿಕೊಳ್ಳುವ ವ್ಯವಸ್ಥೆ ನಮ್ಮಲ್ಲಿ ಹಾಸುಹೊಕ್ಕಾಗಿದೆ. ಈ ರೀತಿ ಹಾಸುಹೊಕ್ಕಾಗಿರುವ ಸಿಕ್ಕುಗಳಲ್ಲಿ ಸಿಲುಕಿರುವ ಹೆಣ್ಣು, ತನಗೆ ಅರಿವಿಲ್ಲದಂತೆ ಪಿತೃಪ್ರಧಾನ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವಲ್ಲಿ ಮುಂಚೂಣಿಯಲ್ಲಿರುತ್ತಾಳೆ.

ಹಾಗಿದ್ದರೆ ಮದುವೆಯಾದ ಬಳಿಕ ಹೆಣ್ಣು ಗಂಡ, ಗಂಡನ ಮನೆಯ ಸ್ವತ್ತೇ? ಅನ್ನುವ ಪ್ರಶ್ನೆಗೆ ಉತ್ತರವೆಂಬಂತೆ ಕೆಲವರ್ಷಗಳ ಹಿಂದೆ ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು. 'ಮಗಳು ಸದಾ ಮಗಳಾಗಿಯೇ ಇರುತ್ತಾಳೆ. ಆದರೆ, ಮಗ ಮದುವೆ ಆಗುವವರೆಗೆ ಮಾತ್ರ ಮಗನಾಗಿ ಇರುತ್ತಾನೆ' ಎನ್ನುವ ನ್ಯಾಯಮೂರ್ತಿ ಅರುಣ್ ಮಿಶ್ರಾ ಅವರ ತೀರ್ಪು ತುಸು ಸಮಾಧಾನ ತಂದಿತ್ತು. ಅಂತೆಯೇ ಪುರಾಣಗಳಲ್ಲಿರುವ ದೇವರ ಹೆಸರುಗಳನ್ನು ಗಮನಿಸಿದಾಗ ಶಿವಪಾರ್ವತಿ, ಲಕ್ಷ್ಮಿನರಸಿಂಹ, ರಾಧಾಕೃಷ್ಣ, ಸೀತಾರಾಮ, ಸೀತಾಪತಿ ಹೀಗೆ ಅನೇಕ ದೇವರ ಹೆಸರುಗಳ ಜತೆಗೆ ದೇವತೆಯರ ಹೆಸರೂ ಥಳುಕು ಹಾಕಿಕೊಂಡಿವೆ. ಶಿವನಿಗೆ ತಾನು ಅರ್ಧನಾರೀಶ್ವರ ಎಂದು ಹೇಳಿಕೊಳ್ಳಲು ಯಾವುದೇ ಅಳುಕಿಲ್ಲ.

ಹೆಣ್ಣು-ಗಂಡು ಇಬ್ಬರ ದೇಹವಷ್ಟೇ ಅಲ್ಲ ಮನಸುಗಳೂ ಒಂದಾದಲ್ಲಿ ಮಾತ್ರ ಅರ್ಧನಾರೀಶ್ವರನ ಪರಿಕಲ್ಪನೆ ಸಾಕಾರವಾಗಲು ಸಾಧ್ಯ. ಆಗ ನಾನು ಇಂಥವರಿಗೇ ಸೇರಿದವಳು, ಸೇರಿದವನು ಅನ್ನುವ ಪ್ರಶ್ನೆಯೇ ಇಬ್ಬರಿಗೂ ಬಾರದು. ಆ ಸ್ಥಿತಿ ತಲುಪಲು ಅನೇಕ ವರ್ಷಗಳು ಬೇಕಾಗುತ್ತವೆ ಅನ್ನುವುದೂ ನಿಜ. 'ಅಷ್ಟಕ್ಕೂ ಈ ಹೆಸರಿನಲ್ಲೇನಿದೆ ಬಿಡಿ' ಅನ್ನುವ ಶೇಕ್ಸ್‌ಪಿಯರ್‌ನ ಪ್ರಶ್ನೆ ನಿಮ್ಮದೂ ಆಗಿದ್ದರೆ, 'ಹೆಸರಿನಲ್ಲಿ ನಮ್ಮ ಗುರುತಿದೆ, ಅಸ್ತಿತ್ವವಿದೆ' ಅನ್ನುವ ಉತ್ತರ ಈಗಿನ ಹೆಣ್ಣುಮಕ್ಕಳದ್ದು. ಹಾಗಾಗಿ, ಅವಳ ಹೆಸರು ಬದಲಿಸುವ ಮುನ್ನ ಅವಳ ಸಮ್ಮತಿ ಇದೆಯೇ ಎಂದು ಒಮ್ಮೆ ಕೇಳುವುದೊಳಿತು. ಅಷ್ಟಕ್ಕೂ ನಮ್ಮ ರಾಷ್ಟ್ರಕವಿ, ರಸಋಷಿ ಕುವೆಂಪು ಅವರು ತಮ್ಮ 'ಸ್ವರ್ಗದ್ವಾರದಿ ಯಕ್ಷಪ್ರಶ್ನೆ' ಕವಿತೆಯಲ್ಲಿ ಹೇಳಿಕೊಂಡಿರುವಂತೆ ಅವರಿಗೆ ಸ್ವರ್ಗದ ಬಾಗಿಲು ತೆಗೆದದ್ದು ನಾನು 'ಹೇಮಿಯ ಗಂಡ!' ಎಂದು ಹೆಂಡತಿಯ ಹೆಸರು ಹೇಳಿಕೊಂಡ ಮೇಲೆಯೇ! ❖

ಕಾನೂನಿನಲ್ಲಿ ಕಟ್ಟುಪಾಡುಗಳಿಲ್ಲ...

ಹೆಸರು ಬದಲಾವಣೆಗೆ ಕಾನೂನಿನಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ. ಹೆಸರು ನಿಮ್ಮ ಅಸ್ತಿತ್ವವನ್ನು ತೋರಿಸುವಂಥದ್ದು. ಆ ಮೂಲಕ ಸಮಾಜದಲ್ಲಿ ಗುರುತಾಗಿರುತ್ತೇವೆ. ಮದುವೆಯ ನಂತರ ಹೆಣ್ಣಿನ ಹೆಸರು ಬದಲಾಗಲೇಬೇಕು ಅನ್ನುವ ಕಾನೂನು ಇಲ್ಲ. ಅದನ್ನು ನಾವಾಗಿಯೇ ಮಾಡಿಕೊಳ್ಳುತ್ತಿದ್ದೇವೆ.

ಜಾತಕದ ವಿಷಯ ಅವರ ವೈಯಕ್ತಿಕ ನಂಬಿಕೆ. ಗಂಡನ ಹೆಸರು ಬೇಕು ಅಂತ ಹೆಂಡತಿ ತನ್ನ ಹೆಸರಿನೊಂದಿಗೆ ಸೇರಿಸಿಕೊಳ್ಳುವಂಥದ್ದು ವೈಯಕ್ತಿಕ ಆಯ್ಕೆಯಷ್ಟೇ. ಹೆತ್ತವರು ಇಟ್ಟ ಹೆಸರನ್ನೇ ಮದುವೆಯ ನಂತರವೂ ಬಳಸುತ್ತೇನೆ ಎನ್ನುವುದು ಆ ಹೆಣ್ಣಿನ ಗಟ್ಟಿತನದ, ದೃಢ ನಿಲುವಿನ ಪ್ರತೀಕ. ಕೆಲವರು ಇಷ್ಟಪಟ್ಟೇ ತಮ್ಮ ಹೆಸರು ಬದಲಿಸಿಕೊಳ್ಳಬಹುದು. ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆ.

–ಮಂಜುಳಾ ದೇವಿ, ವಕೀಲೆ, ಬೆಂಗಳೂರು



ಸ್ವಹಿತ ಕಾಪಿಡುವುದು ಹೇಗೆ?

ಧಾರಿಣಿ ಮಾಯಾ

ಶಾಲಾ-ಕಾಲೇಜು ಸಮಯದಲ್ಲಿ ಓದು ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂದಿದ್ದ ಸೌಮ್ಯ ಮದುವೆಯಾದ ಮೇಲೆ ಅವಳ ಬದುಕಿನ ದಿಕ್ಸೂಚಿಯೇ ಬದಲಾಗಿತ್ತು. ಇಪ್ಪತ್ತು ವರ್ಷಗಳಿಂದ ಆಕೆ ತನ್ನ ಕುಟುಂಬದ ಒಳಿತಿಗಾಗಿ ಶಕ್ತಿ ಮೀರಿ ತನ್ನನ್ನೇ ಒಪ್ಪಿಸಿಕೊಂಡಿದ್ದಳು. ಗಂಡ-ಮಕ್ಕಳು, ಅತ್ತೆ ಮಾವನಿಗೆ ಏನೂ ಕೊರತೆಯಾಗದಂತೆ ಅವರ ಸಮಯ ಸಂದರ್ಭಕ್ಕೆ ಸದಾ ಗಟ್ಟಿಯಾಗಿ ನಿಂತಿದ್ದಳು. ಇವುಗಳ ನಡುವೆ ಅವಳ ಆಸೆ, ಆಕಾಂಕ್ಷೆಗಳೆಲ್ಲ ಎಂದೋ ಗಾಳಿಗೆ ತೇಲಿ ಹೋಗಿತ್ತು.

ಬರುಬರುತ್ತಾ ತನಗೇನು ಬೇಕು ಎನ್ನುವುದನ್ನೆ ಮರೆತಂತೆ ಕಂಡಳು ಸೌಮ್ಯ. ಇತರಿಗಾಗಿ ಬದುಕುವ ಅವಳು ಆಗಾಗ್ಗೆ ಒಳಗೊಳಗೆ ತನಗಾಗಿ ಬದುಕುತ್ತಿಲ್ಲವಲ್ಲ ಎಂದು ಪರಿತಪಿಸಿದ್ದೂ ಉಂಟು.

–ಇದು ತನ್ನ ಬದುಕಿನ ಬಗ್ಗೆ ಒಂದಿಷ್ಟು ಯೋಚಿಸದೇ ಇರುವ ಬಹುತೇಕ ಹೆಣ್ಣುಮಕ್ಕಳ ಕಥೆ. ಇಲ್ಲಿ ಸೌಮ್ಯವೆಂಬುದು ಅನ್ವರ್ಥ ರೂಪಕವಷ್ಟೆ. ತನಗಾಗಿ ಸಮಯ ಕೊಟ್ಟುಕೊಳ್ಳಲು ಗೊತ್ತಿಲ್ಲದ, ತನಗೆ ಏನು ಬೇಕು ಎನ್ನುವುದನ್ನು ಮರೆತಂತೆ ಕಾಣುವ ಹಲವು ಹೆಣ್ಣುಮಕ್ಕಳು ನಮ್ಮ ನಡುವೆ ಇದ್ದಾರೆ.

ವೃತ್ತಿ ಹಾಗೂ ಮನೆಯನ್ನು ಯಶಸ್ವಿಯಾಗಿ ನಿಭಾಯಿಸಿ, ಸಾರ್ಥಕತೆ ಅನುಭವಿಸಿದ ಹೆಣ್ಣುಮಕ್ಕಳನ್ನು ಕಂಡಾಗಲೆಲ್ಲ, ಎಲ್ಲೇ ಇದ್ದರೂ ತಮ್ಮ ವ್ಯಕ್ತಿತ್ವ ಬಿಟ್ಟುಕೊಡದ ಹೆಣ್ಣುಮಕ್ಕಳನ್ನು ನೋಡಿದಾಗ ಅವರಂತಾಗಬೇಕು ಎಂದು ಆಸೆ ಪಟ್ಟಳು ಸೌಮ್ಯ. ಹಾಗೆ ಆಗಬೇಕು ನಿರ್ಧರಿಸಿದ ಕ್ಷಣದಿಂದ ತಿಂಗಳಿಗೊಮ್ಮೆ ಸಿನಿಮಾ, ರೆಸ್ಟೋರೆಂಟ್ ಎಂದು ಗೆಳತಿಯರೊಡನೆ ಸುತ್ತಾಡಿದಳು. ತನ್ನಿಷ್ಟದ ಚಿತ್ರಕಲೆ, ಸಂಗೀತಾಭ್ಯಾಸವನ್ನೂ ಶುರುವಿಟ್ಟುಕೊಂಡಳು. ಸೌಮ್ಯಳ ಈ ಬದಲಾವಣೆಯನ್ನು ಸಹಿಸದ ಕುಟುಂಬದ ಸದಸ್ಯರೇ ಅವಳಿಗೆ 'ಸ್ವಾರ್ಥಿ' ಎಂಬ ಹಣೆಪಟ್ಟಿ ಕೊಟ್ಟರು.

ಎಲ್ಲರನ್ನೂ ಪ್ರೀತಿಸುವ, ನಿಭಾಯಿಸುವ ಭರದಲ್ಲಿ ನಮ್ಮನ್ನೇ ಪ್ರೀತಿಸಿಕೊಳ್ಳಲು, ಕಾಳಜಿ ಮಾಡಲು ಮರೆತುಹೋಗಿರುತ್ತೇವೆ. ನಮ್ಮನ್ನು ನಾವು ಪ್ರೀತಿಸುವುದು ಸ್ವಾರ್ಥವಲ್ಲ. ಅದು ಅತ್ಯವಶ್ಯಕ.

ಕುಟುಂಬಕ್ಕಾಗಿ ಬದುಕನ್ನು ಸವೆಸುವ ಹೆಣ್ಣುಮಕ್ಕಳಿಗೆ ಬದುಕಿನ ಯಾವುದೋ ಹಂತದಲ್ಲಿ 'ಗಂಧದ ಕೊರಡಾಗುತ್ತಿದ್ದೇನೆ' ಎಂದು ಅನಿಸುವುದು ಸಹಜ. ಎಲ್ಲ ಇದ್ದರೂ ತನಗಾಗಿ ಏನೂ ಇಲ್ಲ ಎಂಬ ಶೂನ್ಯ ಭಾವ ಆವರಿಸುತ್ತದೆ. ಕುಟುಂಬದ ಸದಸ್ಯರ ಬದುಕು ಒಂದು ದಾರಿ ಕಂಡುಕೊಂಡ ಮೇಲೆ ತನ್ನ 'ಅಸ್ತಿತ್ವ'ದ ಬಗ್ಗೆ ಹಲವು ಪ್ರಶ್ನೆಗಳು ಮೂಡುವುದು ಸಹಜ. 'ನಮಗಾಗಿ ಬದುಕಬೇಕು' ಎಂದು ಅಂದುಕೊಳ್ಳುವಷ್ಟರಲ್ಲಿ ಸಮಯ ಸರಿದು ಹೋಗಿರುತ್ತದೆ. ಸ್ವಹಿತ ಕಾಪಾಡಿಕೊಳ್ಳದೇ ಇದ್ದರೆ 'ಪಶ್ಚತ್ತಾಪ'ದ ಬೇಗುದಿಯಲ್ಲಿ ಉಳಿಯಬೇಕಾಗಬಹುದು. ಹಾಗಾಗಿ ತನಗಾಗಿ ಹೆಣ್ಣುಮಕ್ಕಳು ಅಲ್ಪಮಟ್ಟಿಗೆ ಸಮಯ ಮೀಸಲಿಡುವುದು ಸ್ವಾರ್ಥ ಹೇಗಾದೀತು?. ಇತರರಿಗೆ ತೊಂದರೆಯಾಗದಂತೆ, ತನ್ನ ಸುಖವನ್ನು ಧ್ಯೇಯವಾಗಿಟ್ಟುಕೊಂಡು ಸ್ವಲ್ಪ ಸಮಯವಾದರೂ ಬದುಕುವುದು ಸ್ವಹಿತ ತಾನೇ. ಆರೋಗ್ಯಕರ ಹಾಗೂ ಅನಾರೋಗ್ಯಕರ ಸ್ವಾರ್ಥಗಳ ನಡುವೆಯೂ ಭಿನ್ನತೆ ಇದೆ . 'ಸ್ವಾರ್ಥಿ' ಎಂಬ ಹಣೆಪಟ್ಟಿಗೆ ಹೆದರಿ, ಎದೆಗುಂದಬೇಕಾಗಿಲ್ಲ. ಜವಾಬ್ದಾರಿಯನ್ನು ಅರಿತು ಸಂಯಮದಿಂದ ವರ್ತಿಸುವುದು ಮುಖ್ಯವಷ್ಟೆ.

ಕೌಟುಂಬಿಕ ಜವಾಬ್ದಾರಿಗಳ ನಡುವೆ ಸ್ವಸಮಯಕ್ಕೆ ಹೆಣ್ಣುಮಕ್ಕಳು ಸಾಮಾನ್ಯವಾಗಿ ಎರಡನೆಯ ಸ್ಥಾನ ನೀಡಿರುತ್ತಾರೆ. ಹಾಗಾಗಿ ದೈಹಿಕವಾಗಿ, ಮಾನಸಿಕವಾಗಿ ಕುಗ್ಗಿ ಹೋಗುವುದು ಸಹಜ. ಎಲ್ಲರನ್ನೂ ಪ್ರೀತಿಸುವ, ನಿಭಾಯಿಸುವ ಭರದಲ್ಲಿ ನಮ್ಮನ್ನೇ ಪ್ರೀತಿಸಿಕೊಳ್ಳಲು, ಕಾಳಜಿ ಮಾಡಲು ಮರೆತುಹೋಗಿರುತ್ತೇವೆ. ನಮ್ಮನ್ನು ನಾವು ಪ್ರೀತಿಸುವುದು ಸ್ವಾರ್ಥವಲ್ಲ. ಅದು ಅತ್ಯವಶ್ಯಕ.

ಸ್ಪಷ್ಟತೆ ಇರಲಿ

ಜವಾಬ್ದಾರಿಗಳ ಮೂಟೆಯನ್ನು ಎಷ್ಟು ಬೇಕೋ ಅಷ್ಟು ಹೊತ್ತು, ಆಯಾಸ ಎನಿಸಿದಾಗ ಆ ಮೂಟೆಯನ್ನು ಇತರರಿಗೆ ದಾಟಿಸಿ ತುಸು ವಿರಾಮ ಪಡೆಯುವುದರಲ್ಲಿ ತಪ್ಪಿಲ್ಲ. ಜವಾಬ್ದಾರಿಗಳು ಅತಿ ಭಾರ ಎನಿಸಿದಾಗ, ಆಗುವುದೇ ಇಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. 'ಆದರ್ಶ ತಾಯಿ, ಸೊಸೆ, ಮಗಳು' ಹೀಗೆ ಈ ಎಲ್ಲ ಭಾರಗಳನ್ನು ಹೊರುವುದಕ್ಕಿಂತ, ಪ್ರಾಯೋಗಿಕವಾಗಿ ಬದುಕುವುದು ತುಂಬಾ ಮುಖ್ಯ. ಯಾವುದಕ್ಕೆ ಯಾವಾಗ ಎಷ್ಟು ಆದ್ಯತೆ ಕೊಡಬೇಕು? ಪಶ್ಚಾತ್ತಾಪವಿಲ್ಲದೇ ಮಕ್ಕಳನ್ನು ಬೆಳೆಸುತ್ತಾ, ತಾನೂ ಬೆಳೆಯಬಹುದು ಎಂಬುದರ ಕಡೆಗೆ ಗಮನಕೊಡುವುದು ಒಳಿತು.

ಬದುಕಿನಲ್ಲಿ ಸ್ಪಷ್ಟತೆ ಇದ್ದಾಗ, ಧೈರ್ಯವೊಂದು ಜತೆಗಿದ್ದರೆ ಎಂಥ ವಯಸ್ಸಿನಲ್ಲಿಯೂ ಯಾವುದೇ ಕೌಶಲವನ್ನಾದರೂ ಕಲಿಯಬಹುದು. ಹೊಸತನ್ನು ಕಲಿಯುವುದು ಕೂಡ ನಮಗೆ ನಾವು ಕೊಟ್ಟುಕೊಳ್ಳುವ ವಿಶೇಷ ಉಡುಗೊರೆ. ❖

ಟೀಕೆಯನ್ನು ಸ್ವೀಕರಿಸಬೇಕೋ ಬೇಡವೋ?



ಅಂತರಂಗ

ಅಕ್ಷರ ದಾಮ್ಲೆ

● ನನಗೆ ಅಪ್ಪ ಇಲ್ಲ, ಅಮ್ಮ ಇದ್ದರೂ ಬಂಧುಗಳ ನೆರಳಿನಲ್ಲಿಯೇ ಬೆಳೆದೆ. ಎಲ್ಲರ ಋಣದಲ್ಲಿ ಬದುಕಿದ್ದರಿಂದ, ಆತ್ಮವಿಶ್ವಾಸದಿಂದ ಬದುಕಲು ಸಾಧ್ಯವಾಗುತ್ತಿಲ್ಲ. ಹೆಜ್ಜೆ ಹೆಜ್ಜೆಗೂ ಟೀಕೆಗಳನ್ನೇ ಕೇಳಿ ಬೆಳೆದಿದ್ದರಿಂದ ಈಗೀಗ ಟೀಕಿಸುವವರನ್ನು ನೋಡಿದರೆ ಆಕ್ರೋಶವೇ ಉಕ್ಕುತ್ತದೆ. ಬದುಕಿನಲ್ಲಿ ಆತ್ಮವಿಶ್ವಾಸವನ್ನು ರೂಢಿಸಿಕೊಳ್ಳುವುದು ಹೇಗೆ?

ನಾವು ಜೀವನದಲ್ಲಿ ಅರ್ಥಮಾಡಿಕೊಳ್ಳಬೇಕಿರುವ ಒಂದು ಮೂಲ ತತ್ವವೇನೆಂದರೆ, ನಾವು ಇವತ್ತು ಏನಾಗಿದ್ದೇವೋ ಅದಕ್ಕೆ ನಮ್ಮ ಭೂತಕಾಲದ ನಿರ್ಧಾರಗಳು ಅಥವಾ ಸನ್ನಿವೇಶಗಳು ಕಾರಣ. ಆದರೆ ನಮ್ಮ ಭವಿಷ್ಯವು ನಿಂತಿರುವುದು ನಮ್ಮ ಇಂದಿನ ನಡೆಗಳು ಅಥವಾ ನಿರ್ಧಾರಗಳ ಮೇಲೆ. ಹಾಗಾಗಿ ಭವಿಷ್ಯದ ಕುರಿತು ಆಲೋಚಿಸಿ ಅದನ್ನು ರೂಪಿಸುವತ್ತ ನಮ್ಮ ಗಮನವನ್ನು ನೆಡಬೇಕು. ಜನ ಟೀಕೆ ಮಾಡುವುದಕ್ಕೆ ಬಹಳಷ್ಟು ಕಾರಣಗಳಿರಬಹುದು. ಅದನ್ನು ನೀವು ನಿಮ್ಮ ಅಪ್ಪ - ಅಮ್ಮನನ್ನು ಕಳೆದುಕೊಂಡ ಕಾರಣಕ್ಕೆ ಅಂತ ಅಂದುಕೊಳ್ಳಬೇಕಾಗಿಲ್ಲ. ಜನರು ಟೀಕೆ ಮಾಡುತ್ತಾರೆ ಅಂದ ಮಾತ್ರಕ್ಕೆ ನೀವು ನಿಮ್ಮ ಮನಸ್ಸಿನ ನೆಮ್ಮದಿಯನ್ನು ಕಳೆದುಕೊಳ್ಳಬೇಕಿಲ್ಲ. ಟೀಕಿಸುವುದು ಅವರ ಕೆಲಸ. ಆದರೆ ಆ ಟೀಕೆಯನ್ನು ಸ್ವೀಕರಿಸುವುದು ನಿಮ್ಮ ಆಯ್ಕೆ.

ಒಂದು ಬಾರಿ ಬುದ್ಧನ ಬಳಿ ಬಂದು ಒಬ್ಬ ಆತನನ್ನು ಹೀನಾಯವಾಗಿ ಬೈದ. ಹೀಯಾಳಿಸಿದ. ಬುದ್ಧ ಶಾಂತಚಿತ್ತನಾಗಿ ಕುಳಿತಿದ್ದ. ಆ ವ್ಯಕ್ತಿಯ ಬೈಗುಳವೆಲ್ಲ ಆದ ಮೇಲೆ ಬುದ್ಧ ಹೇಳಿದ 'ನೀನು ಬೈದದ್ದನ್ನು ನಾನು ಸ್ವೀಕರಿಸಿಲ್ಲ'. ಅದರರ್ಥ: ಒಬ್ಬ ವ್ಯಕ್ತಿ ನಮಗೇನೋ ಕೊಟ್ಟಾಗ ನಾವು ಸ್ವೀಕರಿಸದಿದ್ದರೆ, ಅದು ಯಾರಲ್ಲಿ ಉಳಿದುಕೊಳ್ಳುತ್ತದೆ? ಅದು ಕೊಡಲು ಹೊರಟವನ ಬಳಿಯೇ ಉಳಿದುಕೊಳ್ಳುತ್ತದೆ. ಹಾಗೆಯೇ ನಿಮ್ಮನ್ನು ಟೀಕಿಸುವವರ ಟೀಕೆಗಳನ್ನು ನೀವು ಯಾವಾಗ ಸ್ವೀಕರಿಸುವುದನ್ನು ನಿಲ್ಲಿಸುತ್ತೀರೋ, ಆವಾಗ ಅದು ಅವರಲ್ಲೇ ಉಳಿದುಕೊಳ್ಳುತ್ತದೆ.

ಟೀಕೆಗಳ ಕುರಿತು ಪುರಂದರದಾಸರು ಬಹಳ ಉತ್ತಮವಾದ ಕೀರ್ತನೆಯನ್ನು ಬರೆದಿದ್ದಾರೆ. 'ನಿಂದಕರಿರಬೇಕು, ಹಂದಿಯಿದ್ದರೆ ಕೇರಿ ಹೇಗೆ ಶುದ್ಧಿಯೋ ಹಾಂಗೆ'ಎಂದು. ಅದರರ್ಥವೇನೆಂದರೆ ನಿಮ್ಮ ಜೀವನದಲ್ಲಿರುವ ಎಲ್ಲಾ ನಿಂದಕರುಗಳನ್ನು ನಿಮ್ಮಲ್ಲಿರುವ ಕೊಳಕನ್ನು ಸ್ವಚ್ಛ ಮಾಡುವ ವ್ಯಕ್ತಿಗಳನ್ನಾಗಿ ನೋಡಿ. ಆವಾಗ ನಿಮಗೆ ಅವರ ನಿಂದನೆ ನೋವನ್ನುಂಟುಮಾಡುವ ಬದಲು, ಹೊಸ ನಾವೀನ್ಯವನ್ನು ಕೊಡಬಹುದು.

ನಿಂದನೆಗಳನ್ನು ಹೇಗೆ ಸ್ವೀಕರಿಸಬೇಕು ಎನ್ನುವುದಕ್ಕೆ ಈ ಇನ್ನೊಂದು ಕಥೆಯೂ ಬಹಳ ಉತ್ತಮವಾದ ಒಂದು ಕಾಣ್ಕೆಯನ್ನು ಕೊಡುತ್ತದೆ. ಒಂದು ಬಾರಿ ಒಂದು ಕತ್ತೆ ಒಣಗಿ ಹೋಗಿದ್ದ ಬಾವಿಗೆ ಬಿದ್ದಿತಂತೆ. ಅದನ್ನು ನೋಡಿದ ಜನರು, ಹೇಗಾದರೂ ಬಾವಿಯೂ ಒಣಗಿ ಹೋಗಿದೆ ಮತ್ತು ಕತ್ತೆ ಅದರೊಳಗೆ ಬಿದ್ದಿದೆ. ಹಾಗಾಗಿ ಅದನ್ನು ಮೇಲೆತ್ತುವ ಪ್ರಯತ್ನ ಮಾಡುವ ಬದಲು, ಅಲ್ಲೇ ಮಣ್ಣು ಹಾಕಿ ಮುಚ್ಚಿ ಬಿಡೋಣ ಎಂದು ಅಂದುಕೊಂಡರಂತೆ. ಹಾಗೆ ಜನರು ಬಾವಿಯ ಒಳಗೆ ಮಣ್ಣು ಸುರಿಯಲಾರಂಭಿಸಿದರು. ಆದರೆ ಹಾಗೆ ಸುರಿದ ಮಣ್ಣು ತನ್ನನ್ನು ಮಣ್ಣು ಮಾಡಲು ಎಂದು ತಿಳಿಯುವ ಬದಲು, ಕತ್ತೆಯು ಆ ಮಣ್ಣಿನ ರಾಶಿಯ ಮೇಲೆ ಹೆಜ್ಜೆ ಇಡುತ್ತಾ, ಮಣ್ಣಿನ ಪ್ರಮಾಣ ಹೆಚ್ಚಿದಂತೆ, ಅದು ಎತ್ತರಕ್ಕೆ ಏರುತ್ತಾ ಮೇಲೇರಿ ಬಂತು. ಹಾಗೆಯೇ, ನಮ್ಮ ಮೇಲೆ ಆಗುವ ನಿಂದನೆಗಳನ್ನು ನಾವು ನಮ್ಮ ಬೆಳವಣಿಗೆಯ ಮೆಟ್ಟಿಲುಗಳನ್ನಾಗಿಸಿದಾಗ, ಸಾಫಲ್ಯವನ್ನು ಕಾಣಬಹುದು. ಅದರಿಂದಲೇ ಆತ್ಮವಿಶ್ವಾಸವನ್ನು ಗಳಿಸಬಹುದು. ❖

ಕ್ರಿಸ್‌ಮಸ್‌ಗೆ ಕೋಕೋ ಸಿಹಿ



ರಸಾಸ್ವಾದ

ಕೋಕೋ ಪೌಡರ್ ಉಪಯೋಗಿಸಿ ತಯಾರಿಸಬಹುದಾದ ರುಚಿಕರ ತಿನಿಸುಗಳ ರೆಸಿಪಿ ನೀಡಿದ್ದಾರೆ ವೇದಾವತಿ ಎಚ್‌. ಎಸ್‌.

ಚಾಕೋಲೇಟ್ ಕೇಕ್



ಬೇಕಾಗುವ ಸಾಮಗ್ರಿಗಳು: 1-1/4 ಕಪ್ (150 ಗ್ರಾಂ) ಮೈದಾ, 1/4 ಕಪ್ (25 ಗ್ರಾಂ) ಕೋಕೋ ಪೌಡರ್, 1/2 ಕಪ್ (80ಗ್ರಾಂ) ಬೆಣ್ಣೆ, 1/4 ಕಪ್ (60ಗ್ರಾಂ) ಸಕ್ಕರೆ, 1 ಟೀ ಚಮಚ ಬೇಕಿಂಗ್ ಪೌಡರ್, 1/2 ಟೀ ಚಮಚ ಬೇಕಿಂಗ್ ಸೋಡಾ, 5 ಟೇಬಲ್ ಚಮಚ ಕಂಡೆನ್ಸ್ಡ್ ಮಿಲ್ಕ್, 1/2 ಕಪ್ (125 ಎಂಎಲ್) ಮಿಲ್ಕ್, 1 ಟೀ ಚಮಚ ವೆನಿಲ್ಲಾ ಎಸೆನ್ಸ್, 1 ಟೀ ಚಮಚ ಇನ್ಸ್ಟಂಟ್ ಕಾಫಿ ಪುಡಿ.

ಸಕ್ಕರೆ ನೀರು ತಯಾರಿಸಲು: 1/2 ಕಪ್ ನೀರು, 3 ಟೇಬಲ್ ಚಮಚ ಸಕ್ಕರೆ. ಒಂದು ಬಟ್ಟಲಿಗೆ ಹಾಕಿ ಕರಗಿಸಿಕೊಳ್ಳಿ. ಬಳಿಕ ಆರಲು ಬಿಡಿ.

ಚಾಕೋಲೇಟ್ ಟ್ರಫಲ್ ಐಸಿಂಗ್ ತಯಾರಿಸಲು: 2 ಕಪ್ (400 ಎಂಎಲ್) ಗಟ್ಟಿಯಾದ ಕ್ರೀಮ್, 4 ಕಪ್ (750ಗ್ರಾಂ ಡಾರ್ಕ್ ಚಾಕೋಲೇಟ್), 2 ಟೇಬಲ್ ಚಮಚ (10ಗ್ರಾಂ) ಬೆಣ್ಣೆ. ಕ್ರೀಮ್‌ನ್ನು ಬಟ್ಟಲಿಗೆ ಹಾಕಿ ಬಿಸಿಮಾಡಿ ಅದನ್ನು ಚಿಕ್ಕದಾಗಿ ಕತ್ತರಿಸಿಕೊಂಡ ಡಾರ್ಕ್ ಚಾಕೋಲೇಟ್‌ಗೆ ಸೇರಿಸಿ. ಬೆಣ್ಣೆಯನ್ನು ಹಾಕಿ ಚೆನ್ನಾಗಿ ನುಣುಪಾಗಿ ಹೊಳಪು ಬರುವರೆಗೆ ಮಿಶ್ರಣ ಮಾಡಿ. ಈ ಟ್ರಫಲ್ ಐಸಿಂಗ್‌ಅನ್ನು 3 ರಿಂದ 4 ಗಂಟೆ ಹಾಗೇ ಬಿಡಿ.

ತಯಾರಿಸುವ ವಿಧಾನ: ಜರಡಿಗೆ ಮೈದಾ, ಕೋಕೋ ಪೌಡರ್, ಬೇಕಿಂಗ್ ಪೌಡರ್, ಬೇಕಿಂಗ್ ಸೋಡಾವನ್ನು ಹಾಕಿ ಎರಡು ಬಾರಿ ಜರಡಿ ಹಿಡಿಯಿರಿ. ಬಟ್ಟಲಿಗೆ ಬೆಣ್ಣೆ ಮತ್ತು ಸಕ್ಕರೆಯನ್ನು ಹಾಕಿ ಬೀಟರ್‌ನಲ್ಲಿ 2 ನಿಮಿಷ ಬೀಟ್ ಮಾಡಿ ಕ್ರೀಮ್ ತಯಾರಿಸಿಕೊಳ್ಳಿ. ಇದಕ್ಕೆ ಕಂಡೆನ್ಸ್ಡ್ ಮಿಲ್ಕ್ ಸೇರಿಸಿ 2 ನಿಮಿಷ ಬೀಟ್ ಮಾಡಿ. ಬಟ್ಟಲಿಗೆ ಹಾಲು, ಕಾಫಿ ಪುಡಿ, ವೆನಿಲ್ಲಾ ಎಸೆನ್ಸ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಜರಡಿ ಹಿಡಿದ ಮಿಶ್ರಣಕ್ಕೆ ತಯಾರಿಸಿದ ಹಾಲಿನ ಮಿಶ್ರಣವನ್ನು ಸ್ವಲ್ಪ ಸ್ವಲ್ಪ ಸೇರಿಸಿಕೊಳ್ಳುತ್ತಾ ಕಲಸಿಕೊಳ್ಳಿ. ಬಳಿಕ ಕೇಕ್ ತಯಾರಿಸುವ ಬಟ್ಟಲಿಗೆ ಬಟರ್ ಪೇಪರ್ ಹಾಕಿ, ತಯಾರಿಸಿದ ಮಿಶ್ರಣವನ್ನು ಹಾಕಿ ಸಮತಟ್ಟಾಗಿ ಮಾಡಿಕೊಳ್ಳಿ. ಓವನ್‌ನಲ್ಲಿಟ್ಟು 180 ಡಿಗ್ರಿಯಲ್ಲಿ ಅರ್ಧ ಗಂಟೆ ಬೇಯಿಸಿ. ಕೇಕ್ ಪೂರ್ತಿ ಆರಿದ ಬಳಿಕ ಮೇಲಿನ ಭಾಗವನ್ನು ತೆಳುವಾಗಿ ಕತ್ತರಿಸಿಕೊಳ್ಳಿ. ಹಾಗೆಯೇ ಮಧ್ಯದಲ್ಲಿ ಕತ್ತರಿಸಿಕೊಳ್ಳಿ. ಕತ್ತರಿಸಿದ ಭಾಗಕ್ಕೆ ಸಕ್ಕರೆ ನೀರನ್ನು ಹಚ್ಚಿ. ನಂತರ ತಯಾರಿಸಿಕೊಂಡ ಟ್ರಫಲ್ ಐಸಿಂಗ್ ಪೂರ್ತಿ ಭಾಗಕ್ಕೂ ಹಾಗೆ ಹಚ್ಚಿ. ಹಾಗೆಯೇ ಮೇಲಿನ ಭಾಗಕ್ಕೂ ಸಕ್ಕರೆ ನೀರು ಮತ್ತು ಟ್ರಫಲ್ ಐಸಿಂಗ್ ಹಾಕಿ. ಕೇಕಿನ ಸುತ್ತಲೂ ಟ್ರಫಲ್ ಐಸಿಂಗ್‌ನಿಂದ ಅಲಂಕರಿಸಿ ಹತ್ತು ನಿಮಿಷ ಫ್ರಿಜ್‌ನಲ್ಲಿಡಿ. ಓವನ್‌ನಲ್ಲಿ ಸ್ವಲ್ಪ ಟ್ರಫಲ್ ಐಸಿಂಗ್‌ಅನ್ನು 10 ಸೆಕೆಂಡ್ ಬಿಸಿ ಮಾಡಿ. ಆಗ ಅದು ತೆಳುವಾಗಿ ಹೊಳಪಾಗುತ್ತದೆ. ಫ್ರಿಜ್‌ನಿಂದ ಕೇಕನ್ನು ತೆಗೆದು ಟ್ರಫಲ್ ಐಸಿಂಗ್‌ನಿಂದ ನಿಮಗೆ ಬೇಕಾದ ರೀತಿಯಲ್ಲಿ ಅಲಂಕರಿಸಿ. ಈಗ ಚಾಕೋಲೇಟ್ ಕೇಕ್ ಸವಿಯಲು ಸಿದ್ಧ.

ಚಾಕೋಲೇಟ್ ಚಿಪ್ ಕುಕ್ಕೀಸ್

ಬೇಕಾಗುವ ಸಾಮಗ್ರಿಗಳು: ಬೆಣ್ಣೆ 1/4 ಕಪ್, ಸಕ್ಕರೆ ಪುಡಿ 1/3 ಕಪ್, ವೆನಿಲ್ಲಾ ಎಸೆನ್ಸ್ 1/2 ಟೀ ಚಮಚ, ಮೊಟ್ಟೆ 1, ಮೈದಾ 3/4 ಕಪ್, ಕೋಕೋ ಪೌಡರ್ 1/4 ಕಪ್, ಬೇಕಿಂಗ್ ಪೌಡರ್ 1 ಟೀ ಚಮಚ, ಬೇಕಿಂಗ್ ಸೋಡಾ 1/4 ಟೀ ಚಮಚ, ಚಾಕೊಲೇಟ್ ಚಿಪ್ 1/4 ಕಪ್.

ತಯಾರಿಸುವ ವಿಧಾನ: ಬಟ್ಟಲಿಗೆ ಬೆಣ್ಣೆ ಮತ್ತು ಸಕ್ಕರೆ ಪುಡಿಯನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ವೆನಿಲ್ಲಾ ಎಸೆನ್ಸ್, ಮೊಟ್ಟೆಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಜರಡಿಗೆ ಮೈದಾ, ಕೋಕೋ ಪೌಡರ್, ಬೇಕಿಂಗ್ ಪೌಡರ್, ಬೇಕಿಂಗ್ ಸೋಡಾ ಹಾಕಿ ಜರಡಿ ಹಿಡಿದು ಅದನ್ನು ತಯಾರಿಸಿಕೊಂಡ ಮಿಶ್ರಣಕ್ಕೆ ಸೇರಿಸಿ ಚೆನ್ನಾಗಿ ಹೊಂದುವಂತೆ ಮಿಶ್ರಣ ಮಾಡಿ. ಈ ಮಿಶ್ರಣಕ್ಕೆ ಚಾಕೋಲೇಟ್ ಚಿಪ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ತಯಾರಿಸಿದ ಮಿಶ್ರಣವನ್ನು ಕೈಯಿಂದ ನಾದಿಕೊಂಡು ನಿಮಗೆ ಬೇಕಾದ ಅಳತೆಯ ಉಂಡೆಗಳನ್ನು ತಯಾರಿಸಿ ಚಪ್ಪಟೆ ಮಾಡಿಕೊಳ್ಳಿ. ಎಲ್ಲವನ್ನೂ ಹಾಗೆ ತಯಾರಿಸಿ, ಓವನ್ ತಟ್ಟೆಗೆ ಬಟರ್ ಪೇಪರ್ ಹಾಕಿ ಅದರಲ್ಲಿ ಜೋಡಿಸಿ. ಬಳಿಕ ಓವನ್‌ನಲ್ಲಿಟ್ಟು 160 ಡಿಗ್ರಿಯಲ್ಲಿ 20 ನಿಮಿಷ ಬೇಯಿಸಿ. ಚಾಕೋಲೇಟ್ ಚಿಪ್ ಕುಕ್ಕೀಸ್ ರೆಡಿ.


ಚಾಕೋಲೇಟ್ ಕಪ್ ಕೇಕ್



ಬೇಕಾಗುವ ಸಾಮಗ್ರಿಗಳು: ಒಂದೂವರೆ ಕಪ್ ಮೈದಾ, 1 ಟೀ ಚಮಚ ಬೇಕಿಂಗ್ ಸೋಡಾ, 1/2 ಟೀ ಚಮಚ ಉಪ್ಪು, 1/2 ಕಪ್ ಕೋಕೋ ಪೌಡರ್, 1 ಕಪ್ ಸಕ್ಕರೆ, 1 ಟೀ ಚಮಚ ಇನ್‌ಸ್ಟಂಟ್ ಕಾಫಿ ಪುಡಿ, 1 ಕಪ್ ನೀರು, 1/3 ಕಪ್ ವೆಜಿಟಟೇಬಲ್ ಎಣ್ಣೆ, 1 ಮಧ್ಯಮ ಗಾತ್ರದ ಮೊಟ್ಟೆ, 1 ಟೇಬಲ್ ಚಮಚ ವಿನೆಗರ್.

ತಯಾರಿಸುವ ವಿಧಾನ: ಜರಡಿಗೆ ಮೈದಾ, ಬೇಕಿಂಗ್ ಸೋಡಾ, ಉಪ್ಪು, ಕೋಕೋ ಪೌಡರ್ ಹಾಕಿ ಜರಡಿ ಹಿಡಿಯಿರಿ. ಬಳಿಕ ಸಕ್ಕರೆ ಮತ್ತು ಕಾಫಿ ಪುಡಿ ಸೇರಿಸಿ ಮಿಶ್ರಣ ಮಾಡಿ. ನೀರು, ಎಣ್ಣೆ, ಮೊಟ್ಟೆ, ವಿನೆಗರ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಕಪ್ ಕೇಕ್ ತಯಾರಿಸುವ ಕಪ್‌ಗಳಿಗೆ ತಯಾರಿಸಿದ ಮಿಶ್ರಣವನ್ನು ಹಾಕಿ. ಈ ಕಪ್‌ಗಳನ್ನು ಓವನ್‌ನಲ್ಲಿಟ್ಟು 180 ಡಿಗ್ರಿಯಲ್ಲಿ 20 ನಿಮಿಷ ಬೇಯಿಸಿ. ಬೇಕಿದ್ದರೆ ಚಾಕೋಲೇಟ್ ಟ್ರಫಲ್ ಐಸಿಂಗ್‌ನಿಂದ ಅಲಂಕರಿಸಿ.

ಚಾಕೋಲೇಟ್ ಬ್ರೌನಿ



ಬೇಕಾಗುವ ಸಾಮಗ್ರಿಗಳು: ಡಾರ್ಕ್ ಚಾಕೊಲೇಟ್ 1 ಕಪ್ (200 ಗ್ರಾಂ), ಉಪ್ಪು ರಹಿತ ಬೆಣ್ಣೆ 1/2 ಕಪ್ (120 ಗ್ರಾಂ), ಮೈದಾ 3/4 ಕಪ್ (90 ಗ್ರಾಂ), ಕೋಕೋ ಪೌಡರ್ 1/3 ಕಪ್ (40 ಗ್ರಾಂ), ಬೇಕಿಂಗ್ ಪೌಡರ್ 2 ಟೀ ಚಮಚ, ಉಪ್ಪು 1/4 ಟೀ ಚಮಚ, ಸಕ್ಕರೆ 3/4 ಕಪ್ (150 ಗ್ರಾಂ), ವೆನಿಲ್ಲಾ ಎಸೆನ್ಸ್ 1 ಟೀ ಚಮಚ, ಕ್ರೀಮ್‌ಯುಕ್ತ ಗಟ್ಟಿ ಮೊಸರು 3/4 ಕಪ್ (180 ಗ್ರಾಂ) ಅಥವಾ ಎರಡು ಮೊಟ್ಟೆ, ಅಲಂಕಾರಕ್ಕೆ ವಾಲ್ ನಟ್ಸ್ ಸ್ವಲ್ಪ, ಚಾಕೋ ಚಿಪ್ಸ್ ಸ್ವಲ್ಪ.

ತಯಾರಿಸುವ ವಿಧಾನ: ಒಂದು ಗ್ಲಾಸ್ ಅಥವಾ ಸ್ಟೀಲ್ ಬಟ್ಟಲಿಗೆ ಬೆಣ್ಣೆ ಮತ್ತು ಚಿಕ್ಕದಾಗಿ ಕತ್ತರಿಸಿಕೊಂಡ ಡಾರ್ಕ್ ಚಾಕೊಲೇಟ್ ಹಾಕಿ. ಮತ್ತೊಂದು ಪಾತ್ರೆಗೆ ನೀರನ್ನು ಹಾಕಿ ಚೆನ್ನಾಗಿ ಕುದಿಸಿಕೊಳ್ಳಿ. ಕುದಿಯುತ್ತಿರುವ ನೀರಿನ ಮೇಲೆ ಬೆಣ್ಣೆ ಮತ್ತು ಚಾಕೊಲೇಟ್ ಹಾಕಿರುವ ಬಟ್ಟಲನ್ನು ಇಟ್ಟು ಅದು ಕರಗುವರೆಗೆ ಮಿಶ್ರಣ ಮಾಡಿ. ನುಣ್ಣನೆ ಹೊಳಪು ಬರುವರೆಗೆ ಮಿಶ್ರಣ ಮಾಡುತ್ತಿರಿ. ಬಳಿಕ ಬಟ್ಟಲನ್ನು ನೀರಿನ ಪಾತ್ರೆಯಿಂದ ತೆಗೆಯಿರಿ. ಜರಡಿಗೆ ಮೈದಾ, ಕೋಕೋ ಪೌಡರ್, ಬೇಕಿಂಗ್ ಪೌಡರ್, ಉಪ್ಪುನ್ನು ಹಾಕಿ ಒಂದು ಬಟ್ಟಲಿಗೆ ಜರಡಿ ಹಿಡಿದುಕೊಳ್ಳಿ. ಬಳಿಕ ಚಾಕೋಲೇಟ್ ಮಿಶ್ರಣಕ್ಕೆ ಸಕ್ಕರೆ, ವೆನಿಲ್ಲಾ ಎಸೆನ್ಸ್ ಹಾಕಿ ಮಿಶ್ರಣ ಮಾಡಿ. ನಂತರ ಗಟ್ಟಿ ಮೊಸರು ಅಥವಾ ಮೊಟ್ಟೆಯನ್ನು ಬಳಸುವವರು ಮೊಟ್ಟೆಯನ್ನು ಹಾಕಿ. ಮೊಸರು ಅಥವಾ ಮೊಟ್ಟೆ ಯಾವುದಾದರೂ ಒಂದನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಈಗ ಜರಡಿ ಹಿಡಿದುಕೊಂಡಿರುವ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಮಿಶ್ರಣವು ಗಟ್ಟಿಯಾಗಿರಲಿ. ಮಿಶ್ರಣವನ್ನು ಐದು ನಿಮಿಷ ಹಾಗೇ ಬಿಡಿ. ಬಳಿಕ ಕೇಕ್ ತಯಾರಿಸುವ ಬಟ್ಟಲಿಗೆ ಬಟರ್ ಪೇಪರ್ ಹಾಕಿ ಅದರಲ್ಲಿ ತಯಾರಿಸಿಕೊಂಡ ಮಿಶ್ರಣವನ್ನು ಹಾಕಿ ಸಮತಟ್ಟಾಗಿ ಮಾಡಿಕೊಳ್ಳಿ. ಅದರ ಮೇಲೆ ವಾಲ್ ನಟ್ಸ್ ಮತ್ತು ಚಾಕೋ ಚಿಪ್ಸ್ ಹಾಕಿ. ಇದನ್ನು ಓವನ್‌ನಲ್ಲಿಟ್ಟು 180 ಡಿಗ್ರಿಯಲ್ಲಿ ಅರ್ಧ ಗಂಟೆ ಬೇಯಿಸಿ. ಬೆಂದ ಬಳಿಕ ಓವನ್‌ನಿಂದ ತೆಗೆದು ಆರಲು ಬಿಡಿ. ಬಳಿಕ ಕತ್ತರಿಸಿಕೊಂಡು ಸವಿಯಿರಿ.

ಸೇವೆಗೆ ದೊರಕದ ಕ್ರೀಡಾ ಚಿಕಿತ್ಸಾ ಸಂಕೀರ್ಣ

ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಆವರಣದಲ್ಲಿ ತಲೆಎತ್ತಿದ ಕಟ್ಟಡ • ಚಿಕಿತ್ಸೆಗೆ ರೋಗಿಗಳ ಮೆಚ್ಚುಗೆ

• ವರುಣ ಹೆಗಡೆ

ಜನಾರೋಗ್ಯ ಸತ್ಯದರ್ಶನ

ಬೆಂಗಳೂರು: ಕ್ರೀಡಾ ಗಾಯಗಳಿಗೆ ಚಿಕಿತ್ಸೆ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ತರಬೇತಿ ಒದಗಿಸಲು ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ (ಎಸ್‌ಜಿಐಟಿಒ) ಆವರಣದಲ್ಲಿ ತಲೆಯೆತ್ತಿರುವ ಹೈಟೆಕ್ ಕ್ರೀಡಾ ಚಿಕಿತ್ಸಾ ಸಂಕೀರ್ಣ ಗಡುವು ಮೀರಿದರೂ ಸೇವೆಗೆ ತೆರೆದುಕೊಂಡಿಲ್ಲ.

ಈ ಕಟ್ಟಡದ ಶಿಲಾನ್ಯಾಸವನ್ನು 2021ರ ಜುಲೈನಲ್ಲಿಯೇ ನೆರವೇರಿಸಲಾಗಿತ್ತು. ಆ ವೇಳೆ ಕಟ್ಟಡ ನಿರ್ಮಾಣಕ್ಕೆ 15 ತಿಂಗಳ ಗಡುವು ನೀಡಲಾಗಿತ್ತು. ಆದರೆ, ಕೋವಿಡ್ ಸೇರಿ ವಿವಿಧ ಕಾರಣಗಳಿಂದ ನಿರ್ಮಾಣ ಕಾಮಗಾರಿ ವಿಳಂಬವಾಗಿತ್ತು. ಇಷ್ಟಾಗಿಯೂ ಕಳೆದ ವರ್ಷವೇ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಸಂಸ್ಥೆಗೆ ಪೂರ್ಣಾವಧಿ ನಿರ್ದೇಶಕರಿಲ್ಲದಿರುವುದೂ ಸೇರಿ ವಿವಿಧ ಕಾರಣ ಒಳಾಂಗಣ ವಿನ್ಯಾಸದಂತಹ ಕಾಮಗಾರಿಗೆ ಹಿನ್ನಡೆಯಾಗಿತ್ತು. ಈಗ ಒಳಾಂಗಣಕ್ಕೂ ಅಂತಿಮ ಸ್ಪರ್ಶ ನೀಡಿ, ವೈದ್ಯಕೀಯ ಉಪಕರಣಗಳನ್ನು ಅಳವಡಿಕೆ ಮಾಡಲಾಗಿದೆ. ಈ ಕೇಂದ್ರಕ್ಕೆ ಅಗತ್ಯ ಫಿಸಿಯೋಥೆರಪಿಸ್ಟ್‌ಗಳ ನೇಮಕಾತಿ ಪ್ರಕ್ರಿಯೆ ನಡೆಯಬೇಕಿದೆ. ಕ್ರೀಡಾ ಸಂಕೀರ್ಣವು ಉದ್ಘಾಟನೆಗೊಳ್ಳದಿರುವುದರಿಂದ ರೋಗಿಗಳ ಸಹಾಯಕರು ಕಟ್ಟಡದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದಾರೆ.

ಅಪಘಾತ ಮತ್ತು ಮೂಳೆ ಚಿಕಿತ್ಸೆಗೆ ಸಂಸ್ಥೆಯು ಹೆಸರಾಗಿದ್ದು, ರಾಜ್ಯದ ವಿವಿಧೆಡೆಯಿಂದ ಜನರು ಚಿಕಿತ್ಸೆಗಾಗಿ ಬರುತ್ತಾರೆ. ಆಸ್ಪತ್ರೆ ಆವರಣದಲ್ಲಿ ಈ ಕಟ್ಟಡವು 22 ಸಾವಿರ ಚದರ ಅಡಿಯಲ್ಲಿ ನಿರ್ಮಾಣವಾಗಿದ್ದು, ದೇಶದ ಎರಡನೇ ಕ್ರೀಡಾ ಚಿಕಿತ್ಸಾ ಸಂಕೀರ್ಣವಾಗಿದೆ. ಈ ಕ್ರೀಡಾ ಚಿಕಿತ್ಸೆ ಸಂಕೀರ್ಣ ಕಾರ್ಯಾರಂಭಿಸಿದ ಬಳಿಕ ಅಲ್ಲಿಗೆ ಸಂಸ್ಥೆಯ ಹೊರರೋಗಿ ವಿಭಾಗ ಸ್ಥಳಾಂತರವಾಗಲಿದೆ. ಸದ್ಯ ಕಾರ್ಯನಿರ್ವಹಿಸುತ್ತಿರುವ ಹೊರರೋಗಿ ವಿಭಾಗವನ್ನು ವಾರ್ಡ್‌ಗಳಾಗಿ ಪರಿವರ್ತಿಸಿ, 40 ಹಾಸಿಗೆಗಳನ್ನು ಅಳವಡಿಸಲು ಸಂಸ್ಥೆ ನಿರ್ಧರಿಸಿದೆ. ಇದರಿಂದ ಹಾಸಿಗೆಗಳ ಸಂಖ್ಯೆ ಹೆಚ್ಚಳವಾಗಿ, ರೋಗಿಗಳ ಚಿಕಿತ್ಸೆಗೆ ಸಹಾಯಕವಾಗಲಿದೆ.

ಅಪಘಾತ ಪ್ರಕರಣ ಅಧಿಕ: ರಸ್ತೆ ಅಪಘಾತದಲ್ಲಿ ಗಾಯಗೊಂಡವರು ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆಗೆ ಸಂಸ್ಥೆಗೆ ಬರುತ್ತಿದ್ದಾರೆ. ಮೂರು ವರ್ಷಗಳಲ್ಲಿ ಒಂಬತ್ತು ಸಾವಿರಕ್ಕೂ ಅಧಿಕ ಮಂದಿಗೆ ಅಪಘಾತ ಗಾಯಕ್ಕೆ ಸಂಸ್ಥೆಯ ವೈದ್ಯರು ಚಿಕಿತ್ಸೆ ಒದಗಿಸಿದ್ದಾರೆ. ವರ್ಷವಾರು ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುವವರ ಸಂಖ್ಯೆಯೂ ಹೆಚ್ಚಳವಾಗಿದೆ. 2021ರಲ್ಲಿ 61 ಸಾವಿರದಷ್ಟು ಪ್ರಕರಣಗಳಿಗೆ ಚಿಕಿತ್ಸೆ ಒದಗಿಸಿದ್ದರೆ, ಈಗ ಆ ಸಂಖ್ಯೆ 93 ಸಾವಿರ ದಾಟಿದೆ. ಸಂಸ್ಥೆಯ ಒಳಗಡೆಯೇ ಎಂಆರ್‌ಐ, ಸಿಟಿ ಸ್ಕ್ಯಾನ್, ಅಲ್ಟ್ರಾ ಸೌಂಡ್ ಡಾಪ್ಲರ್, ಮಸ್ಕ್ಯುಲೋಸ್ಕೆಲಿಟಲ್ ಅಲ್ಟ್ರಾ ಸೌಂಡ್ ಸೇರಿ ವಿವಿಧ ಸೌಲಭ್ಯಗಳಿವೆ.

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಇನ್ಫೊಸಿಸ್ ಪ್ರಯೋಗಾಲಯಕ್ಕೆ ಹೋಲಿಸಿದಲ್ಲಿ ಇಲ್ಲಿ ಪರೀಕ್ಷೆಗಳಿಗೆ ದರ ಸ್ವಲ್ಪ ಹೆಚ್ಚಿದೆ. ಉಳಿದಂತೆ ಚಿಕಿತ್ಸೆ ಉತ್ತಮವಾಗಿ ದೊರೆಯುತ್ತಿದ್ದು, ಔಷಧಗಳನ್ನು ಆಸ್ಪತ್ರೆಯಲ್ಲಿಯೇ ಒದಗಿಸಲಾಗುತ್ತಿದೆ. ಬಿಸಿ ನೀರು, ಮೊಟ್ಟೆ ಅಥವಾ ಬಾಳೆಹಣ್ಣು ಒಳಗೊಂಡ ಊಟ ಸೇರಿ ವಿವಿಧ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎನ್ನುತ್ತಾರೆ ರೋಗಿಗಳು.

‘ಮರದಿಂದು ಬಿದ್ದು, ಎರಡೂ ಕಾಲುಗಳನ್ನು ಮುರಿದುಕೊಂಡಿದ್ದರಿಂದ ಒಂದು ತಿಂಗಳು ಆಸ್ಪತ್ರೆಯಲ್ಲಿಯೇ ಇರಬೇಕಾಗಿತ್ತು. ಖಾಸಗಿ ಆಸ್ಪತ್ರೆಗೆ ಹೋಗಿದ್ದರೆ ₹3 ಲಕ್ಷದಿಂದ ₹4 ಲಕ್ಷ ಚಿಕಿತ್ಸಾ ವೆಚ್ಚವಾಗುತ್ತಿತ್ತು. ಇಲ್ಲಿ ₹80 ಸಾವಿರದಲ್ಲಿ ಚಿಕಿತ್ಸೆ ದೊರೆತಿದ್ದು, ಮಾತ್ರೆಗಳನ್ನು ಉಚಿತವಾಗಿ ಒದಗಿಸಿದ್ದಾರೆ. ವೈದ್ಯರು ಉತ್ತಮವಾಗಿ ಚಿಕಿತ್ಸೆ ನೀಡಿದ್ದಾರೆ’ ಎಂದು ತುಮಕೂರಿನ ಶಿರಾದ ವ್ಯಕ್ತಿಯೊಬ್ಬರು ತಿಳಿಸಿದರು.

ಎಸ್‌ಜಿಐಟಿಒ ವರ್ಷವಾರು ಚಿಕಿತ್ಸೆ ವಿವರ

ಚಿಕಿತ್ಸೆ ವಿವರ	2021	2022	2023
ಚಿಕಿತ್ಸೆ ಪಡೆದ ಒಟ್ಟು ರೋಗಿಗಳು	61,989	83,893	93,541
ಹೊರರೋಗಿಗಳು (ಪ್ರಥಮ ಬಾರಿ ಭೇಟಿ)	31,063	41,629	46,607
ಫಾಲೋಅಪ್ ಚಿಕಿತ್ಸೆಗೆ ಭೇಟಿ	30,946	42,264	46,944
ದಾಖಲಾತಿ	4,841	5,276	4,905
ಪ್ರಮುಖ ಶಸ್ತ್ರಚಿಕಿತ್ಸೆ	4,665	4,732	3,990
ರಸ್ತೆ ಅಪಘಾತ ಪ್ರಕರಣ	2,861	3,286	3,094

ಅಂಕಿ–ಅಂಶಗಳು

180 ಸಂಸ್ಥೆಯಲ್ಲಿರುವ ಒಟ್ಟು ಹಾಸಿಗೆಗಳು

16 ಐಸಿಯು ಹಾಸಿಗೆಗಳ ಸಂಖ್ಯೆ

200-300 ದೈನಂದಿನ ಹೊರರೋಗಿಗಳ ಭೇಟಿ



ಕ್ರೀಡಾ ಚಿಕಿತ್ಸಾ ಸಂಕೀರ್ಣವು ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿದೆ. ಹೊರರೋಗಿ ವಿಭಾಗವನ್ನು ಅಲ್ಲಿಗೆ ಸ್ಥಳಾಂತರಿಸಿ, ಸಂಸ್ಥೆಯಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲಾಗುತ್ತದೆ
ಡಾ. ಮದನ್ ಬಲ್ಲಾಳ್, ಎಸ್‌ಜಿಐಟಿಒ ನಿರ್ದೇಶಕ

ಓಟದ ಟ್ರ್ಯಾಕ್, ಕ್ರೀಡಾ ಪ್ರಯೋಗಾಲಯ

ಸಂಸ್ಥೆಯ ಆವರಣದಲ್ಲಿರುವ ಕ್ರೀಡಾ ಚಿಕಿತ್ಸಾ ಸಂಕೀರ್ಣದಲ್ಲಿ ಓಟದ ಟ್ರ್ಯಾಕ್, ಕ್ರೀಡಾ ಪ್ರಯೋಗಾಲಯ, ಕ್ರಯೋ ಥೆರಪಿಯಂತಹ ಸೌಲಭ್ಯಗಳು ಇರಲಿವೆ. ಜತೆಗೆ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಕೊಠಡಿ ಸೇರಿ ವಿವಿಧ ಸೌಲಭ್ಯಗಳೂ ಇಲ್ಲಿ ದೊರೆಯಲಿವೆ. ಈ ಕ್ರೀಡಾ ಸಂಕೀರ್ಣದ ಕಟ್ಟಡ ನಿರ್ಮಾಣಕ್ಕೆ ₹29 ಕೋಟಿ ವೆಚ್ಚವಾಗಿದೆ. ಕೆಳಮಹಡಿಯಲ್ಲಿ ವೈದ್ಯರ ವಾಹನಗಳ ಪಾರ್ಕಿಂಗ್, ಎಕ್ಸ್–ರೇ ಘಟಕಕ್ಕೆ ಅವಕಾಶ ನೀಡಲಾಗಿದೆ.

ಮೊದಲ ಮಹಡಿಯಲ್ಲಿ ಹೊರರೋಗಿ ವಿಭಾಗ, ಔಷಧಾಲಯ, ತುರ್ತು ಚಿಕಿತ್ಸಾ ಘಟಕಕ್ಕೆ ಸ್ಥಳಾವಕಾಶ ಒದಗಿಸಲಾಗಿದೆ. ಮೊದಲ ಮಹಡಿಯಲ್ಲಿ ಕ್ರೀಡಾ ಗಾಯಗಳು ಚಿಕಿತ್ಸಾ ಘಟಕವೂ ಇರಲಿದ್ದು, ಹೈಟೆಕ್ ಜಿಮ್, ಓಟದ ಟ್ರ್ಯಾಕ್‌ಗೆ ವಿಶಾಲ ಸ್ಥಳಾವಕಾಶ ನೀಡಲಾಗಿದೆ. ಗಾಯ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಇಲ್ಲಿ ತರಬೇತಿ ನೀಡಲಾಗುತ್ತದೆ. ಎರಡನೇ ಮಹಡಿಯಲ್ಲಿ ಎರಡು ಶಸ್ತ್ರಚಿಕಿತ್ಸಾ ಘಟಕ ಹಾಗೂ ಅಗತ್ಯ ಕೊಠಡಿಗಳನ್ನು ನಿರ್ಮಿಸಲಾಗಿದೆ.



ಎಸ್‌ಜಿಐಟಿಒ ಆವರಣದಲ್ಲಿ ತಲೆಯೆತ್ತಿರುವ ಹೈಟೆಕ್ ಕ್ರೀಡಾ ಚಿಕಿತ್ಸಾ ಸಂಕೀರ್ಣದ ಹೊರನೋಟ — ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಹೊಸ ವರ್ಷ: ಸುರಕ್ಷತಾ ಕ್ರಮ: ಬಿ. ದಯಾನಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆಯುವ ಹೊಸ ವರ್ಷಾಚರಣೆಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ನಗರದಲ್ಲಿ ಸುದ್ದಿಗಾರರ ಜತೆಗೆ ಶುಕ್ರವಾರ ಮಾತನಾಡಿದ ಅವರು, ‘ಹೊಸ ವರ್ಷಾಚರಣೆ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಬಿಬಿಎಂಪಿ, ಬೆಸ್ಕಾಂ, ಮೆಟ್ರೊ, ಬಿಎಂಟಿಸಿ, ಅಗ್ನಿಶಾಮಕ ದಳ ಸೇರಿದಂತೆ ಪ್ರಮುಖ ಇಲಾಖೆಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳ ಜತೆ ಸಭೆ ನಡೆಸಿ ಚರ್ಚಿಸಲಾಗಿದೆ’ ಎಂದು ಮಾಹಿತಿ ನೀಡಿದರು.



ಬಿ.ದಯಾನಂದ

‘ಬಾರ್ ಆ್ಯಂಡ್ ರೆಸ್ಟೋರೆಂಟ್, ಕ್ಲಬ್, ಪಬ್ ಸೇರಿದಂತೆ ಕಾರ್ಯಕ್ರಮ ಆಯೋಜಿಸುವ ಆಯೋಜಕರೊಂದಿಗೆ ಚರ್ಚೆ ನಡೆಸಿದ್ದೇವೆ. ಕೆಲವು ಸೂಚನೆ ನೀಡಲಾಗಿದೆ. ಮಹಿಳೆಯರ ಸುರಕ್ಷತೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ಪಾರ್ಟಿ ಆಯೋಜಕರಿಗೆ ತಿಳಿಸಲಾಗಿದೆ’ ಎಂದು ಪ್ರತಿಕ್ರಿಯಿಸಿದರು.

ವಿಚಾರಣೆ ಪೂರ್ಣಗೊಂಡ ಬಳಿಕ ನಿರ್ಧಾರ

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಕೆಲವು ಆರೋಪಿಗಳಿಗೆ ಜಾಮೀನು ದೊರೆತಿದ್ದು, ಅವರೆಲ್ಲರೂ ಬಿಡುಗಡೆ ಆಗಿದ್ದಾರೆ. ನ್ಯಾಯಾಲಯದ ತೀರ್ಪನ್ನು ಗೌರವಿಸಬೇಕು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.
‘ಹೈಕೋರ್ಟ್ ಮಂಜೂರು ಮಾಡಿರುವ ನಿಯಮಿತ (ರೆಗ್ಯುಲರ್) ಜಾಮೀನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುತ್ತೇವೆ. ಅಲ್ಲದೇ ಪ್ರಾಸಿಕ್ಯೂಷನ್ ವೈಫಲ್ಯ ಇತ್ತೇ ಎಂಬುದು ವಿಚಾರಣೆ ಪೂರ್ಣಗೊಂಡ ಬಳಿಕ ನಿರ್ಧಾರವಾಗುತ್ತದೆ’ ಎಂದು ಪ್ರಶ್ನೆಗೆ ಉತ್ತರಿಸಿದರು.

ಹೊಸ ರೂಪದಲ್ಲಿ ಸಂಚಾರ ಪೊಲೀಸ್ ಜಾಲತಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚು ಅನುಕೂಲಕರ ಮತ್ತು ಬಳಕೆದಾರ ಸ್ನೇಹಿ ಜಾಲತಾಣವನ್ನು ನಗರ ಸಂಚಾರ ಪೊಲೀಸ್ ವಿಭಾಗವು ರೂಪಿಸಿದ್ದು, ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಹೊಸ ರೂಪದ ಜಾಲತಾಣವನ್ನು ಅನಾವರಣ ಮಾಡಲಾಯಿತು.

ವಿನೂತನ ನೋಟ, ಸುಲಭವಾಗಿ ಬ್ರೌಸ್ ಮಾಡಬಹುದಾದ ಜಾಲತಾಣ ಇದಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸಂಚಾರ ನಿರ್ವಹಣೆ, ನಿಯಮ ಜಾರಿ, ರಸ್ತೆ ಸುರಕ್ಷತೆ–ಈ ಮೂರು ಮುಖ್ಯ ವಿಭಾಗಗಳು ಜಾಲತಾಣದಲ್ಲಿವೆ. ಇಲ್ಲಿ ಸಾರ್ವಜನಿಕರು ಸಂಚಾರ ನಿಯಮ ಉಲ್ಲಂಘನೆಗಳನ್ನು ವರದಿ ಮಾಡಬಹುದಾಗಿದೆ. ದೂರುಗಳು ಮತ್ತು ಸಲಹೆಗಳನ್ನು ನೋಂದಾಯಿಸಬಹುದಾಗಿದೆ. ನಿಯಮ ಉಲ್ಲಂಘನೆಯ ಚಲನ್‌ಗಳನ್ನು ಪಾವತಿಸಬಹುದಾಗಿದೆ. ಜತೆಗೆ ವಿವಾದಿತ ಚಲನ್‌ಗಳ ಬಗ್ಗೆ ಸೂಕ್ತ ಪ್ರತಿಕ್ರಿಯೆ ನೀಡಬಹುದು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ಧಾರೆ.

ಸಂಚಾರ ವಿಭಾಗ ಪೊಲೀಸರು ಹಳೆಯ ಜಾಲತಾಣವನ್ನು ಉನ್ನತೀಕರಣಗೊಳಿಸಿ, ಅದರಲ್ಲಿ ಕೆಲವೊಂದು ಹೊಸ ಆಯ್ಕೆ ಅಳವಡಿಸಿದ್ದಾರೆ. ಸಾರ್ವಜನಿಕರು ಬೇರೆ ಭಾಗಗಳಲ್ಲಿ ಸಂಚರಿಸುವ ವೇಳೆ ಆಯಾ ಭಾಗದ ಸಂಚಾರ ದಟ್ಟಣೆ ತಿಳಿದುಕೊಳ್ಳಲು ಹಾಗೂ ಯಾವ ಮಾರ್ಗದಲ್ಲಿ ಹೋದರೆ ಸುಲಭವಾಗಿ ತಾವು ಹೋಗಬೇಕಾಗಿರುವ ಸ್ಥಳ ತಲುಪಬಹುದು ಎಂಬುದನ್ನು ತಿಳಿದುಕೊಳ್ಳಲು ಇದು ಸಹಕಾರಿಯಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ತಿಳಿಸಿದರು.
ವೆಬ್‌ಸೈಟ್: https://btp.karnataka.gov.in

ಫೆಬ್ರುವರಿಯಲ್ಲಿ ಬೊಮ್ಮಸಂದ್ರ–ಆರ್‌ವಿ ರಸ್ತೆ ನಡುವೆ ಮೆಟ್ರೊ ಸಂಚರಿಸುವ ನಿರೀಕ್ಷೆ

ಹಳದಿ ಮಾರ್ಗ: ಜ.15ಕ್ಕೆ ತಲುಪಲಿದೆ 2ನೇ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಹಳದಿ ಮಾರ್ಗದಲ್ಲಿ ವಾಣಿಜ್ಯ ಸಂಚಾರ ಆರಂಭಿಸಲು ರೈಲು ಬೋಗಿಗಳಿಗೆ ಕಾಯಲಾಗುತ್ತಿದ್ದು, ಎರಡನೇ ಪ್ರೊಟೊಟೈಪ್ (ಮೂಲ ಮಾದರಿ) ರೈಲು ಜ.15ಕ್ಕೆ ಹೆಬ್ಬಗೋಡಿ ಡಿಪೊ ತಲುಪಲಿದೆ.

ಕೋಚ್‌ಗಳನ್ನು ಪೂರೈಸುವ ಗುತ್ತಿಗೆಯನ್ನು ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ (ಸಿಆರ್‌ಆರ್‌ಸಿ) ಪಡೆದುಕೊಂಡಿತ್ತು. ಕೋವಿಡ್ ಕಾರಣದಿಂದ ಎರಡು ವರ್ಷ ಕೋಚ್ ತಯಾರಿಕೆ ಮತ್ತು ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಆನಂತರ ಕೋಲ್ಕತದ ಟೀಟಾಗಢ ರೈಲ್ವೆ ಸಿಸ್ಟಂ ಲಿಮಿಟೆಡ್‌ಗೆ (ಟಿಆರ್‌ಎಸ್‌ಎಲ್) ಸಿಆರ್‌ಆರ್‌ಸಿ ಉಪ ಗುತ್ತಿಗೆ ನೀಡಿತ್ತು. ಈಗ ಟೀಟಾಗಢದಲ್ಲಿ ಕೋಚ್‌ಗಳು ತಯಾರಾಗುತ್ತಿವೆ.



ಮೆಟ್ರೊ ರೈಲು

ಈ ಮಾರ್ಗದಲ್ಲಿ ಚಾಲಕರಹಿತ ಚಾಲನಾ ಎಂಜಿನ್ ಹೊಂದಿರುವ ಮೆಟ್ರೊ ಸಂಚರಿಸಲಿದ್ದು, ಮೊದಲ ಕೋಚ್ (6 ಬೋಗಿಗಳ ಸೆಟ್) 8 ತಿಂಗಳ ಹಿಂದೆಯೇ ತಲುಪಿತ್ತು. ಅದರಲ್ಲಿಯೇ ಪರೀಕ್ಷೆಗಳನ್ನು ನಡೆಸಲಾಗಿತ್ತು. ಜ.15ಕ್ಕೆ ಎರಡನೇ ಕೋಚ್ ಬರಲಿದ್ದು, ಮತ್ತೆ 15 ದಿನಗಳಲ್ಲಿ ಮೂರನೇ ಕೋಚ್ ತಲುಪುವ ನಿರೀಕ್ಷೆ ಇದೆ. ಮೂರು ಕೋಚ್‌ಗಳಾದ ಕೂಡಲೇ ಹಳದಿ ಮಾರ್ಗದಲ್ಲಿ ಸಂಚಾರ ಆರಂಭಿಸಲಾಗುವುದು. ಪ್ರತಿ ಅರ್ಧ ಗಂಟೆಗೆ ಒಂದು ಟ್ರಿಪ್ ಇರಲಿದೆ. ಆನಂತರ ರೈಲುಗಳು ಸೇರ್ಪಡೆಯಾಗುತ್ತಿದ್ದಂತೆ ಟ್ರಿಪ್ ಅವಧಿ ಕಡಿಮೆ ಮಾಡಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.


ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಶನ್ (ಕೋಣಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬಿರಿಟೇನ ಅಗ್ರಹಾರ, ಹೊಸರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್‌.ವಿ. ರಸ್ತೆ ನಿಲ್ದಾಣಗಳಿರುವ ಹಳದಿ ಮಾರ್ಗದಲ್ಲಿ 2025ರ ಫೆಬ್ರುವರಿಯಲ್ಲಿ ರೈಲು ಸಂಚಾರ ಶುರುವಾಗುವ ನಿರೀಕ್ಷೆಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ನೇರಳೆ ಮಾರ್ಗಕ್ಕೆ ರೈಲು

ವೈಟ್‌ಫೀಲ್ಡ್–ಚಲ್ಲಘಟ್ಟ ನಡುವಿನ ನೇರಳೆ ಮಾರ್ಗಕ್ಕೆ ಪ್ರೊಟೊಟೈಪ್ ರೈಲು ಚೀನಾದ ಸಿಆರ್‌ಆರ್‌ಸಿಯಿಂದ ಹೊರಟಿದೆ. ಡಿಸೆಂಬರ್ ಅಂತ್ಯದ ಒಳಗೆ ಚೆನ್ನೈ ಬಂದರು ತಲುಪಲಿದೆ. ಜನವರಿ 10ಕ್ಕೆ ನಮ್ಮ ಮೆಟ್ರೊ ಪೀಣ್ಯ ಡಿಪೊಗೆ ತಲುಪಲಿದೆ. 2025ರಲ್ಲಿ ಒಟ್ಟು 21 ರೈಲುಗಳು ಸೇರ್ಪಡೆಗೊಳ್ಳಲಿವೆ.

ವಿಶ್ವಸಂಸ್ಥೆಯಲ್ಲಿ ರವಿಶಂಕರ್ ಗುರೂಜಿ ಭಾಷಣ ಇಂದು

ಬೆಂಗಳೂರು: ‘ವಿಶ್ವಶಾಂತಿ ಮತ್ತು ಸಾಮರಸ್ಯಕ್ಕಾಗಿ ಧ್ಯಾನ’ ಘೋಷವಾಕ್ಯದಡಿ ಶನಿವಾರ (ಡಿ.21) ವಿಶ್ವಸಂಸ್ಥೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀಶ್ರೀ ರವಿಶಂಕರ್ ಗುರೂಜಿ ಯವರು ‘ಜಾಗತಿಕ ಧ್ಯಾನ’ ಕುರಿತು ಪ್ರಧಾನ ಭಾಷಣ ಮಾಡಲಿದ್ದಾರೆ.



ರವಿಶಂಕರ್ ಗುರೂಜಿ

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ, ಡಿ.21 ಅನ್ನು ‘ವಿಶ್ವ ಧ್ಯಾನ ದಿನ’ವನ್ನಾಗಿ ಘೋಷಿಸಿ, ಇದನ್ನು ಸರ್ವಾನುಮತದಿಂದ ಅನುಮೋದಿಸಲಾಗುವುದು. ಇದು ಇನ್ನುಮುಂದೆ ಪ್ರತಿ ವರ್ಷ ಜಾಗತಿಕ ಧ್ಯಾನದ ಆಚರಣೆಯ ಉತ್ಸವಕ್ಕೆ ನಾಂದಿಯಾಗಲಿದೆ.

ವಿಶ್ವಸಂಸ್ಥೆಯ ‘ಪರ್ಮನೆಂಟ್ ಮಿಷನ್ ಆಫ್ ಇಂಡಿಯಾ’ ಮುಖ್ಯ ಕಚೇರಿಯು ನ್ಯೂಯಾರ್ಕ್‌ನಲ್ಲಿ ಇದ್ದು, ಪ್ರಥಮ ವಿಶ್ವ ಧ್ಯಾನದ ದಿನದ ಆಚರಣೆಗೆ ಸಿದ್ಧವಾಗುತ್ತಿದೆ.

ಜಾಗತಿಕ ಗಣ್ಯರು, ವಿಶ್ವಸಂಸ್ಥೆಯ ಹಿರಿಯ ನಾಯಕರು, ರಾಯಭಾರಿಗಳು, ಅಂತಾರಾಷ್ಟ್ರೀಯ ಪ್ರತಿನಿಧಿಗಳನ್ನು ಉದ್ದೇಶಿಸಿ ರವಿಶಂಕರ್ ಗುರೂಜಿ ಮಾತನಾಡಲಿದ್ದಾರೆ. ಶಾಂತಿ ಹಾಗೂ ಏಕತೆಯ ಪೋಷಣೆಯಲ್ಲಿ ಧ್ಯಾನದ ಮುಖ್ಯ ಪಾತ್ರವನ್ನು ವಿವರಿಸಲಿದ್ದಾರೆ. ವಿಶ್ವದಾದ್ಯಂತ ಲಕ್ಷಾಂತರ ಮಂದಿ ಜಾಗತಿಕ ಧ್ಯಾನದಲ್ಲಿ ರವಿಶಂಕರ್ ಗುರೂಜಿಯವರೊಂದಿಗೆ ಪಾಲ್ಗೊಳ್ಳಲಿದ್ದಾರೆ.

‘ಜಾಗತಿಕ ಧ್ಯಾನ’ ಕಾರ್ಯಕ್ರಮವು ಜಗತ್ತಿನಾದ್ಯಂತ http://wolf.me/world-meditation-day ನಲ್ಲಿ ನೇರ ಪ್ರಸಾರವಾಗಲಿದೆ (ಭಾರತೀಯ ಕಾಲಮಾನ ರಾತ್ರಿ 8 ಗಂಟೆ).

‘ಆದ್ಯತೆ ಇಲ್ಲದ ಯೋಜನೆಗಳಿಗೆ ಬಿಬಿಎಂಪಿ ಪ್ರಾಮುಖ್ಯ’ ಸಂವಾದದಲ್ಲಿ ತಜ್ಞರ ಒತ್ತಾಯ

ಸ್ಕೈ ಡೆಕ್, ಸುರಂಗ ರಸ್ತೆ ಯೋಜನೆ ಕೈಬಿಡಲು ಸಲಹೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ₹50 ಸಾವಿರ ಕೋಟಿ ದಾಟಲಿರುವ ಯೋಜನೆಗಳು
- ಕೆಲವೇ ಜನರ ಐಶಾರಾಮಕ್ಕೆ ಇವುಗಳ ಅಗತ್ಯವಿಲ್ಲ
- ಉಪ ನಗರಗಳ ಅಭಿವೃದ್ಧಿಗೆ ಆದ್ಯತೆ ಸಿಗಲಿ

ಬೆಂಗಳೂರು: ರಾಜ್ಯ ಸರ್ಕಾರ ಅನುಮೋದನೆ ನೀಡಿರುವ ಸುರಂಗ ರಸ್ತೆ ಮತ್ತು ಸ್ಕೈ ಡೆಕ್ ಯೋಜನೆಗಳು ಅವೈಜ್ಞಾನಿಕ. ಇವುಗಳ ಬದಲು ಈಗಿರುವ ಮೆಟ್ರೊ, ಉಪನಗರ ರೈಲು ಇನ್ನಿತರ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸಬೇಕು. ಜನರು ಸಾರ್ವಜನಿಕ ಸಾರಿಗೆ ಬಳಸಲು ಪ್ರೋತ್ಸಾಹ ನೀಡಬೇಕು.

ಇದು ‘ಸಿವಿಕ್’ ಸಂಸ್ಥೆ ಶುಕ್ರವಾರ ಹಮ್ಮಿಕೊಂಡಿದ್ದ ‘ಆದ್ಯತೆ ಇಲ್ಲದ ಯೋಜನೆಗಳಿಗೆ ಬಿಬಿಎಂಪಿ ಪ್ರಾಮುಖ್ಯ’ ಸಂವಾದ ಕಾರ್ಯಕ್ರಮದಲ್ಲಿ ಮೂಡಿದ ಅಭಿಪ್ರಾಯ.

ಹೆಬ್ಬಾಳದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ 18 ಕಿ.ಮೀ. ಸುರಂಗ ನಿರ್ಮಿಸುವ ಯೋಜನೆಯ ಅಂದಾಜು ವೆಚ್ಚ ₹16,500 ಕೋಟಿ. ದಕ್ಷಿಣ ಏಷ್ಯಾದಲ್ಲಿಯೇ ಅತ್ಯಂತ ಎತ್ತರದ ಗೋಪುರ ಎಂದು ಹೆಸರಾಗಲಿರುವ 250 ಮೀಟರ್ ಎತ್ತರದ ಸ್ಕೈ ಡೆಕ್ ನಿರ್ಮಾಣದ ಅಂದಾಜು ವೆಚ್ಚ ₹500 ಕೋಟಿ. ಇದರ ಜೊತೆಗೆ ಸುರಂಗ ಮಾರ್ಗ ವಿಸ್ತರಣೆ, ಎಕ್ಸ್‌ಪ್ರೆಸ್ ವೇ, ಮೇಲ್ಸೇತುವೆಗಳು, ಡಬಲ್ ಡೆಕರ್‌ಗಳೆಲ್ಲ ಸೇರಿದರೆ ₹50 ಸಾವಿರ ಕೋಟಿ ದಾಟಲಿದೆ. ಇದೆಲ್ಲ ಕೆಲವೇ ಐಶಾರಾಮಿ ಜನರ ಅಗತ್ಯಕ್ಕೆ ಮೀಸಲಾದ ಯೋಜನೆಗಳೇ ಹೊರತು ಜನಸಾಮಾನ್ಯರಿಗಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟರು.

ಬೆಂಗಳೂರಿನಲ್ಲಿ ಸಾರ್ವಜನಿಕ ಸಾರಿಗೆ ಬಳಸುವವರ ಪ್ರಮಾಣ ಶೇ 50ಕ್ಕಿಂತಲೂ ಕಡಿಮೆ ಇದೆ. ಸ್ವಂತ ವಾಹನಗಳನ್ನು ಬಳಸುವವರ ಸಂಖ್ಯೆ ಅಧಿಕವಿದೆ. ಅವರನ್ನು ಸಾರ್ವಜನಿಕ ಸಾರಿಗೆ ಬಳಸುವಂತೆ ಮಾಡಬೇಕು. ಬಸ್, ಮೆಟ್ರೊ, ಉಪನಗರ ರೈಲು ಸೇರಿದಂತೆ ಎಲ್ಲ ಸಾರ್ವಜನಿಕ ಸಾರಿಗೆಗಳ ದರವು ಬೈಕ್‌ಗಳನ್ನು ಬಳಸಿದಾಗ ಆಗುವ ವೆಚ್ಚಕ್ಕಿಂತ ಕಡಿಮೆ ಇರಬೇಕು. ಅಂಥ ಯೋಜನೆಗಳನ್ನು ರೂಪಿಸಬೇಕು ಎಂದು ಆಗ್ರಹಿಸಿದರು.

ಸುರಂಗ ರಸ್ತೆಯಿಂದ ಬೆಂಗಳೂರಿನ 23 ಲಕ್ಷ ಖಾಸಗಿ ಕಾರು ಮಾಲೀಕರಿಗಷ್ಟೆ ಪ್ರಯೋಜನವಾಗಲಿದೆ. ಈ ಯೋಜನೆಯಿಂದ ಅಂತರ್ಜಲ ಮಟ್ಟ ಇನ್ನಷ್ಟು ಕೆಳಗೆ ಹೋಗುತ್ತದೆ. ಮೆಟ್ರೊ, ಉಪನಗರ ರೈಲುಗಳಿಗೆ ನಿರ್ಮಿಸುವ ಸುರಂಗಕ್ಕಿಂತ ದೊಡ್ಡ ಮಟ್ಟದ ಸುರಂಗ ಇದಾಗಿದೆ. ಇದರ ಬದಲಿಗೆ ರಸ್ತೆಗಳ ಕೆಳಗೆ ಮಳೆ ನೀರು ಸಂಗ್ರಹಿಸುವ ಸುರಂಗ ನಿರ್ಮಿಸುವುದು ಉತ್ತಮ ಎಂದು ಸಂಪನ್ಮೂಲ ವ್ಯಕ್ತಿಗಳು ಸಲಹೆ ನೀಡಿದರು.

ಬೆಂಗಳೂರು ಸುತ್ತಮುತ್ತಲಿನ ಉಪನಗರಗಳನ್ನು ಅಭಿವೃದ್ಧಿಪಡಿಸಬೇಕು. ಮೆಟ್ರೊ, ಉಪನಗರ ರೈಲುಗಳನ್ನು ಅಲ್ಲಿಗೆ ವಿಸ್ತರಿಸಬೇಕು. ಎರಡನೇ ಹಾಗೂ ಮೂರನೇ ಶ್ರೇಣಿ ನಗರ, ಕಲ್ಯಾಣ ಕರ್ನಾಟಕ ಪ್ರದೇಶಗಳನ್ನು ಅಭಿವೃದ್ಧಿಪಡಿಸಬೇಕು. ಆಗ ಬೆಂಗಳೂರಿಗೆ ಬರುವ ವಲಸಿಗರ ಪ್ರಮಾಣ ಕಡಿಮೆ ಮಾಡಬಹುದು ಎಂದರು.

ಸಂವಾದದಲ್ಲಿ ಚರ್ಚೆಯಾದ ವಿಚಾರಗಳನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೆ ತರಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸುರಂಗ, ಸ್ಕೈ ಡೆಕ್ ಯೋಜನೆಗಳನ್ನು ಕೈಬಿಡಲು ಮುಖ್ಯಮಂತ್ರಿಗೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.



ನಾಡದೇವಿಯ ಪ್ರತಿಮೆ...
ಬೆಂಗಳೂರಿನ ವಿಧಾನ ಸೌಧದ ಆವರಣದಲ್ಲಿ ನಾಡದೇವಿ ಭುವನೇಶ್ವರಿಯ 25 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಅಳವಡಿಸುವ ಕಾರ್ಯವು ಕಲಾವಿದ ಗೊಂಬೆಮನೆ ಶ್ರೀಧರ ಮೂರ್ತಿ ನೇತೃತ್ವದಲ್ಲಿ ಶುಕ್ರವಾರ ಭರದಿಂದ ಸಾಗಿದೆ — ಪ್ರಜಾವಾಣಿ ಚಿತ್ರ: ರಂಜು ಪಿ.

ಬೆಂಗಳೂರಿನಲ್ಲಿ ಪ್ರತಿಭಟನೆ: ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

ಶಾಸಕ ಸಿ.ಟಿ. ರವಿ ಬಂಧನ ಪ್ರಕರಣ: ಬಿಜೆಪಿ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ಬಂಧನ ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರ ಹಾಕಿದರು. ಭಿತ್ತಿಪತ್ರ ಹಿಡಿದು ಪ್ರತಿಭಟನೆ ನಡೆಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ‘ಸದನದ ಒಳಗೆ ನಡೆದಿರುವುದಕ್ಕೆ ಸಭಾಪತಿ ಅವರೇ ತೀರ್ಮಾನ ತೆಗೆದುಕೊಳ್ಳಬೇಕು. ಆದರೆ, ಸಭಾಪತಿ ಅನುಮತಿಯಿಲ್ಲದೆ, ಪೊಲೀಸರು ಸಿ.ಟಿ. ರವಿ ಅವರನ್ನು ಬಂಧಿಸಿದ್ದಾರೆ. ಪೊಲೀಸ್ ಇಲಾಖೆಯನ್ನು ರಾಜ್ಯ ಸರ್ಕಾರ ದುರ್ಬಳಕೆ ಮಾಡಿಕೊಂಡಿದೆ’ ಎಂದು ಆಕ್ರೋಶ ಹೊರಹಾಕಿದರು.

ಶಾಸಕ ಅಶ್ವತ್ಥ ನಾರಾಯಣ ಮಾತನಾಡಿ, ‘ಆರೋಪದ ಬಗ್ಗೆ ವಿಧಾನಪರಿಷತ್ತಿನಲ್ಲಿ ಸಭಾಪತಿ ಅವರೇ ಸ್ಪಷ್ಟನೆ ಕೊಟ್ಟಿದ್ದರೂ ಕಾಂಗ್ರೆಸ್ ಮುಖಂಡರು ಹಾಗೂ ರಾಜ್ಯ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ. ಅಧಿಕಾರ ದುರ್ಬಳಕೆ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲಿ ನಾಲಾಯಕ್ ಸರ್ಕಾರ ಇದೆ’ ಎಂದು ಹೇಳಿದರು.

ಶಾಸಕರಾದ ರವಿ ಸುಬ್ರಹ್ಮಣ್ಯ, ಹರೀಶ್ ಪೂಂಜಾ, ಸಿ.ಕೆ.ರಾಮಮೂರ್ತಿ, ಧೀರಜ್ ಮುನಿರಾಜು, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಮಾಜಿ ಸಚಿವ ಭೈರತಿ ಬಸವರಾಜ್, ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಅಧ್ಯಕ್ಷ ಸಪ್ತಗಿರಿಗೌಡ, ಬಿಬಿಎಂಪಿ ಮಾಜಿ ಸದಸ್ಯ ಉಮೇಶ್ ಶೆಟ್ಟಿ ಭಾಗವಹಿಸಿದ್ದರು.

ರಸ್ತೆತಡೆ ನಡೆಸಲು ಮುಂದಾದ ಬಿಜೆಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು. ಈ ವೇಳೆ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು.



ಬೆಂಗಳೂರಿನಲ್ಲಿ ಶುಕ್ರವಾರ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು



ಬೆಂಗಳೂರಿನ ಕೆಪಿಸಿಸಿ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರಗಳು

ರಾಜ್ಯ ಮಹಿಳಾ ಆಯೋಗಕ್ಕೂ ದೂರು

ಬೆಂಗಳೂರು: ಸಚಿವೆ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಅವಾಚ್ಯ ಶಬ್ದ ಬಳಸಿ ನಿಂದಿಸಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು (ಕೆಪಿಸಿಸಿ) ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದೆ.

ರವಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಒತ್ತಾಯಿಸಲಾಗಿದೆ.

‘ಮಾಜಿ ಸಚಿವರಾಗಿ ಹೆಣ್ಣುಮಕ್ಕಳ ಬಗ್ಗೆ ಅಪಾರ ಕಾಳಜಿ, ಗೌರವ ಹೊಂದಿರಬೇಕಾದ ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ರವಿ ಅವರು ಸದನದಲ್ಲಿ ಸಚಿವೆ ವಿರುದ್ಧ ಅತಿ ಕೀಳುಮಟ್ಟದ ಪದ ಪ್ರಯೋಗ ಮಾಡಿದ್ದಾರೆ. ಮಹಿಳೆಯರ ಭಾವನೆಗಳಿಗೆ ಮತ್ತು ಘನತೆಗೆ ಧಕ್ಕೆ ಉಂಟಾಗಿದೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆ ಮಾಡಿಸಬೇಕು’ ಎಂದು ಕೆಪಿಸಿಸಿ ಕೋರಿದೆ.

ದೂರಿನ ಬೆನ್ನಲ್ಲೇ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರು ಪತ್ರ ಬರೆದಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ತನಿಖೆಗೆ ಆದೇಶಿಸಬೇಕು. ಇದಕ್ಕೆ ಪ್ರತ್ಯೇಕ ತಂಡ ರಚಿಸಬೇಕು ಎಂದು ಪತ್ರದಲ್ಲಿ ಕೋರಿದ್ದಾರೆ.

ಬಿಜೆಪಿ ಕಚೇರಿ ಮುತ್ತಿಗೆಗೆ ಯತ್ನ

ಸಿ.ಟಿ.ರವಿ ಹೇಳಿಕೆ ಖಂಡಿಸಿ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ಸೌಮ್ಯಾರೆಡ್ಡಿ ನೇತೃತ್ವದಲ್ಲಿ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಕಾಂಗ್ರೆಸ್ ಮುಖಂಡರು ಯತ್ನಿಸಿದರು. ಆಗ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.

ಸಿ.ಟಿ.ರವಿ ಅವರನ್ನು ಪರಿಷತ್ ಸ್ಥಾನದಿಂದ ವಜಾ ಮಾಡುವಂತೆ ಆಗ್ರಹಿಸಿ ಧಿಕ್ಕಾರ ಕೂಗಿದರು. ರವಿ ಅವರು ಲಕ್ಷ್ಮೀ ಹೆಬ್ಬಾಳಕರ ಅವರನ್ನು ಆಕ್ಷೇಪಾರ್ಹ ಪದ ಬಳಸಿ ನಿಂದಿಸಿದ್ದಾರೆ. ಅವರ ವಿರುದ್ಧ ಕ್ರಮ ಆಗಬೇಕು ಎಂದು ಅವರು ಆಗ್ರಹಿಸಿದರು.

ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿ ಎದುರು ಹೆಚ್ಚಿನ ಬಂದೋಬಸ್ತ್ ಕಲ್ಪಿಸಲಾಗಿದೆ.

ಐಐಎಂಬಿ ನಿರ್ದೇಶಕ ಸೇರಿ ಎಂಟು ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ನಿಂದನೆ ಆರೋಪದಡಿ ಬನ್ನೇರುಘಟ್ಟ ರಸ್ತೆಯ ಬಿಳಿಕಹಳ್ಳಿಯಲ್ಲಿ ಇರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕ ಸೇರಿದಂತೆ ಎಂಟು ಮಂದಿ ವಿರುದ್ಧ ಮೈಕೋ ಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಐಐಎಂಬಿ ಪ್ರಾಧ್ಯಾಪಕ ಗೋಪಾಲ್ ದಾಸ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ನಿರ್ದೇಶಕ ರಿಷಿಕೇಶ್ ಟಿ. ಕೃಷ್ಣನ್ ಹಾಗೂ ದಿನೇಶ್ ಕುಮಾರ್, ಶೈನೇಶ್, ಶ್ರೀನಿವಾಸ್ ಪ್ರಖ, ಚೇತನ್ ಸುಬ್ರಹ್ಮಣ್ಯ, ಆಶೀಶ್ ಮಿಶ್ರಾ, ಶ್ರೀಲೀಲಾ, ರಾಹುಲ್ ಡೇ ಅವರ ವಿರುದ್ಧ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಿ ಗೋಲ್ಡನ್ ಚಾರಿಯೇಟ್ ರೈಲು: ಇಂದು ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಭಾರತದ ಏಕೈಕ ಐಷಾರಾಮಿ ರೈಲು ‘ದಿ ಗೋಲ್ಡನ್ ಚಾರಿಯೇಟ್ ರೈಲು’ ಡಿ.21ರಿಂದ ಮತ್ತೆ ಸಂಚಾರ ಆರಂಭಿಸಲಿದೆ. ಯಶವಂತಪುರ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ 6ರಲ್ಲಿ ಬೆಳಿಗ್ಗೆ 9.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಲಿದ್ದಾರೆ.

ದಿ ಗೋಲ್ಡನ್ ಚಾರಿಯೇಟ್' ರೈಲನ್ನು ಐಆರ್‌ಸಿಟಿಸಿ (ಇಂಡಿಯನ್ ರೈಲ್ವೆ ಕೇಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಶನ್) ನಿರ್ವಹಣೆ ಮಾಡುತ್ತಿದೆ. ಒಂದು ವರ್ಷದ ಹಿಂದೆ ಈ ರೈಲು ಸಂಚಾರ ಸ್ಥಗಿತಗೊಂಡಿತ್ತು.

2024-25ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರವಾಸ ಕಾರ್ಯಕ್ರಮಗಳು ಹೆಚ್ಚಿರುವುದರಿಂದ ಕರ್ನಾಟಕ ರಾಜ್ಯದ ಪ್ರವಾಸಿ ತಾಣಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಮತ್ತೆ ಸಂಚಾರ ಆರಂಭಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ತಿಳಿಸಿದೆ.

‘ದಿ ಗೋಲ್ಡನ್ ಚಾರಿಯೇಟ್’ ರೈಲು ಬೆಂಗಳೂರಿನಿಂದ ಹೊರಟು, ಮೈಸೂರು-ಕಾಂಚಿಪುರಂ-ಮಹಾಬಲಿಪುರಂ- ಜಾವೂರು-ಚೆಟ್ಟಿನಾಡು-ಕೊಚ್ಚಿನ್-ಚೆರ್ತಲ/ಮರೈಕುಲಮ್‌ಗಳಿಗೆ ತೆರಳಿ ಬೆಂಗಳೂರಿಗೆ ಮರಳಲಿದೆ.

ರಾತ್ರಿಯಿಡೀ ಸುತ್ತಾಡಿಸಿದ ಪೊಲೀಸರು, ಬಿಜೆಪಿ ಕಾರ್ಯಕರ್ತರು, ನಾಯಕರಿಂದ ಪ್ರತಿಭಟನೆ

ರವಿ ವಿರುದ್ಧ ಎಫ್‌ಐಆರ್ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ವಿರುದ್ಧ ಎಫ್‌ಐಆರ್ ರದ್ದುಪಡಿಸಬೇಕು. ಅವರ ಮೇಲೆ ಹಲ್ಲೆ ಮಾಡಿದವರನ್ನು ಬಂಧಿಸಬೇಕು' ಎಂದು ಆಗ್ರಹಿಸಿ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಶುಕ್ರವಾರ ತೀವ್ರ ಪ್ರತಿಭಟನೆ ನಡೆಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, 'ವಿಧಾನಸೌಧ, ಸುವರ್ಣ ವಿಧಾನಸೌಧದಲ್ಲೇ ಸುರಕ್ಷತೆ ಇಲ್ಲ. 40 ಜನ ಸುವರ್ಣ ಸೌಧಕ್ಕೆ ಹೇಗೆ ನುಗ್ಗಿದರು? ಪೊಲೀಸರು ಹೇಗೆ ಒಳಗೆ ಬಿಟ್ಟರಿ? ರವಿ ಅವರನ್ನು ಕೊಲೆ ಮಾಡಿ, ಬಾಡಿಯನ್ನು ಚಿಕ್ಕಮಗಳೂರಿಗೆ ಪಾರ್ಸಲ್ ಮಾಡುತ್ತೇನೆ ಎಂದು ಗೂಂಡಾಗಳು ಸೌಧದೊಳಗೆ ಬೆದರಿಕೆ ಹಾಕಿದ್ದಾರೆ' ಎಂದು ಅವರ ಆರೋಪಿಸಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಅಭಯ ಪಾಟೀಲ ಕೂಡ ಧ್ವನಿಗೂಡಿಸಿದರು.

ಪ್ರಕರಣ ವರ್ಗಾವಣೆ: ಇದಕ್ಕೂ ಮುನ್ನ ಸಿ.ಟಿ. ರವಿ ಅವರನ್ನು ಪೊಲೀಸರು ಇಲ್ಲಿನ 5ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಧೀಶರಾದ ಸ್ಪರ್ಶ ಡಿಸೋಜಾ ಪ್ರಕರಣದ ವಿಚಾರಣೆ ನಡೆಸಿದರು.

'ಸುವರ್ಣ ವಿಧಾನಸೌಧದಲ್ಲೇ ನನ್ನ ಕೊಲೆಗೆ ಯತ್ನಿಸಲಾಗಿದೆ. ಗುರುವಾರ ರಾತ್ರಿಯಿಂದ ಶುಕ್ರವಾರ ನಸುಕಿನವರೆಗೆ ಪೊಲೀಸರು ಹಿಂಸೆ ನೀಡಿದ್ದಾರೆ. ತಲೆ ಒಡೆದು ಗಾಯಗೊಂಡರೂ ಚಿಕಿತ್ಸೆ ಕೊಡಿಸಲಿಲ್ಲ. ಚಳಿಗಾಲದ ಅಧಿವೇಶನದಲ್ಲಿದ್ದ ನನ್ನನ್ನು ಏಕೆ ಬಂಧಿಸಿದ್ದಾರೆ ಎಂಬುದು ನನಗೆ ತಿಳಿಸಿಲ್ಲ' ಎಂದು ಸಿ.ಟಿ.ರವಿ ಹೇಳಿಕೆ ನೀಡಿದರು.

ಮಧ್ಯಾಹ್ನದವರೆಗೆ ತೀರ್ಪು ಕಾಯ್ದಿರಿಸಿದ ನ್ಯಾಯಾಧೀಶರು, ನಂತರ ಪ್ರಕರಣವನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿದರು.



ಸಿ.ಟಿ.ರವಿ ಬಂಧನ ಖಂಡಿಸಿ ಬೆಳಗಾವಿಯಲ್ಲಿ ಬಿಜೆಪಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅರವಿಂದ ಬೆಲ್ಲದ, ಆರ್‌ ಅಶೋಕ, ಬಿ.ವೈ.ವಿಜಯೇಂದ್ರ, ಸುನೀಲಕುಮಾರ್, ಅಭಯ ಪಾಟೀಲ ಮುಂತಾದವರು ಪಾಲ್ಗೊಂಡರು ಪ್ರಜಾವಾಣಿ ಚಿತ್ರ

'12 ಬಾರಿ ಅವಾಚ್ಯ ಪದ ಬಳಕೆ'



ಡಿ.ಕೆ. ಶಿವಕುಮಾರ್

ಬೆಳಗಾವಿ: 'ಸಿ.ಟಿ. ರವಿ 12 ಬಾರಿ ಅವಾಚ್ಯ ಪದ ಬಳಸಿದ್ದಾನೆ. ಇದರ ದಾಖಲೆ ಇದೆ. ಘಟನೆ ನಡೆದ ಬಳಿಕ ಸಭಾಪತಿ ಅವರು ಚರ್ಚೆಗೆ ಅವಕಾಶ ಕೊಡಬೇಕಿತ್ತು. ಅವರ ನಡೆ ನನಗೆ ಇಷ್ಟವಾಗಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಇದು ಚಿಕ್ಕಮಗಳೂರು ಸಂಸ್ಕೃತಿಯೇ? ಭಾರತೀಯ ಸಂಸ್ಕೃತಿಯೇ ಅಥವಾ ಬಿಜೆಪಿ ಸಂಸ್ಕೃತಿಯೇ? ಸಭಾಪತಿ ಅವರು ಏನಾಗಿದೆ ಎಂಬುದನ್ನು ಪರಿಶೀಲಿಸಬೇಕಿತ್ತು. ಹಿರಿಯ ರಾಜಕಾರಣಿ ಆದ ಅವರಿಗೆ ಇದು ಗೊತ್ತಿರಬೇಕಿತ್ತು. ಅವರ ಹುದ್ದೆ ಪಕ್ಷಾತೀತವಾಗಿ ಇರಬೇಕು' ಎಂದರು. 'ನಾನು ಯಾವುದಕ್ಕೂ ಮಧ್ಯಪ್ರವೇಶ ಮಾಡಿಲ್ಲ. ತಮ್ಮ ಕ್ಷೇತ್ರದ ಹೆಣ್ಣುಮಗಳಿಗೆ, ತಾಯಿಗೆ ಅವಾಚ್ಯ ಪದ ಬಳಸಿದರೆ ಜನ ಸುಮ್ಮನೇ ಬಿಡುತ್ತಾರೆಯೇ?' ಎಂದು ಅವರು ಹೇಳಿದರು.

'ಒಂದಕ್ಕೆ' ಹೋಗಲೂ ಬಿಡಲಿಲ್ಲ'

ಬೆಳಗಾವಿ: 'ರವಿ ಅವರನ್ನು ರಾತ್ರಿಯಿಡೀ 500 ಕಿ.ಮೀ ಸುತ್ತಾಡಿಸಿದ್ದಾರೆ. ಮೂರು ಜಿಲ್ಲೆಗೆ ತಿರುಗಿಸಿದ್ದಾರೆ. 'ಒಂದಕ್ಕೆ' ಹೋಗಲೂ ಬಿಟ್ಟಿಲ್ಲ. ರಾಮದುರ್ಗ ಬಳಿ ಮೂತ್ರವಿಸರ್ಜನೆಗೆ ವಾಹನ ಬಿಟ್ಟು ಇಳಿದಾಗ ಪೊಲೀಸರ ಕ್ರಮಕ್ಕೆ ಬೇಸತ್ತು ಚೀರಾಡಿದರು. ನನ್ನನ್ನು ಕೊಲೆ ಮಾಡಲು ಇಲ್ಲಿಗೆ ತಂದಿದ್ದೀರೆಂದು, ರಸ್ತೆ ಮೇಲೆ ಕುಳಿತು ಧರಣಿ ಮಾಡಿದರು' ಎಂದು ಬಿಜೆಪಿ ನಾಯಕರು ತಿಳಿಸಿದರು.

ಹಿರೇಬಾಗೇವಾಡಿ ಠಾಣೆಯಿಂದ ಖಾನಾಪುರ, ಅಲ್ಲಿಂದ ನಂದಗಡ, ಚನ್ನಮ್ಮನ ಕಿತ್ತೂರು, ದೊಡ್ಡವಾಡ, ಬೆಳವಡಿ, ಸವದತ್ತಿ, ಯರಗಟ್ಟಿ, ರಾಮದುರ್ಗ, ಗೋಕಾಕ ತಾಲ್ಲೂಕಿನ ಅಂಕಲಗಿ, ಬೆಳಗಾವಿ ತಾಲ್ಲೂಕಿನ ಮುತಗಾ ಗ್ರಾಮಗಳ ಮಾರ್ಗವಾಗಿ ಅವರನ್ನು ಸುತ್ತಾಡಿಸಲಾಯಿತು.

ಯರಗಟ್ಟಿ ಡಾಬಾದಲ್ಲಿ ಉಪಾಹಾರ ನೀಡಿದರು. ನಸುಕಿನ 3.30ಕ್ಕೆ ರಾಮದುರ್ಗ ಸರ್ಕಾರಿ ಆಸ್ಪತ್ರೆಯಲ್ಲಿ ತಲೆಗೆ ಚಿಕಿತ್ಸೆ ಕೊಡಿಸಿದರು. ಮುತಗಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅವರ ಆರೋಗ್ಯ ಪರೀಕ್ಷೆ ನಡೆಸಿದ ಬಳಿಕ ನ್ಯಾಯಾಲಯಕ್ಕೆ ಕರೆತರಲಾಯಿತು.

'ಆ' ಮಾತನ್ನು ಒಬ್ಬರೂ ಖಂಡಿಸಲಿಲ್ಲ: ಲಕ್ಷ್ಮೀ

ಬೆಳಗಾವಿ: 'ಸಿ.ಟಿ ರವಿ ಅವರು ಚಿಂತಕರ ಚಾವಡಿಯಲ್ಲಿ 'ಆ' ಮಾತು ಬಳಸಿದ್ದು ನಿಜ. ನಾನು ಇಡೀ ರಾಜ್ಯದ ಮಹಿಳೆಯರ ಪ್ರತಿನಿಧಿ. ನಾನೇಕೆ ಸುಳ್ಳು ಹೇಳಲಿ' ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಗದ್ಗದಿತರಾದರು. ಮಾಧ್ಯಮದವರೊದಿಗೆ ಮಾತನಾಡಿದ ಅವರು, 'ಸಿ.ಟಿ.ರವಿ ಅವರನ್ನು ಅಮಾನತು ಮಾಡುವ ಬಗ್ಗೆ ನಾನೇನೂ ಮಾತನಾಡಲಾರೆ' ಎಂದರು.

'ಬಹಳಷ್ಟು ಧೈರ್ಯದಿಂದ ಮುಂದೆ ಬಂದಿದ್ದೇನೆ. ನನ್ನನ್ನು ನೋಡಿ ಸಾವಿರಾರು ಮಹಿಳೆಯರು ರಾಜಕಾರಣಕ್ಕೆ ಬರಬೇಕು ಎಂದು ಕನಸು ಕಾಣುತ್ತಾರೆ. ನನ್ನಂಥವರಿಗೆ ಹೀಗೆ ಮಾತನಾಡಿದಾಗ ಅವರಿಗೆ ಏನು ಅನ್ನಿಸಬೇಕು' ಎಂದರು. 'ಕೊಲೆಗಡುಕ ಎಂದು ನಾನು ಹೇಳಿದ ಮಾತನ್ನು ಒಪ್ಪಿಕೊಳ್ಳುತ್ತಿದ್ದೇನೆ. ಅವರು ಒಪ್ಪಿಕೊಳ್ಳದೇ ಸುಳ್ಳು ಹೇಳುತ್ತಿದ್ದಾರೆ. ಒಂದಲ್ಲ ಹತ್ತು ಬಾರಿ 'ಆ' ಪದ ಬಳಸಿದ್ದಾರೆ. ಒಬ್ಬ ತಾಯಿ, ಮಗಳು, ಸೊಸೆ ಆಗಿ ನೋಡಿದಾಗ 'ಆ' ಮಾತು ನನಗೆ ಚುಚ್ಚುತ್ತಿದೆ' ಎಂದು ದುಃಖಿಸಿದರು. 'ಕೆಲವರು ನನ್ನ ಬಳಿ ಬಂದು 'ಸಾರಿ' ಅವರು ಹಾಗೆ ಅನ್ನಬಾರದಿತ್ತು ಎಂದರು. ಆದರೆ, ವಿಧಾನ ಪರಿಷತ್ತಿನಲ್ಲಿ ಒಬ್ಬರೂ ನೇರವಾಗಿ ಖಂಡಿಸಲಿಲ್ಲ' ಎಂದರು.





ರವಿ ಅವರನ್ನು ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಗಿನವರೆಗೆ ವಿನಾಕಾರಣ ಸುತ್ತಿಸಿದ್ದಾರೆ. ರಾತ್ರಿ ಎನ್‌ಕೌಂಟರ್‌ಗೆ ಯತ್ನಿಸಿದ್ದಾರೆ. ಅದನ್ನು ಬಿಜೆಪಿ ನಾಯಕರು ತಪ್ಪಿಸಿದ್ದಾರೆ


ಆರ್.ಅಶೋಕ
ವಿರೋಧಪಕ್ಷದ ನಾಯಕ, ವಿಧಾನಸಭೆ



ಕಾಂಗ್ರೆಸ್ ಪಕ್ಷ ಅಧಿಕಾರ ದುರ್ಬಳಕೆ ಹೀಗೆ ಮಾಡಿಕೊಳ್ಳುತ್ತಿದೆ. ಸೌಧದ ಒಳಗೇ ಹಲ್ಲೆ ಮಾಡಲು ಅವಕಾಶ ಮಾಡಿಕೊಟ್ಟಿದೆ. ಇದನ್ನು ಸಿಬಿಐ ತನಿಖೆಗೆ ವಹಿಸಬೇಕು

ಬಿ.ವೈ.ವಿಜಯೇಂದ್ರ,
ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಅಸಾಂವಿಧಾನಿಕ ಪದ ಬಳಕೆ ದಾಖಲೆ ಸಿಕ್ಕಿಲ್ಲ: ಹೊರಟ್ಟಿ



ಹುಬ್ಬಳ್ಳಿ: 'ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಬೈದಿರುವ ಬಗ್ಗೆ ಯಾವುದೇ ವಿಡಿಯೊ, ಆಡಿಯೊ ದಾಖಲೆ ಸಿಕ್ಕಿಲ್ಲ. ಸದನದ ಕಲಾಪ ಮುಂದೂಡಿದ ನಂತರ ಘಟನೆ ನಡೆದಿದೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

'ಗುರುವಾರ ಬೆಳಿಗ್ಗೆ 10ಕ್ಕೆ ಸದನ ಆರಂಭವಾಯಿತು. ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ ಹೇಳಿಕೆ ಮುಂದಿಟ್ಟುಕೊಂಡು ಕಾಂಗ್ರೆಸ್ ಸದಸ್ಯರು ಗದ್ದಲ ಮಾಡಿದರು. ಈ ವೇಳೆ ಬಿಜೆಪಿ ಸದಸ್ಯರೂ ಪ್ರತಿಭಟನೆಗಿಳಿದರು. ಗದ್ದಲದ ಕಾರಣ ಕಲಾಪ ಮುಂದೂಡಲಾಯಿತು. ನಂತರ ಸದನದ ಮೈಕ್, ಆಡಿಯೊ ಮತ್ತು ವಿಡಿಯೊ ಎಲ್ಲವನ್ನೂ ಬಂದ್ ಮಾಡಿದ್ದರು' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಕೆಲ ಸಮಯದ ಬಳಿಕ ಲಕ್ಷ್ಮೀ ಹೆಬ್ಬಾಳಕರ ಬಂದು 'ಸಿ.ಟಿ.ರವಿ ಅವರು ನನ್ನ ವಿರುದ್ಧ ಅಸಾಂವಿಧಾನಿಕ ಪದ ಬಳಸಿದ್ದಾರೆ' ಎಂದು ದೂರಿದರು. ನಾನು ಆಡಿಯೊ, ವಿಡಿಯೊ ಎಲ್ಲವನ್ನೂ ಪರಿಶೀಲಿಸಿದೆ. ಆಗ ಯಾವ ದಾಖಲೆ ಸಿಗಲಿಲ್ಲ' ಎಂದರು.

'ಉಮಾಶ್ರೀ, ನಾಗರಾಜ್ ಯಾದವ್ ಅವರು ಬಂದು, 'ಸಿ.ಟಿ.ರವಿ ಅಸಾಂವಿಧಾನಿಕ ಪದ ಬಳಸಿದ್ದನ್ನು ನಾವು ಕೇಳಿದ್ದೇವೆ' ಎಂದರು. ಅದನ್ನು ನಾವು ಸಾಕ್ಷಿ ಎಂದು ಪರಿಗಣಿಸಲಾಗದು' ಎಂದರು. 'ರವಿ ಅವರನ್ನು ಕೇಳಿದಾಗ, 'ಯಾವುದೇ ಅಸಾಂವಿಧಾನಿಕ ಪದ ಬಳಸಿಲ್ಲ ಎಂದರು. ನಾನು ಸ್ಪಷ್ಟವಾದ ರೂಲಿಂಗ್ ಕೊಟ್ಟಿದ್ದೇನೆ. ಯಾವುದೇ ಗೊಂದಲದ ರೂಲಿಂಗ್ ಕೊಟ್ಟಿಲ್ಲ. ಸದನವನ್ನು ಹೇಗೆ ನಡೆಸಬೇಕು ಎನ್ನುವುದು ನನಗೆ ಗೊತ್ತಿದೆ' ಎಂದರು.

ಸುದ್ದಿ 2 ನಿಮಿಷ

'ಬಿಜೆಪಿಯವರಿಗೆ ರಾಮನ ಹೆಸರು ಹೇಳುವ ಯೋಗ್ಯತೆ ಇಲ್ಲ'

ಕಲಬುರಗಿ: 'ಸಚಿವೆ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ಸಿ.ಟಿ. ರವಿ ನೀಡಿದ ಹೇಳಿಕೆ ಮನುವಾದಿ ಬಿಜೆಪಿಯ ಸಂಸ್ಕೃತಿಯನ್ನು ತೋರಿಸುತ್ತದೆ. ಬಿಜೆಪಿಯವರಿಗೆ ಮರ್ಯಾದೆ ಇಲ್ಲ. ಮರ್ಯಾದಾ ಪುರುಷೋತ್ತಮ ರಾಮನ ಹೆಸರು ಹೇಳುವ ಯೋಗ್ಯತೆಯೂ ಇಲ್ಲ' ಎಂದು ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮನುವಾದಿಗಳು ಹೆಣ್ಣನ್ನು ಗೌರವಿಸುವುದಿಲ್ಲ ಎನ್ನುವುದಕ್ಕೆ ಇದು ಉತ್ತಮ ಉದಾಹರಣೆ. ಅವರು ಅಶ್ಲೀಲ ಪದ ಬಳಸುವ ಮೂಲಕ ಸ್ತ್ರೀ ಕುಲಕ್ಕೆ ಅಪಮಾನ ಮಾಡಿದ್ದಾರೆ' ಎಂದರು.

'ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಕಾಂಗ್ರೆಸ್‌ನವರು ಗೂಂಡಾಗಳಂತೆ ವರ್ತಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ನಿಜವಾದ ಗೂಂಡಾಗಳು ಬಿಜೆಪಿಯವರೇ' ಎಂದು ದೂರಿದರು.

ವೀರಶೈವ ಮಹಾಸಭಾ ಖಂಡನೆ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಕೀಳು ಪದಗಳಿಂದ ನಿಂದಿಸಿದ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರ ಹೇಳಿಕೆಯನ್ನು ಅಖಿಲ ಭಾರತ ವೀರಶೈವ ಮಹಾಸಭಾ ಖಂಡಿಸಿದೆ.

'ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ಪರಿಷತ್ ಕಲಾಪದಲ್ಲಿ ಸಿ.ಟಿ. ರವಿ ಅವರು ಅವಾಚ್ಯ ಪದ ಬಳಕೆ ಮಾಡಿರುವ ಬಗ್ಗೆ ವರದಿ ನೋಡಿ ಬೇಸರವಾಯಿತು. ದೇಶದಲ್ಲಿ ಹೆಣ್ಣುಮಕ್ಕಳಿಗೆ ವಿಶೇಷ ಸ್ಥಾನಮಾನ ಮತ್ತು ಗೌರವ ನೀಡಲಾಗಿದೆ. ನಾಲಿಗೆ ನಾಗರಿಕತೆ ಹೇಳುತ್ತದೆ. ಜನಪ್ರತಿನಿಧಿಗಳು ಸದನದ ಗೌರವ, ಘನತೆ ಕಾಪಾಡಬೇಕು. ಸದನದ ಒಳಗೆ ಹಾಗೂ ಹೊರಗೆ ಜನಪ್ರತಿನಿಧಿಗಳ ನಡವಳಿಕೆಗಳು ಇತರರಿಗೆ ಮಾದರಿಯಾಗಿರಬೇಕು. ಅಸಾಂವಿಧಾನಿಕ ಪದ ಬಳಕೆ ಸದನದ ಇತಿಹಾಸಕ್ಕೆ ಕಪ್ಪುಚುಕ್ಕೆ' ಎಂದು ಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಅವಾಚ್ಯ ಪದ ಬಳಕೆ ಮಾಡಿರುವುದನ್ನು ಅಖಿಲ ಭಾರತ ವೀರಶೈವ ಮಹಾಸಭಾ ತೀವ್ರವಾಗಿ ಖಂಡಿಸುತ್ತದೆ. ಸಿ.ಟಿ. ರವಿ ವಿರುದ್ಧ ಅಗತ್ಯ ಕಾನೂನು ಕ್ರಮಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇವೆ ಎಂದಿದ್ದಾರೆ.



ದಾವಣಗೆರೆಯ ಪ್ರವಾಸಿ ಮಂದಿರಕ್ಕೆ ಶುಕ್ರವಾರ ಬಂದಿಳಿದ ಬಳಿಕ ಪಕ್ಷದ ಕಾರ್ಯಕರ್ತರತ್ತ ಕೈಮುಗಿದ ಸಿ.ಟಿ.ರವಿ ಚಿತ್ರ: ಸತೀಶ್ ಬಡಿಗೇರ

ಮಾರ್ಗಮಧ್ಯೆ ರವಿ ಬಿಡುಗಡೆ

ಒಂದನೇ ಪುಟದಿಂದ..

ಆಗಲೇ ಅವರನ್ನು ಬಿಡುಗಡೆ ಮಾಡುವಂತೆ ಅವರ ಪರ ವಕೀಲರು ಜಾಮೀನು ಅರ್ಜಿಯನ್ನೂ ಸಲ್ಲಿಸಿದರು. ಪ್ರಾಸಿಕ್ಯೂಷನ್ ಪರ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಕೂಡ ವಾದ ಮಂಡಿಸಿದ್ದರು.

ಪ್ರಕರಣವನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಿ ಮಧ್ಯಾಹ್ನ ಆದೇಶ ಹೊರಡಿಸಿದ ಬೆಳಗಾವಿ ನ್ಯಾಯಾಲಯ, ಆರೋಪಿಯನ್ನು ಬೆಂಗಳೂರಿಗೆ ಕರೆತರಲು ಟ್ರಾನ್ಸಿಟ್ ವಾರಂಟ್ ಅನ್ನೂ ಮಂಜೂರು ಮಾಡಿತ್ತು. ಅದರ ಅನುಸಾರ ರಸ್ತೆ ಮಾರ್ಗವಾಗಿ ರವಿ ಅವರನ್ನು ಬೆಂಗಳೂರಿನತ್ತ ಕರೆತರಲಾಗುತ್ತಿತ್ತು.

ಪ್ರಕರಣ ವರ್ಗಾವಣೆಯ ಆದೇಶ ಹೊರ ಬೀಳುತ್ತಿದ್ದಂತೆಯೇ ರವಿ ಪರ ವಕೀಲರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಮಧ್ಯಂತರ ಜಾಮೀನು ಕೋರಿ ಒಂದು ಅರ್ಜಿ ಸಲ್ಲಿಸಿದರೆ, ಪ್ರಕರಣಕ್ಕೆ ತಡೆ ಕೋರಿ ಹೈಕೋರ್ಟ್ ಏಕಸದಸ್ಯ ಪೀಠದಲ್ಲಿ ಮತ್ತೊಂದು ಅರ್ಜಿ ಸಲ್ಲಿಸಿದ್ದರು. ಮಾರ್ಗ ಮಧ್ಯೆ ಯಾವ ಸ್ಥಳದಲ್ಲಿದ್ದಾರೋ ಅಲ್ಲಿಂದಲೇ ರವಿ ಅವರನ್ನು ಬಿಡುಗಡೆ ಮಾಡುವಂತೆ ಹೈಕೋರ್ಟ್ ಏಕಸದಸ್ಯ ಪೀಠ ಆದೇಶ ಹೊರಡಿಸಿತು.

ತಕ್ಷಣವೇ ಆದೇಶದ ಪ್ರತಿ ಪಡೆದ ವಕೀಲರು, ಶಿಗ್ಗಾವಿಯಲ್ಲಿ ಬರುತ್ತಿದ್ದ ಪೊಲೀಸರಿಗೆ ತಲುಪಿಸಿದರು. ಅಲ್ಲಿಯೇ ಅವರನ್ನು ಬಂಧನದಿಂದ ಬಿಡುಗಡೆ ಮಾಡಲಾಯಿತು.

ಬೆಂಬಲಕ್ಕೆ ನಿಂತ ಬಿಜೆಪಿ ನಾಯಕರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಸೇರಿದಂತೆ ಹಲವರು ಗುರುವಾರ ರಾತ್ರಿಯೇ ಖಾನಾಪೂರ ಪೊಲೀಸ್ ಠಾಣೆಗೆ ಭೇಟಿನೀಡಿ ರವಿ ಅವರ ಬೆಂಬಲಕ್ಕೆ ನಿಂತಿದ್ದರು. ಬಂಧಿತ ವಿಧಾನ ಪರಿಷತ್ ಸದಸ್ಯನ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆಯನ್ನೂ ನಡೆಸಿದ್ದರು.

ದೆಹಲಿ ಪ್ರವಾಸದಲ್ಲಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶುಕ್ರವಾರ ಬೆಳಿಗ್ಗೆಯೇ ಬೆಳಗಾವಿಗೆ ದೌಡಾಯಿಸಿದರು. ವಿಜಯೇಂದ್ರ ಸೇರಿದಂತೆ ಬಿಜೆಪಿಯ ಹಲವು ಮುಖಂಡರು ನ್ಯಾಯಾಲಯದಲ್ಲೂ ಜೊತೆಗಿದ್ದು ತಮ್ಮ ಪಕ್ಷದ ಶಾಸಕನನ್ನು ಬೆಂಬಲಿಸಿದರು.

ಶಾಸಕಿಯರ ಪ್ರತಿಕ್ರಿಯೆ

ಮಸಿ ಬಳಿಯುವ ಹುನ್ನಾರ



ಎಬಿವಿಪಿ ಹಿನ್ನೆಲೆಯಿಂದ ಬಂದ ಶಿಸ್ತಿನ ಸಿಪಾಯಿ ಸಿ.ಟಿ. ರವಿ ಯಾವಾಗಲೂ ಹೆಣ್ಣಿನ ಬಗ್ಗೆ ಆಕ್ಷೇಪಾರ್ಹವಾಗಿ ಮಾತನಾಡಿಲ್ಲ. ಯಾವ ಮಹಿಳೆ ಕಂಡರೂ ಅಕ್ಕ, ತಂಗಿ, ಅಮ್ಮ ಎನ್ನುವ ಗೌರವ ಭಾವನೆಯಿಂದ ಮಾತನಾಡುತ್ತಾರೆ. ಸಚಿವೆ ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ಘಟನೆ ನಡೆದಾಗ ನಾನೂ ರವಿ ಅವರ ಸಮೀಪದಲ್ಲಿಯೇ ಇದ್ದೆ. ಅವರು ಕೆಟ್ಟ ಪದಗಳನ್ನು ಬಳಸಿಲ್ಲದಿದ್ದರೂ ರಾಜಕೀಯ ಕಾರಣಕ್ಕಾಗಿ ಸಚಿವೆ ಆರೋಪ ಮಾಡುತ್ತಿದ್ದಾರೆ. ರವಿ ಘನತೆಗೆ ಹಾಗೂ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಈ ಹುನ್ನಾರ ಮಾಡುತ್ತಿರುವ ಶಂಕೆಯಿದೆ

ಹೇಮಲತಾ ನಾಯಕ
ವಿಧಾನ ಪರಿಷತ್ ಸದಸ್ಯೆ, ಕೊಪ್ಪಳ

ಮೇಲ್ಮನೆಯ ಗೌರವ ಕಾಪಾಡಿ



ವಿಧಾನ ಪರಿಷತ್ತು ಪ್ರಬುದ್ಧರ ಹಾಗೂ ಬುದ್ಧಿವಂತರ ಮನೆಯಾಗಿದೆ. ಸಿ.ಟಿ.ರವಿ ಮಹಿಳೆಯರ ಬಗ್ಗೆ ಅಸಾಂವಿಧಾನಿಕ ಪದ ಬಳಸಿ ದೇಶದ ಪ್ರತಿಯೊಬ್ಬ ಮಹಿಳೆಯನ್ನೂ ಅವಮಾನಿಸಿದ್ದಾರೆ. ಇಂತಹ ಮುಖಂಡರ ಅಸಂಬದ್ಧ ಹೇಳಿಕೆಗಳಿಂದ ಮಹಿಳೆಯರು ರಾಜಕೀಯದಿಂದ ದೂರ ಉಳಿಯುವಂತೆ ಮಾಡಿದೆ. ನಿಷ್ಪಕ್ಷಪಾತವಾಗಿ ತನಿಖೆ ನಡಿಸಿ ಮೇಲ್ಮನೆಯ ಗೌರವ ಕಾಪಾಡಬೇಕು.

ಕರೆಮ್ಮ ಜಿ. ನಾಯಕ, ಶಾಸಕಿ, ದೇವದುರ್ಗ

ಕನಿಷ್ಠ ಜ್ಞಾನ ಇರಬೇಕಿತ್ತು



ತನ್ನ ತಾಯಿ, ಅಕ್ಕ ತಂಗಿ, ಪತ್ನಿ, ಮಗಳನ್ನು ಯಾವ ಪದ ಬಳಸಿ ಸಂಬೋಧಿಸಲು ಸಾಧ್ಯವಿಲ್ಲವೋ ಅಂಥ ಪದವನ್ನು ಬೇರೆ ಯಾವ ಮಹಿಳೆಗೂ ಹೇಳಬಾರದೆಂಬ ಕನಿಷ್ಠ ಜ್ಞಾನ, ಕಾಮನ್‌ಸೆನ್ಸ್ ಸಿ.ಟಿ.ರವಿ ಅವರಿಗೆ ಇರಬೇಕಿತ್ತು. ಜವಾಬ್ದಾರಿಯುತ ವಿಧಾನ ಪರಿಷತ್ ಸದಸ್ಯರಾಗಿ ಹೆಣ್ಣು ಮಕ್ಕಳನ್ನು ನಡೆಸಿಕೊಳ್ಳುವ ರೀತಿನಾ ಇದು?

ರೂಪಕಲಾ ಶಶಿಧರ್, ಕೆಜಿಎಫ್ ಶಾಸಕಿ

ನಮ್ಮ ಜಿಲ್ಲೆಗೆ ಕಳಂಕ



ಹಲವು ಹುದ್ದೆಗಳನ್ನು ನಿಭಾಯಿಸಿದ ಅನುಭವಿ ರಾಜಕಾರಣಿಯಿಂದ ಬಂದ ಇಂಥ ಮಾತುಗಳು ನಮ್ಮ ಜಿಲ್ಲೆಗೆ ಕಳಂಕ ತಂದಿವೆ. ಸಂಸ್ಕೃತಿ, ಹೆಣ್ಣು ಮಕ್ಕಳು ಎಂದು ಭಾಷಣ ಮಾಡುವ ಬಿಜೆಪಿಯವರ ಮನಃಸ್ಥಿತಿಗೆ ಇದು ಕನ್ನಡಿಯಾಗಿದೆ. ಅವರ ಮನೆಯ ಹೆಣ್ಣು ಮಕ್ಕಳ ಬಗ್ಗೆ ಇಂಥ ಪದಗಳನ್ನು ಉಪಯೋಗಿಸಿದರೆ ಸುಮ್ಮನಿರುತ್ತಾರೆಯೇ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು.

ನಯನಾ ಮೋಟಮ್ಮ, ಮೂಡಿಗೆರೆ ಶಾಸಕಿ

ಪ್ರತಿಭಟನೆ ನಡೆಸುತ್ತೇವೆ



ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ಅವಾಚ್ಯ ಪದ ಬಳಸಿದವರು, ನಾಳೆ ನಮಗೂ ಅಪಮಾನಿಸುವರು. ಇದರ ವಿರುದ್ಧ ಎಲ್ಲ ಶಾಸಕಿಯರು ಪ್ರತಿಭಟಿಸಲು ಉದ್ದೇಶಿಸಿದ್ದೇವೆ. ಈ ಘಟನೆ ಬಿಜೆಪಿಗರ ಮನುಸ್ಮೃತಿಯ ಮನಸ್ಥಿತಿ ಅನಾವರಣ ಮಾಡಿದೆ.

ಇ. ಅನ್ನಪೂರ್ಣ, ಶಾಸಕಿ
ಸಂಡೂರು, ಬಳ್ಳಾರಿ ಜಿಲ್ಲೆ

ಮಹಿಳೆ ಬಗ್ಗೆ ಕೀಳು ನುಡಿ ಸಲ್ಲ



ಯಾರೇ ಆದರೂ ಸರಿ, ಮಹಿಳೆ ಬಗ್ಗೆ ಕೀಳಾಗಿ ಮಾತನಾಡುವುದು ತಪ್ಪು. ಇದು ನಿಜಕ್ಕೂ ನೋವಿನ ಸಂಗತಿ. ಸದನದ ಒಳಗೆ ಅಥವಾ ಹೊರಗೆ ಎಲ್ಲೂ ಈ ರೀತಿ ಮಾತನಾಡಬಾರದು. ಇದು ಯಾರಿಗೂ ಶೋಭೆ ತರುವುದಿಲ್ಲ. ಇದನ್ನು ನಾನು ಖಂಡಿಸುತ್ತೇನೆ.

ಶಾರದಾ ಪೂರ್ಯಾನಾಯ್ಕ, ಶಿವಮೊಗ್ಗ
ಗ್ರಾಮಾಂತರ ಕ್ಷೇತ್ರದ ಜೆಡಿಎಸ್ ಶಾಸಕಿ

ನಾನು ಪ್ರತಿಕ್ರಿಯಿಸಲ್ಲ

ಸದನದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಕುರಿತು ಯಾವ ಪದ ಬಳಸಿದ್ದಾರೆ ಎಂಬುದು ಗೊತ್ತಾಗಿಲ್ಲ. ಹೀಗಾಗಿ ಈ ವಿಷಯದ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ಕೊಡುವುದಿಲ್ಲ.

ಶಶಿಕಲಾ ಜೊಲ್ಲೆ, ಶಾಸಕಿ, ನಿಪ್ಪಾಣಿ, ಬೆಳಗಾವಿ ಜಿಲ್ಲೆ

ಎಲ್ಲ ಮಹಿಳೆಯರಿಗೆ ಅವಮಾನ



ಲಕ್ಷ್ಮೀ ಹೆಬ್ಬಾಳಕರ ಅವರ ಬಗ್ಗೆ ಕೆಟ್ಟ ಪದ ಬಳಸಿದ್ದು ಎಲ್ಲ ಮಹಿಳೆಯರಿಗೆ ಅವಮಾನ ಮಾಡಿದಂತಾಗಿದೆ. ಇದನ್ನು ಬಲವಾಗಿ ಖಂಡಿಸುತ್ತೇನೆ. ಸಿ.ಟಿ.ರವಿ ಅವರಿಗೆ ಕಾನೂನಿನಡಿ ಕಠಿಣ ಶಿಕ್ಷೆ ಆಗಬೇಕು.

ಎಂ.ಪಿ.ಲತಾ ಮಲ್ಲಿಕಾರ್ಜುನ
ಶಾಸಕಿ, ಹರಪನಹಳ್ಳಿ, ವಿಜಯನಗರ

ಮಾನಸಿಕ ಕ್ರೂರತೆಗೆ ಹಿಡಿದ ಕನ್ನಡಿ



ಸಿ.ಟಿ.ರವಿ ಆ ಪದ ಬಳಸಿದ್ದು ನೂರಕ್ಕೆ ನೂರರಷ್ಟು ಸತ್ಯ. ಇದು ಅವರಲ್ಲಿನ ಮಾನಸಿಕ ಕ್ರೂರತೆಯನ್ನು ತೋರಿಸುತ್ತದೆ. ಮಹಿಳೆಯರು ರಾಜಕೀಯಕ್ಕೆ ಬರಲೇಬಾರದು ಎಂಬ ಮನೋಧೋರಣೆಯನ್ನು ಅವರು ಹೊಂದಿರುವಂತಿದೆ. ಸಚಿವೆಯ ಕುರಿತೇ ಈ ರೀತಿ ಮಾತನಾಡುವ ಅವರು ಸಾಮಾನ್ಯ ಮಹಿಳೆಯರೊಂದಿಗೆ ಹೇಗೆ ನಡೆದುಕೊಳ್ಳಬಹುದು ಎಂಬುದನ್ನು ಊಹಿಸಿಕೊಳ್ಳಿ

ಬಲ್ಕೀಸ್ ಬಾನು, ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯೆ

'ಹೋರಾಟಕ್ಕೆ ಬಲ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಈ ಪ್ರಕರಣ ಮತ್ತಷ್ಟು ಹೋರಾಟಕ್ಕೆ ಬಲ ನೀಡಿದೆ. ನಮ್ಮ ಪಕ್ಷದ ಎಲ್ಲ ನಾಯಕರು, ಕಾರ್ಯಕರ್ತರು ಈ ಸಂಕಷ್ಟದ ಸಮಯದಲ್ಲಿ ಜೊತೆಗೆ ನಿಂತು ಆತ್ಮಸ್ಥೈರ್ಯ ತುಂಬಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ 'ಅವಾಚ್ಯ' ಪದ ಬಳಕೆ ಆರೋಪದಡಿ ರವಿ ಅವರನ್ನು ವಶಕ್ಕೆ ಪಡೆದಿದ್ದ ಬೆಳಗಾವಿ ಪೊಲೀಸರು, ಹೈಕೋರ್ಟ್ ಆದೇಶದ ಕಾರಣ ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಬಿಡುಗಡೆಗೊಳಿಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿ.ಟಿ.ರವಿ, 'ಯಾವುದೇ ನೋಟಿಸ್ ನೀಡದೇ ಪೊಲೀಸರು ನನ್ನನ್ನು ಬಂಧಿಸಿದ್ದರು. 4 ಜಿಲ್ಲೆ, 50ಕ್ಕೂ ಹೆಚ್ಚು ಗ್ರಾಮಗಳಲ್ಲಿ ರಾತ್ರಿಯಿಡೀ ಅಲೆದಾಡಿಸಿ, ಮಾನಸಿಕವಾಗಿ ಕುಗ್ಗಿಸುವ ಹಾಗೂ ದೈಹಿಕವಾಗಿ ಹಲ್ಲೆ ನಡೆಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ' ಎಂದರು.

'ಸಿ.ಟಿ.ರವಿ ಮೇಲೆ ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸುತ್ತೇವೆ. ಅವರಿಗೆ ಶಿಕ್ಷೆಯಾಗುವವರೆಗೂ ಹೋರಾಟ ನಡೆಸುತ್ತೇವೆ. ಹೈಕೋರ್ಟ್ ತೀರ್ಪಿನಿಂದ ರಾಜ್ಯ ಸರ್ಕಾರ ತಲೆತಗ್ಗಿಸುವಂತಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

'ಈ ರೀತಿಯ ದೌರ್ಜನ್ಯ ಬಹಳ ದಿನ ನಡೆಯುವುದಿಲ್ಲ. ಸಿದ್ದರಾಮಯ್ಯ ಔಟ್‌ಗೋಯಿಂಗ್ ಚೀಫ್ ಮಿನಿಸ್ಟರ್. ಒದ್ದು ಕಿತ್ತುಕೊಳ್ಳುವುದಾಗಿ ಡಿ.ಕೆ. ಶಿವಕುಮಾರ್ ಈಗಾಗಲೇ ಹೇಳಿದ್ದಾರೆ. ಸದನಕ್ಕೆ ವಿಶೇಷ ಸ್ಥಾನವಿದೆ. ಅಲ್ಲಿ ನಡೆದಿರುವ ಘಟನೆಗೆ ಕ್ಷಮೆ ಕೇಳಲ್ಲ. ನಾವು ಯಾವ ತಪ್ಪನ್ನೂ ಮಾಡಿಲ್ಲ' ಎಂದರು.

'ಬಳೆ ತೊಟ್ಟುಕೊಂಡು ಕುಳಿತಿಲ್ಲ'

'ಡಿ.ಕೆ.ಶಿವಕುಮಾರ್ ಅವರೇ ಬಿಜೆಪಿ ಕಾರ್ಯಕರ್ತರು ಬಳೆ ತೊಟ್ಟಿಕೊಂಡು ಕುಳಿತಿಲ್ಲ. ನಿಮ್ಮ ದೌರ್ಜನ್ಯ, ದಬ್ಬಾಳಿಕೆಗೆ ಹೈಕೋರ್ಟ್‌ನಲ್ಲಿ ತಕ್ಕ ಶಾಸ್ತಿ ಆಗಿದೆ. ಈ ಪ್ರಕರಣದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಈ ಬಗ್ಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

'ಕಾನೂನು ಬಾಹಿರವಾಗಿ ಬಂಧಿಸುವುದು ತಪ್ಪು ಎಂದು ಹೈಕೋರ್ಟ್ ಹೇಳಿದೆ. ಆ ಮೂಲಕ ಸರ್ಕಾರಕ್ಕೆ ಕಪಾಳಮೋಕ್ಷ ಮಾಡಿದೆ' ಎಂದರು.

ಮಾಜಿ ಸಚಿವರಾದ ಎಸ್.ಎ.ರವೀಂದ್ರನಾಥ್, ಎಂ.ಪಿ.ರೇಣುಕಾಚಾರ್ಯ ಹಾಗೂ ಬಸನಗೌಡ ಪಾಟೀಲ ಯತ್ನಾಳ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕ ಬಿ.ಪಿ.ಹರೀಶ್ ಸೇರಿ ಹಲವು ಮುಖಂಡರು ಉಪಸ್ಥಿತರಿದ್ದರು.

ಬಂಧನ–ಬಿಡುಗಡೆ: ಆಕ್ರೋಶ, ಸಂಭ್ರಮ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಬಂಧನ ಖಂಡಿಸಿ ಚಿಕ್ಕಮಗಳೂರಿನಲ್ಲಿ ದಿನವಿಡೀ ಪ್ರತಿಭಟನೆ ನಡೆದವು, ಶುಕ್ರವಾರ ಸಂಜೆ ವೇಳೆಗೆ ಹೈಕೋರ್ಟ್ ಜಾಮೀನು ನೀಡಿದ ಕೂಡಲೇ ಕಾರ್ಯಕರ್ತರು ಸಂಭ್ರಮಿಸಿದರು.

ಬಿಜೆಪಿ ಜಿಲ್ಲಾ ಘಟಕದಿಂದ ನಗರ ಬಂದ್‌ಗೆ ಕರೆ ನೀಡಲಾಗುತ್ತಿತ್ತು. ಬೆಳಿಗ್ಗೆಯಿಂದಲೂ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು. ಅಲ್ಲಲ್ಲಿ ಟೈರ್ ಮತ್ತು ಬೈಕ್‌ಗೆ ಬೆಂಕಿ ಹಚ್ಚಿ ಕಾರ್ಯಕರ್ತು ಆಕ್ರೋಶ ವ್ಯಕ್ತಪಡಿಸಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ವಿರುದ್ಧ ಸಿ.ಟಿ.ರವಿ ಅವಹೇಳನಕಾರಿ ಪದ ಬಳಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಆಜಾದ್ ಪಾರ್ಕ್ ವೃತ್ತದಲ್ಲಿ ಪ್ರತಿಭಟನೆ ನಡೆಸುತ್ತಿದ್ದರು. ಎಂ.ಜಿ. ರಸ್ತೆ ಕಡೆಯಿಂದ ಬಂದ ಬಿಜೆಪಿ ಕಾರ್ಯಕರ್ತರು, ಅಂಗಡಿ ಬಾಗಿಲು ಮುಚ್ಚಿಸುತ್ತಿದ್ದರು. ಈ ವೇಳೆ ಎರಡು ಗುಂಪಿನ ಕಾರ್ಯಕರ್ತರ ನಡುವೆ ಜಟಾಪಟಿ ನಡೆಯಿತು. ಪರಸ್ಪರ ನೂಕಾಟ- ತಳ್ಳಾಟ ನಡೆಯಿತು. ಈ ವೇಳೆ ಪೊಲೀಸರು ಲಾಠಿ ಬೀಸಿ ಎಲ್ಲರನ್ನೂ ಚದುರಿಸಿದರು.



ಚಿಕ್ಕಮಗಳೂರಿನ ಹನುಮಂತಪ್ಪ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಸಂಜೆ ಸಂಭ್ರಮಾಚರಣೆ ಮಾಡಿದರು

ಮಾರ್ಕೆಟ್ ರಸ್ತೆ, ದಂಟರಮಕ್ಕಿ ವೃತ್ತ, ಎಂ.ಜಿ. ರಸ್ತೆ, ಬೇಲೂರು ರಸ್ತೆ ಸೇರಿ ಹಲವೆಡೆ ಬಿಜೆಪಿ ಕಾರ್ಯಕರ್ತರು ಟೈರ್ ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ರಾಮನಹಳ್ಳಿ ಬಳಿ ಬೈಕ್ ಒಂದಕ್ಕೆ ಬೆಂಕಿ ಹಚ್ಚಿದರು.

ಶುಕ್ರವಾರ ಸಂಜೆ ಹೈಕೋರ್ಟ್ ರವಿ ಅವರಿಗೆ ಮಧ್ಯಂತರ ಜಾಮೀನು ನೀಡಿದ ಬಳಿಕ ಬಿಜೆಪಿ ಕಾರ್ಯಕರ್ತರು ಸಂಜೆ ಸಂಭ್ರಮಾಚರಣೆ ಮಾಡಿದರು. ಸಿ.ಟಿ. ರವಿ ಮನೆ ಮುಂದೆ ಜಮಾಯಿಸಿದ ಕಾರ್ಯಕರ್ತರು ಕುಣಿದು ಕುಪ್ಪಳಿಸಿದರು.

'ಸಿ.ಟಿ. ರವಿ ಅವರನ್ನು ಹುನ್ನಾರದಿಂದ ಬಂಧಿಸಲಾಗಿತ್ತು. ನ್ಯಾಯಾಲಯ ಜಾಮೀನು ನೀಡುವ ಮೂಲಕ ಸರ್ಕಾರಕ್ಕೆ ಚಾಟಿ ಬೀಸಿದೆ' ಎಂದರು.



ನ್ಯಾಯ ಗೆದ್ದಿದೆ. ಅಧಿಕಾರದ ಬಲದಿಂದ ಕಾನೂನು ಮತ್ತು ನಿಯಮಾವಳಿಗಳನ್ನು ಬದಲಿಸಬಹುದು ಎಂದು ಭಾವಿಸಿದ್ದ ಕಾಂಗ್ರೆಸ್ ಮುಖಂಡರಿಗೆ ಕಪಾಳ ಮೋಕ್ಷವಾಗಿದೆ.

ಬಿ.ಎಲ್.ಸಂತೋಷ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

ಕಲಬುರಗಿ ಜಯದೇವ ಆಸ್ಪತ್ರೆ ಕಟ್ಟಡ ಉದ್ಘಾಟನೆ ನಾಳೆ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಹಕಾರದೊಂದಿಗೆ ನಗರದಲ್ಲಿ ₹262 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಟ್ಟಡ ಡಿಸೆಂಬರ್ 22ರಂದು ಲೋಕಾರ್ಪಣೆಗೊಳ್ಳಲಿದೆ.

ಅಂದು ಬೆಳಿಗ್ಗೆ 11.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಟ್ಟಡ ಲೋಕಾರ್ಪಣೆ ಮಾಡುವರು. ಎಐಸಿಸಿ ಅಧ್ಯಕ್ಷರೂ ಆದ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು ಪಾಲ್ಗೊಳ್ಳಲಿದ್ದಾರೆ.

ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ 371 (ಜೆ) ತಿದ್ದುಪಡಿ ಕಾಯ್ದೆ ಜಾರಿಯಾಗಿ ಒಂದು ದಶಕವಾದ ಕಾರಣ ಈ ಕಟ್ಟಡ ನಿರ್ಮಿಸಲಾಗಿದೆ. ಇದು 371 ಹಾಸಿಗೆ ಸಾಮರ್ಥ್ಯ ಹೊಂದಿರುವುದು ವಿಶೇಷ. ಅತ್ಯಾಧುನಿಕ ಸೌಲಭ್ಯವಿರುವ ಈ ಆಸ್ಪತ್ರೆಯಲ್ಲೇ ಇನ್ನು ಮುಂದೆ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಹೃದ್ರೋಗಕ್ಕೆ ಗುಣಮಟ್ಟದ ಚಿಕಿತ್ಸೆ ಲಭ್ಯವಾಗಲಿದೆ.

'ಮಹಿಳೆಯ ಘನತೆಗೆ ಧಕ್ಕೆ ತರುವವರಿಗೆ ಬಿಜೆಪಿ ಬೆಂಬಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಮಹಿಳೆಯ ಘನತೆಗೆ ಧಕ್ಕೆ ತರುವಂಥ ಮಾತುಗಳನ್ನಾಡಿದ ಶಾಸಕ ಸಿ.ಟಿ. ರವಿ ಪರವಾಗಿ ನಿಲ್ಲುವ ಮೂಲಕ, ಅವಹೇಳನಕಾರಿ ಮಾತುಗಳನ್ನು ಬಿಜೆಪಿ ಬೆಂಬಲಿಸಿದಂತಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಸಮೀಪದ ಗೆಜ್ಜಲಗೆರೆ ಹೆಲಿಪ್ಯಾಡ್‌ನಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, 'ತನ್ನ ಘನತೆಯ ವಿಷಯದಲ್ಲಿ ಯಾವ ಮಹಿಳೆಯೂ ಸುಳ್ಳು ದೂರು ದಾಖಲಿಸಲು ಸಾಧ್ಯವಿಲ್ಲ. ಅವಾಚ್ಯ ಪದ ಬಳಕೆ ಆರೋಪ ಸುಳ್ಳು ಎಂದಾಗಿದ್ದರೆ ಸಿ.ಟಿ.ರವಿ ಅವರನ್ನು ಯಾಕೆ ಬಂಧಿಸಬೇಕಾಯಿತು' ಎಂದು ಪ್ರಶ್ನಿಸಿದರು.



ಸಿದ್ದರಾಮಯ್ಯ,

'ಸಿ.ಟಿ.ರವಿ ಅವರು ಕೀಳು ಅಭಿರುಚಿಯ ಭಾಷೆ ಬಳಸಿದ್ದನ್ನು ಅಲ್ಲಿದ್ದವರು ಕೇಳಿಸಿಕೊಂಡಿದ್ದಾರೆ. ಆಡಿಯೊ ಮತ್ತು ವಿಡಿಯೊಗಳ ಸಾಕ್ಷ್ಯ ಇದೆ ಎಂದು ಹೇಳಿದ್ದಾರೆ. ಇದು ಕ್ರಿಮಿನಲ್ ಅಪರಾಧ' ಎಂದರು.

ತಮಗೆ ಜೀವಬೆದರಿಕೆ ಇದ್ದು, ಅದಕ್ಕೆ ಸರ್ಕಾರವೇ ಕಾರಣ ಎಂಬ ಸಿ.ಟಿ ರವಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಎಫ್‌ಐಆರ್ ದಾಖಲಾದ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಕೆಲಸ ಪೊಲೀಸರದು. ರವಿ ವಿರುದ್ಧ ಆಕ್ರೋಶ ಹೆಚ್ಚಿದ್ದರಿಂದ ಅವರನ್ನು ಬೆಳಗಾವಿಯಿಂದ ಖಾನಾಪುರಕ್ಕೆ ಸ್ಥಳಾಂತರಿಸಬೇಕಾಯಿತು' ಎಂದರು.


ಔರಂಗಜೇಬ್‌ನ ವಂಶಸ್ಥರು ಕೋಲ್ಕತ್ತದಲ್ಲಿ ರಿಕ್ಷಾ ಚಲಾಯಿಸುತ್ತಿದ್ದಾರೆ: ಯೋಗಿ ಆದಿತ್ಯನಾಥ

‘ದೇಗುಲ ನಾಶಪಡಿಸುವವರ ವಂಶ ಅಳಿಯುತ್ತದೆ’

ಪ್ರಜಾವಾಣಿ ವಾರ್ತೆ

ಲಖನೌ: ಹಿಂದೂ ದೇಗುಲಗಳನ್ನು ನಾಶಗೊಳಿಸಲು ಮತ್ತು ಅಪವಿತ್ರಗೊಳಿಸಲು ಕಾರಣರಾದವರು ಅವನತಿ ಹೊಂದುತ್ತಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಶುಕ್ರವಾರ ಹೇಳಿದರು.

‘ಮಂದಿರಗಳನ್ನು ಕೆಡವಿದವರ ವಂಶಸ್ಥರ ಪರಿಸ್ಥಿತಿ ಈಗ ಹೇಗಿದೆ ಎಂದು ನಾನು ಜನರನ್ನು ಕೇಳಿದೆ. ಅವರು ಮೊಘಲ್ ಆಡಳಿತಗಾರ ಔರಂಗಜೇಬ್‌ನ ವಂಶಸ್ಥರು ಕೋಲ್ಕತ್ತದಲ್ಲಿ ರಿಕ್ಷಾ ಚಲಾಯಿಸುತ್ತಿದ್ದಾರೆ ಎಂದು ಹೇಳುತ್ತಾರೆ’ ಎಂದು ಅವರು ಹೇಳಿದರು.


ಯೋಗಿ ಆದಿತ್ಯನಾಥ

ಅವರು ಅಯೋಧ್ಯೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದರು.

‘ಆ ಜನರು ದೇಗುಲಗಳನ್ನು ನಾಶಪಡಿಸದಿದ್ದರೆ ಮತ್ತು ಅಪವಿತ್ರಗೊಳಿಸದಿದ್ದರೆ ಇಂದು ಅವರಿಗೆ ಈ ದುಸ್ಥಿತಿ ಬರುತ್ತಿರಲಿಲ್ಲ’ ಎಂದ ಅವರು, ‘ಈ ದುಷ್ಕೃತ್ಯ ಮಾಡುವವರ ವಂಶ ನಶಿಸುತ್ತದೆ ಮತ್ತು ಸನಾತನ ಧರ್ಮದಿಂದ ಮಾತ್ರ ವಿಶ್ವದಲ್ಲಿ ಶಾಂತಿ ನೆಲೆಸಲು ಸಾಧ್ಯ’ ಎಂದು ಅವರು ಹೇಳಿದರು.

‘ಅಯೋಧ್ಯೆಯ ರಾಮಜನ್ಮಭೂಮಿ, ಮಥುರಾದ ಶ್ರೀಕೃಷ್ಣ ಜನ್ಮಭೂಮಿ, ವಾರಾಣಸಿಯ ಕಾಶಿ ವಿಶ್ವನಾಥ ದೇಗುಲ, ಸಂಭಲ್‌ನ ಹರಿಹರ ದೇಗುಲಗಳನ್ನು ಅವರು ಧ್ವಂಸಗೊಳಿಸಿದ್ದರು’ ಎಂದು ಯೋಗಿ ಹೇಳಿದರು.

‘ಜಗತ್ತಿನ ಎಲ್ಲ ಧರ್ಮಗಳಿಗೆ ಕಷ್ಟ ಕಾಲದಲ್ಲಿ ಸನಾತನ ಧರ್ಮ ಆಶ್ರಯ ನೀಡಿದೆ. ಆದರೆ, ಅದಕ್ಕೆ ಪ್ರತಿಯಾಗಿ ಹಿಂದೂಗಳು ಇಂದು ಎಲ್ಲೆಡೆ ಗುರಿಯಾಗುತ್ತಿದ್ದಾರೆ’ ಎಂದು ಅವರು ದೂರಿದರು.

‘ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಲ್ಲಿ ಏನಾಯಿತು’ ಎಂದು ಪ್ರಶ್ನಿಸಿದ ಅವರು, ‘ಮಾನವೀಯತೆಯನ್ನು ಕಾಪಾಡಬೇಕು ಎಂದರೆ ಸನಾತನ ಧರ್ಮವನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು’ ಎಂದು ಕರೆ ನೀಡಿದರು.

ಕಾರಿನಲ್ಲಿ 52 ಕೆ.ಜಿ ಚಿನ್ನ, ₹ 11 ಕೋಟಿ ನಗದು; ಆದಾಯ ತೆರಿಗೆ ಇಲಾಖೆ ವಶಕ್ಕೆ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಕೆಲ ದಿನಗಳಿಂದ ನಿಂತಿದ್ದ ಎಸ್‌ಯುವಿಯಲ್ಲಿ ₹40 ಕೋಟಿ ಮೌಲ್ಯದ 52 ಕೆ.ಜಿ ಚಿನ್ನದ ಗಟ್ಟಿ ಮತ್ತು ₹11 ಕೋಟಿ ನಗದು ಪತ್ತೆಯಾಗಿದ್ದು, ಅದನ್ನು ಆದಾಯ ತೆರಿಗೆ ಇಲಾಖೆ ವಶಕ್ಕೆ ಪಡೆದಿದೆ.

ಆದಾಯ ತೆರಿಗೆ ಇಲಾಖೆಯು ಕೆಲ ದಿನಗಳಿಂದ ನಗರದಲ್ಲಿ ವ್ಯಾಪಕ ಶೋಧ ನಡೆಸುತ್ತಿದ್ದು, ಅದರ ಬೆನ್ನಲ್ಲೇ ಇದು ಪತ್ತೆಯಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

‘ಇಲ್ಲಿನ ಕುಶಲಪುರ ರಸ್ತೆಯಲ್ಲಿ ವಾಹನವೊಂದು ನಿಂತಿದ್ದು, ಅದರೊಳಗೆ ಕೆಲ ಚೀಲಗಳಿವೆ ಎಂಬ ಮಾಹಿತಿ ಗುರುವಾರ ರಾತ್ರಿ ಬಂದಿತು. ಅದನ್ನು ಆಧರಿಸಿ ಪರಿಶೀಲಿಸಿದಾಗ ಚಿನ್ನ ಮತ್ತು ನಗದು ಪತ್ತೆಯಾಗಿದೆ’ ಎಂದು ಅವರು ವಿವರಿಸಿದರು.

ಎಸ್‌ಯುವಿ ಮಧ್ಯಪ್ರದೇಶ ನೋಂದಣಿ ಸಂಖ್ಯೆ ಹೊಂದಿದ್ದು, ನಾಲ್ಕು ವರ್ಷಗಳಿಂದ ಭೋಪಾಲ್‌ನಲ್ಲಿ ವಾಸಿಸುತ್ತಿರುವ ಗ್ವಾಲಿಯರ್ ಮೂಲದ ಚಂದನ್ ಸಿಂಗ್ ಗೌರ್ ಎಂಬುವರಿಗೆ ಸೇರಿದ್ದಾಗಿದೆ ಎಂದು ಅಧಿಕಾರಿಗಳು ಹೇಳಿದರು.

‘ಚಿನ್ನದ ಗಟ್ಟಿ ಮತ್ತು ನಗದು ಯಾರಿಗೆ ಸೇರಿದ್ದು ಎಂಬುದು ಸ್ಪಷ್ಟವಾಗಿಲ್ಲ. ಈ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ನೆಟ್ಟಾರು ಹತ್ಯೆ: ಮತ್ತೊಬ್ಬ ಆರೋಪಿ ಬಂಧನ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ 2022ರ ಜುಲೈನಲ್ಲಿ ನಡೆದಿದ್ದ ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನವದೆಹಲಿಯ ಇಂದಿರಾಗಾಂಧಿ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಬಂಧಿಸಿದೆ.

‘ಆರೋಪಿ ಕೊಡಾಜೆ ಮೊಹಮ್ಮದ್ ಶರೀಫ್, ಬಹರೇನ್‌ನಿಂದ ಇಲ್ಲಿನ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಬಂಧಿಸಲಾಯಿತು’ ಎಂದು ಎನ್‌ಐಎ ಪ್ರಕಟಣೆ ತಿಳಿಸಿದೆ. ಘಟನೆ ಬಳಿಕ ತಲೆಮರೆಸಿಕೊಂಡಿದ್ದ ಶರೀಫ್ ಪತ್ತೆಗೆ ಎನ್‌ಐಎ ಲುಕ್‌ಔಟ್ ನೋಟಿಸ್ ಹೊರಡಿಸಿತ್ತು.

‘ಬಂಧಿತನಾಗಿರುವ ಶರೀಫ್, ನಿಷೇಧಿತ ಪಿಎಫ್‌ಐನ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯನಾಗಿದ್ದ. ಉದ್ದೇಶಿತ ಕೊಲೆಗಳಿಗೆ ಸಂಬಂಧಿಸಿದಂತೆ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಇತರರಿಗೆ ಸೂಚನೆ ನೀಡುವ ಜವಾಬ್ದಾರಿ ಈತನದಾಗಿತ್ತು’ ಎಂದು ಹೇಳಿದೆ.


ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ 2022ರ ಜುಲೈ 26ರಂದು ಪ್ರವೀಣ್ ನೆಟ್ಟಾರು ಅವರನ್ನು ಇರಿದು ಹತ್ಯೆ ಮಾಡಲಾಗಿತ್ತು. 2022ರ ಆಗಸ್ಟ್ 4ರಂದು ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದ್ದ ಎನ್‌ಐಎ ಇದುವರೆಗೆ 20 ಆರೋಪಿಗಳನ್ನು ಬಂಧಿಸಿದೆ. ತಲೆಮರೆಸಿಕೊಂಡಿರುವ ಮೂವರು ಸೇರಿದಂತೆ ಒಟ್ಟು 23 ಮಂದಿ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ.

ಎನ್‌ಎಚ್‌ಆರ್‌ಸಿ ಮುಖ್ಯಸ್ಥ ಹುದ್ದೆ ವರದಿ ಅಲ್ಲಗಳೆದ ಡಿ.ವೈ ಚಂದ್ರಚೂಡ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ಮುಖ್ಯಸ್ಥರ ಹುದ್ದೆಗೆ ತಮ್ಮನ್ನು ಪರಿಗಣಿಸಲಾಗುತ್ತಿದೆ ಎನ್ನುವ ಮಾಧ್ಯಮ ವರದಿಗಳನ್ನು ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಶುಕ್ರವಾರ ಅಲ್ಲಗಳೆದಿದ್ದಾರೆ.


ಚಂದ್ರಚೂಡ್

‘ಈ ವರದಿಗಳು ಸತ್ಯಕ್ಕೆ ದೂರವಾಗಿವೆ. ಪ್ರಸ್ತುತ, ನಿವೃತ್ತ ಜೀವನದಲ್ಲಿ ಸಂತೋಷದಿಂದ ಇದ್ದೇನೆ’ ಎಂದು ಅವರು ಹೇಳಿದ್ದಾರೆ. ಎನ್‌ಎಚ್‌ಆರ್‌ಸಿ ಮುಖ್ಯಸ್ಥರ ಹುದ್ದೆಯು ಜೂನ್ 1ರಿಂದ ಖಾಲಿ ಉಳಿದಿದೆ.




❦ ಸುಭಾಷಿತ ❦

ಎಲ್ಲ ಧರ್ಮಗಳೂ ಮನುಷ್ಯ ಧರ್ಮವೇ ಶ್ರೇಷ್ಠ ಎಂದಿವೆ. ಅರ್ಥೈಸಿಕೊಳ್ಳುವುದರಲ್ಲಿ ಸೋತಿರುವ ನಾವು, ನಮ್ಮದೇ ಶ್ರೇಷ್ಠ ಎನ್ನುತ್ತೇವೆ.

-ಕುವೆಂಪು

ಸುವರ್ಣ ಕರ್ನಾಟಕಕ್ಕೆ ಸಮ್ಮೇಳನ ಸ್ಪಂದನ ಅಧ್ಯಕ್ಷರ ಕಳಕಳಿಗೆ ಸ್ಪಂದಿಸಲಿ ಸರ್ಕಾರ

ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಗೊ.ರು. ಚನ್ನಬಸಪ್ಪ ಅವರು ಆಡಿರುವ ಮಾತುಗಳು, ನಾಡಿನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಆಗುಹೋಗುಗಳಿಗೆ ಸ್ಪಂದಿಸುವಂತಿವೆ; 'ಸುವರ್ಣ ಮಹೋತ್ಸವ' ಸಂಭ್ರಮದಲ್ಲಿರುವ ಕರ್ನಾಟಕದ ನಾಳೆಗಳನ್ನು ರೂಪಿಸಲು ಅಗತ್ಯವಾದ ಕಿವಿಮಾತುಗಳಂತಿವೆ. ಸಮಾಜದ ಆರೋಗ್ಯಕ್ಕೆ ಅಗತ್ಯವಾದ ತಾತ್ವಿಕ ತಳಹದಿಯನ್ನು ರೂಪಿಸಿಕೊಟ್ಟಿರುವ ಕನ್ನಡ ಸಾಹಿತ್ಯದ 'ವಿವೇಕ ಪರಂಪರೆ'ಯ ಭಾಗವಾಗಿ ಹಾಗೂ ಹಿರಿಯ ಮುತ್ಸದ್ದಿಯೊಬ್ಬರ ಅನುಭವದ ಅಭಿವ್ಯಕ್ತಿಯ ರೂಪದಲ್ಲಿ ಗೊರುಚ ಅವರ ಮಾತುಗಳನ್ನು ಗಮನಿಸಬೇಕಾಗಿದೆ. ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಬೋಧನೆಯಲ್ಲಿ ಕನ್ನಡ ಮಾಧ್ಯಮವೇ ಕಡ್ಡಾಯವಾಗಬೇಕು ಎಂದು ಅಭಿಪ್ರಾಯಪಟ್ಟಿರುವ ಅವರು, ಬೇರೆ ಯಾವ ಭಾಷೆಯನ್ನು ಯಾವ ಕಾರಣದಿಂದಲೂ ಶಿಕ್ಷಣ ಮಾಧ್ಯಮವನ್ನಾಗಿ ಹೇರಕೂಡದು ಎಂದು ಒತ್ತಾಯಿಸಿದ್ದಾರೆ. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಸರ್ಕಾರ ತೆರೆಯುವುದನ್ನಾಗಲೀ ಖಾಸಗಿ ಶಾಲೆಗಳಿಗೆ ಅನುಮತಿ ಕೊಡುವುದನ್ನಾಗಲೀ ಕೂಡಲೇ ನಿಲ್ಲಿಸಬೇಕು ಎನ್ನುವ ಅವರ ಆಗ್ರಹವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಕನ್ನಡವನ್ನು ಶಿಕ್ಷಣ ಮಾಧ್ಯಮದ ಭಾಷೆಯನ್ನಾಗಿಸಬೇಕು ಹಾಗೂ ಒಂದು ಭಾಷೆ–ವಿಷಯವಾಗಿ ಇಂಗ್ಲಿಷ್ ಕಲಿಸಬಹುದು ಎನ್ನುವ ಅವರ ಸಲಹೆ ಕಾರ್ಯಸಾಧ್ಯವಾದುದು ಹಾಗೂ ಕನ್ನಡದ ಹಿತದೃಷ್ಟಿಯಿಂದ ಅಗತ್ಯವಾದುದು.



ಕರ್ನಾಟಕದ ನಾಳೆಗಳನ್ನು ರೂಪಿಸಲು ಅಗತ್ಯವಾದ ಕಿವಿಮಾತುಗಳಂತಿರುವ ಗೊರುಚ ಅವರ ಮಾತುಗಳನ್ನು ಹಿರಿಯ ಮುತ್ಸದ್ದಿಯೊಬ್ಬರ ಅನುಭವದ ಅಭಿವ್ಯಕ್ತಿಯ ರೂಪದಲ್ಲಿ ಗಮನಿಸಬೇಕಾಗಿದೆ

ಗ್ರಾಮೀಣ ಪ್ರದೇಶದಲ್ಲಿನ ಸಾವಿರಾರು ಸರ್ಕಾರಿ ಶಾಲೆಗಳು ಸೂರು, ಗೋಡೆ ಉರುಳುವ ಸ್ಥಿತಿಯಲ್ಲಿರುವ ಬಗ್ಗೆ ಸರ್ಕಾರದ ಗಮನಸೆಳೆದಿರುವ ಸಮ್ಮೇಳನಾಧ್ಯಕ್ಷರು, ಶಿಥಿಲಗೊಂಡ ಶಾಲೆಗಳನ್ನು ಸರಿಪಡಿಸುವ ಮೂಲಕ ಮಕ್ಕಳಿಗೆ ಮತ್ತು ಪೋಷಕರಿಗೆ ಸರ್ಕಾರಿ ಶಾಲೆಗಳು ಆಕರ್ಷಕವಾಗುವಂತೆ ಉನ್ನತೀಕರಿಸಬೇಕು ಎಂದು ನೀಡಿರುವ ಸಲಹೆ ಸರಿಯಾಗಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಬಲವರ್ಧನೆಗಾಗಿ ಶಾಶ್ವತ ಅನುದಾನ ನೀಡಬೇಕು ಹಾಗೂ ವಿಶೇಷ ಕಾರ್ಯೋದ್ದೇಶಗಳಿಗಾಗಿ ರೂಪುಗೊಂಡಿರುವ ಜಾನಪದ ವಿಶ್ವವಿದ್ಯಾಲಯ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಹಾಗೂ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ನೃತ್ಯ ವಿಶ್ವವಿದ್ಯಾಲಯವನ್ನು ನಾಡಿನ ಅಮೂಲ್ಯ ಸಾಂಸ್ಕೃತಿಕ ಕೇಂದ್ರಗಳಾಗಿ ಸರ್ಕಾರ ಭಾವಿಸಬೇಕೆನ್ನುವ ಗೊರುಚ ಅವರ ಅಭಿಪ್ರಾಯಕ್ಕೆ ಕನ್ನಡ ಸಂಸ್ಕೃತಿಯನ್ನು ಬಲಪಡಿಸುವ ದಿಸೆಯಲ್ಲಿ ವಿಶೇಷ ಮಹತ್ವವಿದೆ.

ಸಮಾಜದಲ್ಲಿನ ಧಾರ್ಮಿಕ ಸಾಮರಸ್ಯ ಕ್ಷೀಣಿಸುತ್ತಿರುವ ಬಗ್ಗೆ ಗೊರುಚ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಧರ್ಮ ಮತ್ತು ರಾಜಕಾರಣದ ಹೆಸರಿನಲ್ಲಿ ಸಮಾಜವನ್ನು ವಿಭಜಿಸಲು ಪ್ರಯತ್ನಿಸುತ್ತಿರುವವರಿಗೆ ಹಿರೀಕರೊಬ್ಬರು ಹೇಳಿರುವ ಪಾಠಗಳಂತಿವೆ. ವ್ಯಕ್ತಿ ಹಾಗೂ ಸಮಷ್ಟಿ ನೆಲೆಯಲ್ಲಿ ಒಂದುಗೂಡಿಸಬೇಕಾದ ಧರ್ಮಗಳು ಅಸಹನೆ ಹಾಗೂ ಅಸಮಾನತೆಯನ್ನು ಬಿತ್ತುತ್ತಿರುವ ಸಾಧನಗಳಾಗಿ ಬದಲಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಅವರು, 'ನಾವು ಕಟ್ಟುವವರಾಗಬೇಕೇ ಹೊರತು ಕೆಡಹುವರು ಆಗಬಾರದು; ನಾವು ಮುಂದೆ ಹೋಗಬೇಕೇ ವಿನಾ ಹಿಂದೆ ಹೋಗಬಾರದು' ಎಂದು ವಿವೇಕದ ಮಾತುಗಳನ್ನಾಡಿದ್ದಾರೆ. ಧಾರ್ಮಿಕ ಕೇಂದ್ರಗಳನ್ನು ಮತೀಯ ಸಂಘರ್ಷದ ಕೇಂದ್ರಗಳನ್ನಾಗಿಸುತ್ತಿರುವುದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ, ಬ್ಯಾಂಕು ವ್ಯವಹಾರಗಳಲ್ಲಿ, ಅಂಚೆ ಕಚೇರಿಗಳಲ್ಲಿ ರಾಜ್ಯಭಾಷೆಗಳನ್ನು ನಿರ್ಲಕ್ಷಿಸಿ ಹಿಂದಿಯನ್ನು ಹೇರುವ ಕೇಂದ್ರ ಸರ್ಕಾರದ ಹುನ್ನಾರವನ್ನು ಟೀಕಿಸಿದ್ದು, ಬಹುಭಾಷಾ ಸಂಸ್ಕೃತಿ ನೀತಿಯನ್ನು ಸಂವಿಧಾನಾತ್ಮಕವಾಗಿ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ. ರಾಜ್ಯದ ತೆರಿಗೆ ಪಾಲನ್ನು ಕೇಂದ್ರ ಸರ್ಕಾರ ವಂಚಿಸುತ್ತಿದೆ ಎನ್ನುವ ಮಾತುಗಳಲ್ಲಿ ಸತ್ಯಾಂಶವಿದ್ದು, ರಾಜ್ಯಗಳ ಹಣಕಾಸು ಸ್ವಾಯತ್ತತೆಯನ್ನು ಸಂರಕ್ಷಿಸುವ ಕಾರ್ಯವನ್ನು ಒಕ್ಕೂಟ ಸರ್ಕಾರ ಮಾಡಬೇಕು ಎಂದು ಸಮ್ಮೇಳನಾಧ್ಯಕ್ಷರು ಹೇಳಿರುವುದು ಕುತೂಹಲಕರ. 'ಕರ್ನಾಟಕದಲ್ಲಿ ಕನ್ನಡ ಸಾರ್ವಭೌಮ' ಎನ್ನುವ ನುಡಿಪರಂಪರೆಯ ಮಾತನ್ನು ಪುನರುಚ್ಚರಿಸಿರುವ ಸಮ್ಮೇಳನಾಧ್ಯಕ್ಷರು, ಆದರ್ಶ ಜನತಂತ್ರದ ಬಹುಮುಖ್ಯ ಗುಣದ ರೂಪದಲ್ಲಿ ಭಾಷಾಭಿಮಾನವನ್ನು ಗುರುತಿಸಿದ್ದಾರೆ. ಜಾಗತಿಕ ಸಂವಹನದ ಚಹರೆಯನ್ನು ಬದಲಾಯಿಸುತ್ತಿರುವ ತಂತ್ರಜ್ಞಾನದ ನೆರವು ಪಡೆದು ಕನ್ನಡ ಭಾಷೆ ಇನ್ನಷ್ಟು ಶ್ರೀಮಂತವಾಗಿ ಆ ಮೂಲಕ ಕಿರಿಯ ಪೀಳಿಗೆಯ ಎದೆಗೆ ಬೀಳುವ ಅಕ್ಷರ ಆಗಬೇಕಿದೆ ಎನ್ನುವ ಅವರ ಆಶಯವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಕನ್ನಡ ಹಾಗೂ ಕನ್ನಡಿಗರ ಹಿತವೂ ಅಡಗಿದೆ.

ದಿನದ ಟ್ವೀಟ್

ಸುಗಮ ಸಂಚಾರ ಸಾಧ್ಯವಾಗಲಿ

ಸಂಚಾರ ಪೊಲೀಸ್ ತಂಡದಿಂದ ಉತ್ತಮ ಕಾರ್ಯ. ಆದರೆ, ರಸ್ತೆಗಳನ್ನು ಸರಿಯಾಗಿ ನಿರ್ವಹಿಸುವಂತೆ ಬಿಬಿಎಂಪಿ ಅಧಿಕಾರಿಗಳನ್ನು ಕೇಳಿ. ಕೆಟ್ಟ ರಸ್ತೆಗಳು ಮತ್ತು ವಾಹನಗಳ ನಿಧಾನಗತಿಯ ಸಂಚಾರದ ಪರಿಣಾಮವನ್ನು ಜನಸಾಮಾನ್ಯರಷ್ಟೇ ಅಲ್ಲ ಕಷ್ಟಪಟ್ಟು ದುಡಿಯುವ ಟ್ರಾಫಿಕ್ ಸಿಬ್ಬಂದಿಯೂ ಅನುಭವಿಸಬೇಕಾಗಿದೆ...

(ಟ್ರಾಫಿಕ್ ಸಂಬಂಧದ ಕುಂದುಕೊರತೆ, ದೂರು ಸಲ್ಲಿಕೆ, ಮಾಹಿತಿ ನೀಡಿಕೆಯಂತಹ ಕಾರ್ಯಗಳಿಗೆ ಅನುವಾಗುವಂತೆ ಬೆಂಗಳೂರು ಸಂಚಾರ ಪೊಲೀಸರು ಹೊಸ ವೆಬ್‌ಸೈಟ್ ಆರಂಭಿಸಿರುವುದಕ್ಕೆ ಪ್ರತಿಕ್ರಿಯೆ)

ದೀಪಕ್

ಕಿಡಿನುಡಿ

ಪುಸ್ತಕಗಳ ಖರೀದಿಗೆ ಸರ್ಕಾರಗಳು ಆಸಕ್ತಿ ತೋರದ ಕಾರಣ ಸಾರ್ವಜನಿಕ ಗ್ರಂಥಾಲಯಗಳು ನಿಸ್ತೇಜವಾಗಿವೆ. ಪುಸ್ತಕಗಳು 'ಮತ ಬ್ಯಾಂಕ್' ಅಲ್ಲ ಎಂಬುದು ರಾಜಕಾರಣಿಗಳಿಗೆ ಗೊತ್ತಾಗಿದೆ.

ವಸುಧೇಂದ್ರ, ಲೇಖಕ



25 ವರ್ಷಗಳ ಹಿಂದೆ

ಮಂಗಳವಾರ, 21-12-1999

• ಮಹಿಳಾ ಮೀಸಲಾತಿ ಲೋಕಸಭೆಯಲ್ಲಿ ಗದ್ದಲ

ನವದೆಹಲಿ, ಡಿ. 20 (ಪಿಟಿಐ)– ಮಹಿಳಾ ಮೀಸಲಾತಿ ವಿಚಾರದಲ್ಲಿ ವಿರೋಧ ಪಕ್ಷಗಳಲ್ಲೇ ಭಿನ್ನಾಭಿಪ್ರಾಯ ಮೂಡಿದ್ದರಿಂದ ಇಂದು ಲೋಕಸಭೆಯಲ್ಲಿ ಅಭೂತಪೂರ್ವ ಗದ್ದಲ ಉಂಟಾಯಿತು.

ಮಸೂದೆಯನ್ನು ನಾಳೆಯೇ ಮಂಡಿಸುವ ಬಗ್ಗೆ ಸರ್ಕಾರ ಸ್ಪಷ್ಟ ಆಶ್ವಾಸನೆ ನೀಡಲು ವಿಫಲವಾದ ಹಿನ್ನೆಲೆಯಲ್ಲಿ ಕಾಂಗ್ರೆಸ್, ಎಐಎಡಿಎಂಕೆ ಮತ್ತು ಎಡಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಮಸೂದೆ ಮಂಡನೆಗೆ ಬೆಂಬಲ ಸೂಚಿಸಿದ ಕಾಂಗ್ರೆಸ್, ಸಿಪಿಐ, ಸಿಪಿಎಂ, ತೆಲುಗುದೇಶಂ ಸದಸ್ಯರ ನಡುವೆ ಮತ್ತು ಮಸೂದೆಯನ್ನು ವಿರೋಧಿಸುವ ಆರ್‌ಜೆಡಿ, ಸಮಾಜವಾದಿ ಪಕ್ಷ, ಮುಸ್ಲಿಂ ಲೀಗ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಅರ್ಧ ಗಂಟೆ ಸದನದಲ್ಲಿ ಕೋಲಾಹಲ ಉಂಟಾಯಿತು.

• ಕೋಲಾರದಲ್ಲಿ ಲಾಠಿ ಪ್ರಹಾರ, ಅಶ್ರುವಾಯು

ಕೋಲಾರ, ಡಿ. 20– ತಮ್ಮಿಂದ ಕೊಳ್ಳುತ್ತಿರುವ ಹಾಲಿಗೆ ಒಂದು ರೂಪಾಯಿ ಕಡಿಮೆ ಮಾಡಿರುವುದನ್ನು ಪ್ರತಿಭಟಿಸಿ ಕೋಲಾರ ಜಿಲ್ಲೆಯ ರೈತರು ಇಂದು ನಡೆಸಿದ ಚಳವಳಿ ಹಿಂಸಾಚಾರಕ್ಕೆ ತಿರುಗಿತು. ಕಲ್ಲುತೂರಾಟದಲ್ಲಿ ತೊಡಗಿದ ಜನರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿ ಅಶ್ರುವಾಯು ಷೆಲ್‌ಗಳನ್ನು ಸಿಡಿಸಿದರು.

ಲಾಠಿ ಪ್ರಹಾರದಲ್ಲಿ ಸುಮಾರು 22 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ಅಬ್ಬಣಿ ಶಂಕರ್, ಕೆ.ಎಂ. ವೆಂಕಟೇಶ್, ಪಿ.ಆರ್. ಸೂರ್ಯನಾರಾಯಣಸ್ವಾಮಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 21-12-1974

• ಲೈಸೆನ್ಸ್ ಹಗರಣ: ಸಂಸತ್ ಸಮಿತಿ ತನಿಖೆಗೆ ನಕಾರ

ನವದೆಹಲಿ, ಡಿ. 20– ಲೈಸೆನ್ಸ್ ಹಗರಣದ ತನಿಖೆಗೆ ಸಂಸತ್ ಸಮಿತಿ ನೇಮಿಸುವ ಬಗ್ಗೆ ಸರ್ಕಾರದಿಂದ ಆಶ್ವಾಸನೆ ಪಡೆಯುವುದರಲ್ಲಿ ವಿಫಲವಾದ ಇಡೀ ವಿರೋಧ ಪಕ್ಷ ಇಂದು ಲೋಕಸಭೆಯಲ್ಲಿ ಸಭಾತ್ಯಾಗ ಮಾಡಿತು.

'ಆಮದು ಲೈಸೆನ್ಸ್ ಹಗರಣದ ಕುರಿತು ಸಂಸತ್ ತನಿಖೆಗೆ ಒತ್ತಾಯಿಸಿರುವ ಬಗೆಗಿನ ಚರ್ಚೆ ಮುಕ್ತಾಯವಾಯಿತು' ಎಂದು ಸಭಾಧ್ಯಕ್ಷರು ರೂಲಿಂಗ್ ಇತ್ತಿದ್ದು ವಿರೋಧ ಪಕ್ಷಗಳ ಈ ಪ್ರತಿಭಟನೆಗೆ ಕಾರಣವಾಯಿತು.

ಕೇಂದ್ರ ತನಿಖಾ ಮಂಡಲಿ ವರದಿ ಕೊಟ್ಟಿದ್ದು, ಸಂಬಂಧಿಸಿದ ಇತರ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಹಗರಣದ ಬಗ್ಗೆ ಸಂಸತ್ ತನಿಖೆ ಅಗತ್ಯವೆಂದು ವಿರೋಧ ಪಕ್ಷಗಳು ಒಮ್ಮತದ ಪಟ್ಟು ಹಿಡಿದವು. ಈ ವಿಷಯದಲ್ಲಿ ವಿರೋಧಿ ನಾಯಕರು ಸಲ್ಲಿಸಿರುವ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸದೆ ತಾನು ಯಾವುದಕ್ಕೂ ಬಾಧ್ಯವಾಗಲು ಸರ್ಕಾರ ನಿರಾಕರಿಸಿತು.

• ನೆಹರೂಗೆ ಗಾಂಧೀಜಿ ಬರೆದ ಪತ್ರ ಕಣ್ಮರೆ ಬಗ್ಗೆ ಸಿಬಿಐ ತನಿಖೆ

ನವದೆಹಲಿ, ಡಿ. 20– ಮಹಾತ್ಮ ಗಾಂಧಿ ಅವರು 1935ರ ಅಕ್ಟೋಬರ್‌ನಲ್ಲಿ ಜವಾಹರಲಾಲ್ ನೆಹರೂ ಅವರಿಗೆ ಬರೆದ ಮೂಲ ಪತ್ರ ಕಳೆದುಹೋಗಿರುವುದರ ಬಗ್ಗೆ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರವು ಸಿಬಿಐಗೆ ಸೂಚಿಸಿದೆ ಎಂದು ಕೇಂದ್ರ ವಾಣಿಜ್ಯ ಮಂತ್ರಿ ಡಿ.ಪಿ. ಚಟ್ಟೋಪಾಧ್ಯಾಯ ಅವರು ಇಂದು ರಾಜ್ಯಸಭೆಗೆ ತಿಳಿಸಿದರು.

ಅಂತರರಾಷ್ಟ್ರೀಯ ವಸ್ತುಪ್ರದರ್ಶನಕ್ಕೆ ಕಳುಹಿಸಿದ ಅಮೂಲ್ಯವಾದ ನೆಹರೂ ಪತ್ರವನ್ನು ಅಮೆರಿಕ ಕಲೆಕ್ಟರೊಬ್ಬರಿಗೆ ಮಾರಾಟ ಮಾಡಲಾಯಿತೆಂಬ ಬಗ್ಗೆ ಇಲಾಖಾ ತನಿಖೆ ವಿಳಂಬವಾಗಿದೆ ಎಂದೂ ಇಬ್ಬರು ಅಥವಾ ಮೂವರು ಅಧಿಕಾರಿಗಳು ಸ್ವಲ್ಪ ಉದಾಸೀನ ತೋರಿದ್ದಾರೆಂದೂ ಹೇಳಿದರು.

ಮಧ್ಯಮ ವರಮಾನದ ದೇಶವಾಗಿರುವ ಭಾರತ ಶ್ರೀಮಂತ ರಾಷ್ಟ್ರವಾಗುವುದು ಹೇಗೆ?

ಅರಿಯಬೇಕಿದೆ 'ಸಿರಿವಂತಿಕೆ'ಯ ಗುಟ್ಟು



ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಭಾರತ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವ ಗುರಿ ಇರಿಸಿಕೊಂಡಿದೆ. ಸದ್ಯಕ್ಕೆ ದೇಶಗಳ ಶ್ರೀಮಂತಿಕೆ ಅಳೆಯುವುದಕ್ಕೆ ತಲಾ ವರಮಾನವನ್ನು ಮಾಪನವನ್ನಾಗಿ ಬಳಸಲಾಗುತ್ತಿದೆ. ಯಾವುದೇ ದೇಶದ ತಲಾ ವರಮಾನವು ಅಮೆರಿಕದ 13,845 ಡಾಲರ್‌ಗಿಂತ (ಒಂದು ಡಾಲರ್‌ಗೆ ಸುಮಾರು ₹ 85) ಹೆಚ್ಚಾಗಿದ್ದರೆ ಅದು ಶ್ರೀಮಂತ ರಾಷ್ಟ್ರ ಎನಿಸಿಕೊಳ್ಳುತ್ತದೆ.

ಭಾರತದ ತಲಾ ವರಮಾನವು 2,500 ಡಾಲರ್ ಇದೆ. ನಮ್ಮ ದೇಶ ಈಗ ಮಧ್ಯಮ ವರಮಾನದ ದೇಶಗಳ ಪಟ್ಟಿಯಲ್ಲಿದೆ. ಇದು ಶ್ರೀಮಂತ ರಾಷ್ಟ್ರವಾಗಬೇಕಾದರೆ ಹೆಚ್ಚು ವೇಗವಾಗಿ ಬೆಳೆಯಬೇಕು. ದೇಶದ ಜಿಡಿಪಿ, ಅಂದರೆ ನಾವು ಉತ್ಪಾದಿಸುವ ಸರಕು ಹಾಗೂ ಸೇವೆಯ ಪ್ರಮಾಣ ಹೆಚ್ಚು ವೇಗವಾಗಿ ಬೆಳೆಯಬೇಕು. ಸದ್ಯಕ್ಕೆ ಅದು ಸುಮಾರಾಗಿ ಶೇಕಡ 6ರಷ್ಟಿದೆ. ಜಿಡಿಪಿಯು ಕನಿಷ್ಠ ಶೇಕಡ 8ರಿಂದ 10ರಷ್ಟಾದರೂ ಹೆಚ್ಚುತ್ತಾ ಹೋಗಬೇಕು ಎಂಬುದು ತಜ್ಞರ ಅಭಿಮತ.

ವಿಶ್ವಬ್ಯಾಂಕ್‌ನ 2024ರ ಜಾಗತಿಕ ಅಭಿವೃದ್ಧಿ ವರದಿಯ ಪ್ರಕಾರ, ಹಲವು ದೇಶಗಳಲ್ಲಿ ಬೆಳವಣಿಗೆಯ ವೇಗ ನಿಧಾನವಾಗುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಭಾರತವೂ ಸೇರಿದಂತೆ 108 ದೇಶಗಳು ಮಧ್ಯಮ ವರಮಾನದ ದೇಶಗಳಾಗಿಯೇ ಉಳಿದುಬಿಡಬಹುದು. ಇಂತಹ ಪರಿಸ್ಥಿತಿಯನ್ನು ಇಂದ್ರಮಿತ್ ಗಿಲ್ ಹಾಗೂ ಹೋಮಿ ಕರಸ್ ತಮ್ಮ ವರದಿಯೊಂದರಲ್ಲಿ 'ಮಧ್ಯ ವರಮಾನದ ಬಲೆ'– ಮಿಡಲ್ ಇನ್‌ಕಂ ಟ್ರ್ಯಾಪ್ ಎಂದು ಕರೆದಿದ್ದಾರೆ. ಜಗತ್ತಿನ ಶೇ 75ರಷ್ಟು ಜನ ಈ ದೇಶಗಳಲ್ಲಿದ್ದಾರೆ. ಅವರಲ್ಲಿ ಶೇ 66ರಷ್ಟು ಜನ ತೀರಾ ಬಡತನದಲ್ಲಿದ್ದಾರೆ. ಅಸಮಾನತೆ, ಹವಾಮಾನ ವೈಪರೀತ್ಯದಂತಹ ಎಲ್ಲಾ ಸಮಸ್ಯೆಗಳು ಅವರನ್ನೇ ಹೆಚ್ಚಾಗಿ ಕಾಡುತ್ತಿವೆ.

ಈ ದೇಶಗಳಲ್ಲಿ ಬೆಳವಣಿಗೆಯನ್ನು ಸಾಧಿಸುವುದು ಹೇಗೆ ಎನ್ನುವುದು ಲಾಗಾಯ್ತಿನಿಂದ ಬಹುತೇಕ ಆರ್ಥಿಕ ತಜ್ಞರನ್ನು ಕಾಡುತ್ತಿದೆ. ಈ ವರದಿಯಲ್ಲಿ ಒಂದು ಪರಿಹಾರವನ್ನು ಸೂಚಿಸಲಾಗಿದೆ. ಹಿಂದೆ ಮಧ್ಯಮ ವರಮಾನದ ಗಡಿಯನ್ನು ದಾಟಿಕೊಂಡು ಶ್ರೀಮಂತ ರಾಷ್ಟ್ರಗಳ ಪಟ್ಟಿ ಸೇರಿದ ಕೊರಿಯಾ, ಪೋಲೆಂಡ್, ಚಿಲಿಯಂತಹ ಕೆಲವು ರಾಷ್ಟ್ರಗಳ ಅನುಭವವನ್ನು ಆಧರಿಸಿ ಉಳಿದ ರಾಷ್ಟ್ರಗಳು ಪ್ರಗತಿಯನ್ನು ಸಾಧಿಸುವುದಕ್ಕೆ ಬೇಕಾದ ಕಾರ್ಯಸೂಚಿಯನ್ನು ರೂಪಿಸಲಾಗಿದೆ.


ರಾಷ್ಟ್ರಗಳು ಬೆಳೆದಂತೆ ಅವುಗಳ ಆರ್ಥಿಕ ಸಂರಚನೆಯಲ್ಲೂ ಬದಲಾವಣೆಯಾಗುತ್ತದೆ.ಅದಕ್ಕೆ ಅನುಗುಣವಾಗಿ ಅನುಸರಿಸುವ ಮಾರ್ಗವೂ ಬದಲಾಗುತ್ತಿರಬೇಕು. ಬೆಳವಣಿಗೆಯ ಪ್ರಾರಂಭದ ಹಂತದಲ್ಲಿರುವ ಬಡರಾಷ್ಟ್ರಗಳು ಶಿಕ್ಷಣ, ಆರೋಗ್ಯ, ಮೂಲಸೌಕರ್ಯದಂತಹವುಗಳ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ಹೂಡಬೇಕಾಗುತ್ತದೆ. ಬಂಡವಾಳ ಕ್ರೋಡೀಕರಣ ಹಾಗೂ ಹೂಡಿಕೆಯಿಂದ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಒಂದು ಹಂತದವರೆಗೆ ಬೆಳವಣಿಗೆಯನ್ನು ಸಾಧಿಸಬಹುದು.

ಆದರೆ ಮಧ್ಯಮ ವರಮಾನದ ಹಂತಕ್ಕೆ ಬಂದ ಮೇಲೆ ಹೂಡಿಕೆಯ ಹೆಚ್ಚಳವಷ್ಟೇ ಸಾಲುವುದಿಲ್ಲ. ಆರ್ಥಿಕಾಭಿವೃದ್ಧಿಯ ವೇಗವನ್ನು ಹೆಚ್ಚಿಸುವುದಕ್ಕೆ ಆರ್ಥಿಕ ಸಂರಚನೆಯಲ್ಲಿ ಬದಲಾವಣೆ ತರಬೇಕಾಗುತ್ತದೆ. ಹೊಸ ತಂತ್ರಜ್ಞಾನಗಳು, ಚಿಂತನೆಗಳು ಅವಶ್ಯವಾಗುತ್ತವೆ. ಆದರೆ ಅದಕ್ಕೆ ಒದ್ದಾಡಬೇಕಾಗಿಲ್ಲ. ಅಂತಹ ತಂತ್ರಜ್ಞಾನ ಈಗಾಗಲೇ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಲಭ್ಯವಿರುತ್ತದೆ. ಆ ಬಗೆಯ ಚಿಂತನೆಗಳನ್ನು ಎರವಲು ಪಡೆದುಕೊಂಡು ತಮ್ಮ ದೇಶದ ಪರಿಸ್ಥಿತಿಗೆ ತಕ್ಕಂತೆ ಅಳವಡಿಸಿಕೊಳ್ಳಬಹುದು. ಇದು ಎರಡನೆಯ ಹಂತ. ಇದನ್ನು ವರದಿಯಲ್ಲಿ ಇನ್‌ಫ್ಯೂಷನ್ ಎಂದು ಕರೆಯಲಾಗಿದೆ.

ಜಾಗತಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುವುದಕ್ಕೆ ಸರ್ಕಾರಗಳು ಉದ್ದಿಮೆಗಳನ್ನು ಪ್ರೋತ್ಸಾಹಿಸಬೇಕು. ಅದಕ್ಕೆ ಬೇಕಾದ ನೀತಿಗಳನ್ನು ರೂಪಿಸಬೇಕು. ಅವಶ್ಯವಾದ ಎಂಜಿನಿಯರುಗಳು, ವಿಜ್ಞಾನಿಗಳಂತಹ ನುರಿತ ಕೆಲಸಗಾರರನ್ನು ಸೃಷ್ಟಿಸುವುದಕ್ಕೆ ಬೇಕಾದ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸುವುದಕ್ಕೆ ವ್ಯವಸ್ಥೆಗಳನ್ನು ರೂಪಿಸಬೇಕು. ಆದರೆ ಹೀಗೆ ವಿದೇಶಗಳ ತಂತ್ರಜ್ಞಾನವನ್ನೇ ನೆಚ್ಚಿಕೊಂಡು ಆರ್ಥಿಕತೆಯನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲ.

ಹೆಚ್ಚಿನ ಅಭಿವೃದ್ಧಿ ಸಾಧನೆಗೆ ಮೂರನೇ ಹಂತವಾಗಿ ಅವಶ್ಯ ತಂತ್ರಜ್ಞಾನವನ್ನು ದೇಶದೊಳಗೇ ಕಂಡುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಕೊರಿಯಾ 1960ರಲ್ಲಿ ತೀರಾ ಬಡರಾಷ್ಟ್ರವಾಗಿತ್ತು. ಅದರ ತಲಾ ವರಮಾನವು 1,200 ಡಾಲರ್‌ಗಿಂತ ಕಡಿಮೆ ಇತ್ತು. ಅದು ತನ್ನ ಉದ್ದಿಮೆಗಳಿಗೆ ವಿದೇಶಗಳಿಂದ ಅದರಲ್ಲೂ ವಿಶೇಷವಾಗಿ ಜಪಾನಿನ ತಂತ್ರಜ್ಞಾನ ನಕಲು ಮಾಡಿಕೊಂಡು ತನ್ನಲ್ಲಿ ಉತ್ಪಾದನೆಯನ್ನು ಸುಧಾರಿಸಿಕೊಳ್ಳತೊಡಗಿತು. ನಂತರದಲ್ಲಿ ಇದಕ್ಕೆ ಜಪಾನಿನ ವಿರೋಧ ವ್ಯಕ್ತವಾಗುತ್ತಿದ್ದಂತೆ, ತನ್ನ ಅವಶ್ಯಕತೆಗೆ ಬೇಕಾದ ತಂತ್ರಜ್ಞಾನಕ್ಕಾಗಿ ಅನ್ವೇಷಣೆಯನ್ನು ಪ್ರಾರಂಭಿಸಿತು. ಅವಶ್ಯ ಪರಿಣತರನ್ನು ಒದಗಿಸುವುದಕ್ಕೆ ಶಿಕ್ಷಣ ಸಚಿವಾಲಯವು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು, ನೀತಿಗಳು, ಯೋಜನೆಗಳನ್ನು ರೂಪಿಸಿಕೊಂಡಿತು. ಇದರ ಫಲವಾಗಿ ಕೊರಿಯಾ ಇಂದು 33,000 ಡಾಲರ್ ತಲಾ ವರಮಾನದ ರಾಷ್ಟ್ರವಾಗಿ ಬೆಳೆದಿದೆ. ಪೋಲೆಂಡ್, ಚಿಲಿ ಕೂಡ ಇದೇ ಹಾದಿ ಹಿಡಿದು ಶ್ರೀಮಂತ ರಾಷ್ಟ್ರಗಳಾಗಿವೆ.

ಹಾಗಾಗಿ, ಬಂಡವಾಳ ಹೂಡಿಕೆ, ವಿದೇಶಗಳ ತಂತ್ರಜ್ಞಾನದ ಬಳಕೆ ಹಾಗೂ ಅಂತಿಮವಾಗಿ ತಂತ್ರಜ್ಞಾನದ ಅನ್ವೇಷಣೆಯ ಮೂಲಕ ಮಧ್ಯಮ ವರಮಾನದ ದೇಶಗಳು ಹಂತಹಂತವಾಗಿ ಶ್ರೀಮಂತ ರಾಷ್ಟ್ರಗಳಾಗಿ ಬೆಳೆಯುವುದಕ್ಕೆ ಸಾಧ್ಯ. ಇಲ್ಲದೇಹೋದರೆ ಆರ್ಥಿಕ ಬೆಳವಣಿಗೆಯ ವೇಗ ಕುಂಠಿತಗೊಂಡು ಈ ದೇಶಗಳು ಮಧ್ಯಮ ವರಮಾನದ ರಾಷ್ಟ್ರಗಳಾಗಿಯೇ ಶಾಶ್ವತವಾಗಿ ಉಳಿದುಬಿಡುತ್ತವೆ ಎನ್ನುವ ಆತಂಕವು ವರದಿಯಲ್ಲಿ ವ್ಯಕ್ತವಾಗಿದೆ.



ಬೆಳವಣಿಗೆಯನ್ನು ತ್ವರಿತಗೊಳಿಸುವುದಕ್ಕೆ ಗಿಲ್ ಮೂರು ಸಲಹೆಗಳನ್ನು ಸೂಚಿಸಿದ್ದಾರೆ. ಮೊದಲನೆಯದಾಗಿ, ಆರ್ಥಿಕತೆ ಹೆಚ್ಚು ಮುಕ್ತವಾಗಿರಬೇಕು. ಹೆಚ್ಚು ಉದಾರವಾದಿ ನೀತಿ ಅನುಸರಿಸಬೇಕು. ಎರಡನೆಯದಾಗಿ, ಆರ್ಥಿಕತೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಇರಬೇಕು. ಮಹಿಳೆಯರು, ಅಲ್ಪಸಂಖ್ಯಾತರಂತಹ ವಂಚಿತ ಸಮುದಾಯಗಳಿಗೆ ಅವಕಾಶ ಕೊಟ್ಟು, ಲಭ್ಯವಿರುವ ಪ್ರತಿಭೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಮೂರನೆಯದಾಗಿ, ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ಬೇಕು.


ವಿಶ್ವಬ್ಯಾಂಕಿನ ಈ ವರದಿಯ ಕುರಿತಂತೆ ವ್ಯಾಪಕ ಚರ್ಚೆಯಾಗುತ್ತಿದೆ. ಹಲವು ಟೀಕೆಗಳೂ ಬಂದಿವೆ. ಪ್ರತಿ ರಾಷ್ಟ್ರಕ್ಕೂ ಅದರದೇ ಆದ ಚಾರಿತ್ರಿಕ, ಭೌಗೋಳಿಕ ಹಿನ್ನೆಲೆ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಒತ್ತಡಗಳು ಇರುತ್ತವೆ. ಎಲ್ಲ ದೇಶಗಳಿಗೂ ಒಂದೇ ರೀತಿಯ ಪರಿಹಾರ ಸಾಧ್ಯವಿಲ್ಲ ಎಂದು ಕೆಲವರು ಅನುಮಾನ ವ್ಯಕ್ತಪಡಿಸಿದ್ದಾರೆ. ಉದಾರೀಕರಣದಂತಹ ನೀತಿಯೇ ಈಗಿನ ಆರ್ಥಿಕ ಸಮಸ್ಯೆಗಳಿಗೆ ಕಾರಣ ಅನ್ನುವುದು ನಿಜವಾದರೆ, ಅದನ್ನು ಮುಂದುವರಿಸಿದರೆ ಬಿಕ್ಕಟ್ಟು ಪರಿಹಾರವಾಗುವ ಬದಲು ತೀವ್ರವಾಗಬಹುದು ಎನ್ನುವ ಅನುಮಾನವೂ ಇದೆ. ಆಧುನಿಕ ತಂತ್ರಜ್ಞಾನದಿಂದ ಉತ್ಪಾದನೆ ಹೆಚ್ಚಿಸಬಹುದು. ಆದರೆ ಉತ್ಪಾದಿಸಿದ ವಸ್ತುಗಳಿಗೆ ಬೇಡಿಕೆ ಇರಬೇಕು.

ಭಾರತದಂತಹ ದೇಶಗಳಲ್ಲಿನ ನಿಜವಾದ ಸಮಸ್ಯೆಯೆಂದರೆ ಬೇಡಿಕೆಯ ಕೊರತೆ. ಮಾರಾಟಕ್ಕೆ ಎಲ್ಲಾ ದೇಶಗಳು ರಫ್ತನ್ನು ನೆಚ್ಚಿಕೊಳ್ಳಲಾಗದು. ಕ್ರಮೇಣ ಆ ದೇಶಗಳು ತಮ್ಮಲ್ಲಿನ ಉದ್ದಿಮೆಗಳನ್ನು ರಕ್ಷಿಸಿಕೊಳ್ಳಲು ಆಮದನ್ನು ನಿಯಂತ್ರಿಸಬಹುದು. ಜೊತೆಗೆ ಸರ್ಕಾರಗಳು ಬೆಳವಣಿಗೆಯನ್ನು ತೀವ್ರಗೊಳಿಸುವ ಭರದಲ್ಲಿ ಬಡವರಿಗೆ ತೊಂದರೆಯಾಗುವ ನೀತಿಗಳನ್ನು ರೂಪಿಸುವ ಸಾಧ್ಯತೆಯೂ ಇದೆ. ಬಹುತೇಕ ಸರ್ಕಾರಗಳು ಉತ್ಪಾದನೆ ಉತ್ತೇಜಿಸಲು ಕಾರ್ಪೊರೇಟ್ ಸಂಸ್ಥೆಗಳ ಮೇಲೆ ತೆರಿಗೆ ಕಡಿತ ಮಾಡುತ್ತಿವೆ. ಅದರ ಹೊರೆ ಜನಸಾಮಾನ್ಯರ ಮೇಲೆ ಬೀಳುತ್ತದೆ. ಜನಕಲ್ಯಾಣ ಕಾರ್ಯಕ್ರಮಗಳಿಗೆ ಹೊಡೆತ ಬೀಳುತ್ತದೆ.

ಭಾರತದ ಆರ್ಥಿಕತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಇರುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಸರ್ಕಾರ ವಿಫಲವಾಗುತ್ತಿದೆ. ಶಿಕ್ಷಣಕ್ಕೆ ಹಣ ಖರ್ಚು ಮಾಡುತ್ತಿದ್ದೇವೆ. ಆದರೆ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಮಕ್ಕಳಿಗೆ ಓದುವ ಸಾಮರ್ಥ್ಯ ಬಂದಿಲ್ಲ. ಆಹಾರದ ಸುಭದ್ರತೆಗೆ ಯೋಜನೆಗಳಿವೆ. ಆದರೆ ಅಪೌಷ್ಟಿಕತೆಯ ಸಮಸ್ಯೆ ಪರಿಹಾರವಾಗಿಲ್ಲ. ಹಲವಾರು ಆರ್ಥಿಕ ಯೋಜನೆಗಳು ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿಲ್ಲ. ಕೆಲವು ರಾಜ್ಯಗಳಷ್ಟೇ ಅಭಿವೃದ್ಧಿ ಸಾಧಿಸುತ್ತಿವೆ. ಅಲ್ಲೂ ಹಿನ್ನಡೆ ಪ್ರಾರಂಭವಾದರೆ ಒಟ್ಟಾರೆಯಾಗಿ ಭಾರತದ ಆರ್ಥಿಕತೆ ಸೊರಗುತ್ತದೆ.

ಸುಸ್ಥಿರ ಅಭಿವೃದ್ಧಿಗೆ ಖಾತರಿಯಾದ ಕ್ರಮ ನಮಗೆ ತಿಳಿದಿಲ್ಲ. ಜಿಡಿಪಿ ಹೆಚ್ಚಳವಷ್ಟೇ ಆರ್ಥಿಕ ಅಭಿವೃದ್ಧಿಯ ಉದ್ದೇಶ ಆಗಬಾರದು. ಗುಣಮಟ್ಟದ ಶಿಕ್ಷಣ, ಆರೋಗ್ಯ, ಸಮಾನತೆ ಇವೆಲ್ಲಾ ಆರ್ಥಿಕ ಅಭಿವೃದ್ಧಿ ಯೋಜನೆಯ ಭಾಗವಾಗಬೇಕು. ವಿಶ್ವಬ್ಯಾಂಕಿನ ವರದಿಯನ್ನು ಎಚ್ಚರಿಕೆಯನ್ನಾಗಿ ಪರಿಗಣಿಸಿ, ಬೇರೆ ದೇಶಗಳ ಅನುಭವದಿಂದ ಕಲಿಯುತ್ತಾ, ನಮ್ಮದೇ ಆದ ದಾರಿ ಕಂಡುಕೊಳ್ಳುವ ದಿಸೆಯಲ್ಲಿ ಪ್ರಯತ್ನ ನಡೆಯಬೇಕಾಗಿದೆ.

ಚುರುಮುರಿ



ಗಂಡಸರ ಬಯ್ಯೋಗ್ರಫಿ!

• ತುರುವೇಕೆರೆ ಪ್ರಸಾದ್

ಪದ್ದಮ್ಮನೋರು ಪರ್ಮೇಶಿ ಹಾಸಿಗೆಯಡಿ ಒಂದಿಷ್ಟು ಅರೆಬರೆದ ಹಾಳೆಗಳನ್ನು ನೋಡಿದರು. ಹಾಗೇ ಕುತೂಹಲಕ್ಕೆ ಕೈಗೆತ್ತಿಕೊಂಡು ಓದಲಾರಂಭಿಸಿದರು:

'ಮೊದಲನೆಯದಾಗಿ, ಇವಳು ತುಂಬಾ ಬದ್ಲಾಗಿದಾಳೆ. ಮೊದ್ಲೆಲ್ಲ ನನ್ನ ಮೇಲೆ ಲಟ್ಟಣಿಗೆ, ಸೌಟು ಎಸೀತಿದ್ಲು. ಈಗ ಕಾವಲಿನೇ ನನ್ನ ಮೇಲೆ ಎಸೆಯುವಷ್ಟು ದ್ವೇಷ ತುಂಬ್ಕೊಂಡಿದಾಳೆ'.

'ಎರಡನೆಯದಾಗಿ, ನಾನು ಎದುರು ಮನೆ ಆಂಟಿನ ನೋಡ್ತೀನಿ ಅನ್ನೋ ಒಂದೇ ಒಂದು ಅನುಮಾನ ಇವಳಿಗೆ ಮೊದ್ಲು ಇತ್ತು. ಈಗ ಹಿಂದಿನ, ಮುಂದಿನ ಮನೆ ಆಂಟಿಗಳು, ಆಫೀಸಲ್ಲಿರೋ ಹೆಂಗಸರ ಜೊತೇಲೆಲ್ಲಾ ನಾನು ಓಡಾಡ್ತೀನಿ ಅಂತ ಸಂಶಯಪಡ್ತಿದಾಳೆ'.

'ಮೂರನೆಯದಾಗಿ, ಮೊದ್ಲು ಮೊದ್ಲು ಇವಳು ರಿಮೋಟ್‌ನ ಎತ್ತಿಟ್ಕೊಂಡು ಆಟ ಆಡುಸ್ತಿದ್ಲು. ಈಗ ಟೀವಿನೇ ಎತ್ಕಂಡು ಹೋಗಿ ರೂಮಲ್ಲಿಟ್ಕೊಂಡು ಬೀಗ ಜಡ್ಕೊಂಡಿದಾಳೆ'.

'ನಾಲ್ಕನೆಯದಾಗಿ, ಮೊದ್ಲೆಲ್ಲಾ ಜೇಬಿಂದ ಚಿಲ್ರೆ ದುಡ್ಡು ಹಾರುಸ್ತಿದ್ಲು. ಈಗ ಜಾಯಿಂಟ್ ಅಕೌಂಟ್ ಮಾಡ್ಸಿ ಎಲ್ಲ ದುಡ್ಡನ್ನೂ ಸ್ವಾಹಾ ಮಾಡಿದಾಳೆ'.

'ಎಲ್ಲಕ್ಕಿಂತ ಹೆಚ್ಚಾಗಿ, ಸುಮಾರು ವರ್ಷಗಳಿಂದ ನನಗೆ ಡೈವೋರ್ಸ್ ಕೊಡ್ತೀನಿ ಅಂತ ಹೆದರಿಸ್ಕೊಂಡು ಬಂದಿದಾಳೆ. ಡೈವೋರ್ಸೂ ಕೊಡದೆ, ನೆಟ್ಟಗೂ ಇಲ್ದೆ, ನನಗೆ ಬೇರೆ ಮದ್ವೆ ಮಾಡ್ಕೊಳ್ಳೋ ಚಾನ್ಸೂ ಕೊಡದೆ ಗೋಳಾಡ್ಸಿದಾಳೆ. ಇದಲ್ದೆ ಇನ್ನೂ 36 ಪಾಯಿಂಟ್ಸ್ ಇವಳ ಕಣ್ಣಿಗೆ ಬೀಳದ ಹಾಗೆ ಬರೆದು ಆ ನಂತರ ನಾನು...'

'ಅಯ್ಯೋ ಸತ್ ಹೋಗ್ತಾರಾ?' ಪದ್ದಮ್ಮ ಶಾಕ್‌ನಲ್ಲಿ ನಿಂತರು. ಪರ್ಮೇಶಿ ಒಳಗೆ ಬಂದು ಹೆಂಡ್ತಿ ಕೈಲಿನ ಹಾಳೆ ನೋಡಿ ದಂಗಾದ.

'ನನ್ ಕೇಳ್ದೆ ಸಾಯೋಕೆ ಎಷ್ರೀ ಧೈರ್ಯ ನಿಮ್ಗೆ?' ಗುಡುಗಿದರು ಪದ್ದಮ್ಮ.

'ಅಯ್ಯೋ ಇಲ್ಲ ಕಣೆ. ಅದು ಯುವಕನೊಬ್ಬನ ಬಯ್ಯೋಗ್ರಫಿ! ಎಲ್ಲ ಗಂಡಸರ ಬಯ್ಯೋಗ್ರಫಿನೂ ಹೀಗೇ ಇರುತ್ತೆ' ಎಂದ ಪರ್ಮೇಶಿ.

'ಸುಮ್ನೆ ಬರುದ್ರೆ ಬಯಾಗ್ರಫಿ, ಕೆಳಗೆ ಸೈನ್ ಹಾಕುದ್ರೆ ಡೆತ್‌ನೋಟ್ ಆಗುತ್ತೆ. ನನ್ ಕೇಳ್ದೆ ಸೈನ್ ಮಾಡುದ್ರೆ ಏಳು ಜನ್ಮದಲ್ಲೂ ನಿಮ್ ಹೆಂಡ್ತಿಯಾಗಿ ಕಾಡ್ತೀನಿ, ಹುಷಾರ್' ಅಂದ್ರು ಪದ್ದಮ್ಮ, ಪರ್ಮೇಶಿ ಬೆಚ್ಚಿ ಕನಸಿನಿಂದ ಈಚೆ ಬಂದ.

ಸಂಗತ

ಮೃಗೀಯ ಭಾಷೆಗೆ ಆತ್ಮಬಲದ ಪ್ರತ್ಯಸ್ತ್ರ

ಪ್ರಶ್ನೆ ಇರುವುದು ಸಚಿವೆಗೆ ಎಷ್ಟು ಬಾರಿ ಅಗೌರವದ ಪದ ಬಳಸಿದರು ಎನ್ನುವುದರಲ್ಲಿ ಅಲ್ಲ...

• ಎಂ.ಎಸ್. ಆಶಾದೇವಿ

ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನದ ಮೊದಲ ದಿನ, ಸುವರ್ಣ ಸೌಧದಲ್ಲಿ ಅನುಭವ ಮಂಟಪದ ತೈಲಚಿತ್ರದ ಅನಾವರಣ ಮಾಡಲಾಯಿತು. ಈ ಮೂಲಕ, ಯಾವುದನ್ನು ಪ್ರಜಾಪ್ರಭುತ್ವದ ಉದ್ಘಾಟನೆ ಎಂದು ನಾವು ಹೆಮ್ಮೆಯಿಂದ ಹೇಳಿ ಹೇಳಿ ಬೀಗುತ್ತೇವೆಯೋ ಅದರ ಮಹತ್ವ ಮತ್ತು ಪ್ರಸ್ತುತತೆಯನ್ನು ನಮಗೆ ನಾವೇ ಮನದಟ್ಟು ಮಾಡಿಕೊಳ್ಳುವ ಸಾಂಕೇತಿಕ ಕ್ರಿಯೆಯಾಗಿ ಅದು ಕಂಡಿತ್ತು. ಆದರೆ ಅದೇ ಅಧಿವೇಶನದಲ್ಲಿ ಆ ಆಶಯಕ್ಕೆ ತದ್ವಿರುದ್ಧವಾದ ದುರಂತವೊಂದು ಘಟಿಸಿದೆ. ಆ ಆಶಯಗಳ ದಾರಿಯಲ್ಲಿ ನಡೆಯುವುದು ಅದೆಷ್ಟು ಕಷ್ಟದ್ದು ಎನ್ನುವುದನ್ನೂ ಅದು ನಮಗೆ ತೋರಿಸಿಕೊಟ್ಟಿದೆ.

ಪ್ರಶ್ನೆ ಇರುವುದು ಸಚಿವೆಯ ಕುರಿತಂತೆ ಅವರು ಎಷ್ಟು ಬಾರಿ ಅಗೌರವದ ಹಾಗೂ ಅವಾಚ್ಯ ಪದ ಬಳಸಿದರು ಎನ್ನುವುದರಲ್ಲಿ ಅಲ್ಲ. ಆ ಪದವು ಗಂಡಿನ ಆಳದಲ್ಲಿ ಇರುವ ವಿಕಾರವನ್ನು ಸಾರ್ವಜನಿಕವಾಗಿ ನಿರ್ಲಜ್ಜೆಯಿಂದ ಪ್ರಕಟಪಡಿಸುತ್ತದೆಯಲ್ಲ ಆ ಭಂಡತನದಲ್ಲಿ.

ಬಹುಶಃ ಕಳೆದ ಬಾರಿಯ ಅಧಿವೇಶನದಲ್ಲಿ ಎನ್ನಿಸುತ್ತದೆ, ಶಾಸಕರೊಬ್ಬರು ಹೇಳುತ್ತಾರೆ, 'ನಮ್ಮಲ್ಲಿ ಕೆಲವರು ನಿತ್ಯ ಸುಮಂಗಲಿಯರಿದ್ದಾರೆ. ಏನು ಮಾಡುವುದು...' ಎಂದು ವ್ಯಂಗ್ಯ, ಗೇಲಿ ಬೆರೆತ ಧ್ವನಿಯಲ್ಲಿ ಅವರು ತಮ್ಮ ಮಾತನ್ನು ಮುಂದುವರಿಸುತ್ತಾರೆ.

ಇಂಥ ಮಾತುಗಳನ್ನಾಡುವಾಗ ಈ ಮಹಾಶಯರಿಗೆ ಆ ನಿತ್ಯ ಸುಮಂಗಲಿಯರು ಯಾರ ಸೃಷ್ಟಿ ಎನ್ನುವ ವಿಷಯ ಗೊತ್ತಿಲ್ಲದೇ ಇರಲು ಸಾಧ್ಯವಿಲ್ಲ. ಅವರನ್ನು ನಿತ್ಯ ಸುಮಂಗಲಿಯರನ್ನಾಗಿಸಿರುವ ಗಂಡಾಳಿಕೆಯ ಮೂಲ ಧೋರಣೆಯೇ ಇದರ ಮೂಲ. ಹೆಣ್ಣನ್ನು ವ್ಯಕ್ತಿಯಾಗಿ, ವ್ಯಕ್ತಿತ್ವವಾಗಿ ನೋಡಲು ಬೇಕಾದ ನಾಗರಿಕತೆಯಾಗಲಿ, ಸಂಸ್ಕೃತಿಯಾಗಲಿ ಇಲ್ಲದೇ ಇರುವವರೇ ಅವಳನ್ನು ನಿತ್ಯ ಸುಮಂಗಲಿಯನ್ನಾಗಿಸಿರುವುದು.

ಇಷ್ಟಕ್ಕೂ ಎಲ್ಲ ಹೆಣ್ಣುಮಕ್ಕಳೂ ಎಲ್ಲ ಕಾಲಕ್ಕೂ ನಿತ್ಯ ಸುಮಂಗಲಿಯರೇ. ಸುಮಂಗಲಿ ಎಂದರೆ ಮುತ್ತೈದೆ ಎನ್ನುವ ಕುಬ್ಜಾರ್ಥದಲ್ಲಿ ಅಲ್ಲ, ಮಂಗಳವಾದ ಎಲ್ಲವನ್ನೂ ಒಳಗೊಳ್ಳುವವಳು ಎನ್ನುವ ಅರ್ಥದಲ್ಲಿ. ಕಿಚ್ಚಿಲ್ಲದ ಬೇಗೆಯಲ್ಲಿ, ಏರಿಲ್ಲದ ಗಾಯದಲ್ಲಿ ಕಾಡಿಸುವ ಬದುಕಿನ, ಗಂಡಾಳಿಕೆಯ ನೂರು ಕಾಡಾಟಗಳನ್ನು ತನ್ನ ಅಂತಃಕರಣದಿಂದಲೇ ಗೆಲ್ಲಬಲ್ಲ ಮಂಗಳಕರವಾದ ಗುಣಗಳೆಲ್ಲವೂ ಹೆಣ್ಣಿನಲ್ಲಿ ಇವೆ. ಈ ಅರ್ಥದಲ್ಲಿ ಅವಳು ನಿತ್ಯವೂ ಸುಮಂಗಲಿಯೇ.

ಈ ಇಂಥ ಕಲ್ಮಶಕ್ಕೆ, ಕೊನೆಯೇ ಇಲ್ಲದ ಆತ್ಮವಂಚನೆಗೆ ಸರಿಯಾದ ಉತ್ತರ ಕೊಟ್ಟವಳು ಸೂಳೆ ಸಂಕವ್ವೆ.

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದಡೆ ಬತ್ತಲೆ ನಿಲ್ಲಿಸಿ ಕೊಲುವರಯ್ಯಾ
ವ್ರತಹೀನನರಿದು ಬೆರೆದಡೆ
ಕಾದ ಕತ್ತಿಯಲಿ ಕೈ ಕಿವಿ ಮೂಗ ಕೊಯ್ವರಯ್ಯಾ
ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ

ಗಂಡಿನ ಭಂಡತನಕ್ಕೆ ಘನವಾದ ನೈತಿಕ ಉತ್ತರ ಇಲ್ಲಿದೆ. ಯಾವ ವೇಶ್ಯೆಯರನ್ನು ಹೀನಾಯವಾದ ಅಗೌರವದಲ್ಲಿ ಕಾಣುತ್ತದೆಯೋ ಆ ಲೋಕಕ್ಕೆ ಸಂಕವ್ವೆ ತನಗೆ ಸಿಕ್ಕಿದ, ತನ್ನ ಮೇಲೆ ಬಲವಂತವಾಗಿ ಹೊರಿಸಲಾದ ಅಥವಾ ತನ್ನ ಆಯ್ಕೆಯದ್ದೇ ಆದರೂ ಆಗಿರಬಹುದಾದ ಇದನ್ನು ತಾನೊಂದು ವೃತ್ತಿಯಾಗಿ, ವೃತ್ತಿ ಘನತೆಯನ್ನೂ ವ್ಯಕ್ತಿ ಗೌರವವನ್ನೂ ಉಳಿಸಿಕೊಂಡ ನೈತಿಕ ಎಚ್ಚರದಲ್ಲಿ ಕಾಪಾಡಿಕೊಂಡದ್ದರ ಬಗೆಗೆ ಇಲ್ಲಿ ಹೇಳುತ್ತಿದ್ದಾಳೆ. ಹಣದಾಸೆಗೋ ಮತ್ತೊಂದಕ್ಕೋ ತನ್ನನ್ನು ಮಾರಿಕೊಳ್ಳದೆ ಒಪ್ಪಿಕೊಂಡದ್ದಕ್ಕೆ ಬದ್ಧವಾಗಿರುವುದನ್ನು ಹೇಳುತ್ತಾ, ಅದು ತಾನು ದೇವರನ್ನು ಮುಟ್ಟಬಲ್ಲಷ್ಟು ನೈತಿಕ ಎತ್ತರದಲ್ಲಿ ಇರುವುದನ್ನು ಒತ್ತಿ ಹೇಳುತ್ತಾಳೆ. ಆತ್ಮಸಾಕ್ಷಿಯ ಎಚ್ಚರದಲ್ಲಿ ತಾನು ಉಳಿಸಿಕೊಂಡ ಎಚ್ಚರವು ನಿರ್ಲಜ್ಜರಲ್ಲಿ ಇರುವುದು ಸಾಧ್ಯವಿಲ್ಲ ಎನ್ನುವುದನ್ನೂ ಇಲ್ಲಿ ಸೂಚಿಸುತ್ತಿದ್ದಾಳೆ. ಆ ನಿರ್ಲಜ್ಜರ ನಿರ್ಲಜ್ಜೆ ಬಯಲು ಮಾಡುವುದೇ ಪ್ರತ್ಯಸ್ತ್ರ.



ಇಲ್ಲಿ ಆತಂಕ ಹುಟ್ಟಿಸುತ್ತಿರುವ ಅಂಶವೆಂದರೆ ಹೀನ ನಡವಳಿಕೆಯ ಸಮರ್ಥನೆ. ಇದು ಎಷ್ಟು ಹೇಯವಾದುದು ಎಂದು ಗೊತ್ತಿದ್ದೂ ಸಾರ್ವಜನಿಕವಾಗಿ ನಾಯಕರು ಮತ್ತು ಅವರ ಬೆಂಬಲಿಗರು ಕಣ್ಣಿದ್ದೂ ಕುರುಡರಂತೆ, ಸಚಿವೆಯೊಬ್ಬರಿಗಾದದ್ದು ತಮ್ಮ ಮನೆಯ ಹೆಣ್ಣುಮಕ್ಕಳಿಗೂ ಆಗಬಹುದು ಎನ್ನುವ ನೆದರಿಲ್ಲದವರಂತೆ ವರ್ತಿಸುತ್ತಿರುವುದು. ಸ್ವಾರ್ಥ, ದುರಾಸೆ ಮತ್ತು ಅನಾಗರಿಕತೆಗೆ ಒಂದು ಹದ್ದಿಲ್ಲವೆ? ನಿತ್ಯ ಸುಮಂಗಲಿ ಎಂದದ್ದಕ್ಕೆ ಅಧಿವೇಶನದಲ್ಲಿ ಶಾಸಕಿಯೊಬ್ಬರು ವಿರೋಧಿಸಿದರೆ ಆತ ಹೇಳುತ್ತಾರೆ 'ಇದೇನು ಅನ್‌ಪಾರ್ಲಿಮೆಂಟರಿ ಪದ ಅಲ್ಲ' ಎಂದು. ಅನ್‌ಪಾರ್ಲಿಮೆಂಟರಿಗಿಂತ ಹೀನವಾದದ್ದು ಇದು ಎಂದು ಅವರ ಜೊತೆಗಾರರೇ ಹೇಳಬೇಕಲ್ಲವೆ? ಪಕ್ಷಾತೀತವಾಗಿ ಎಲ್ಲರೂ ಹೆಣ್ಣಿನ ಬಗೆಗಿನ ಇಂತಹ ಕೊಳಕು ಮಾತು ಮತ್ತು ನಡವಳಿಕೆಯನ್ನು ವಿರೋಧಿಸಬೇಕಾದ್ದು ನಿಜವಾಗಿ ಪಾರ್ಲಿಮೆಂಟರಿ ನಡವಳಿಕೆ. ಜನಪ್ರತಿನಿಧಿಗಳಿಂದ ಇಂತಹ ಕನಿಷ್ಠ ನಡವಳಿಕೆಯನ್ನಾದರೂ ನಿರೀಕ್ಷಿಸುವುದು ನಮ್ಮೆಲ್ಲರ ಮೂಲಭೂತ ಹಕ್ಕು.

ಹೆಣ್ಣನ್ನು ದೈಹಿಕವಾಗಿ, ಮಾನಸಿಕವಾಗಿ ಕೊಲ್ಲುವ ಗಂಡಾಳಿಕೆಯ ನೂರು ಹತ್ಯಾರಗಳಲ್ಲಿ ಅತ್ಯಂತ ಪ್ರಬಲವಾದುದು ಮತ್ತು ಅಪಾಯಕಾರಿಯಾದುದೆಂದರೆ ಭಾಷೆಯೇ. ಅವಳನ್ನು ಕಂಗಾಲಾಗಿಸಿದರೆ ಅರ್ಧ ಗೆಲುವು ತಮ್ಮದು ಎನ್ನುವುದನ್ನು ಕಾಲದಿಂದಲೂ ಅರಿತಿರುವ ಪುರುಷ ಮೃಗಗಳು ಮೃಗೀಯವಾದ ಭಾಷೆಯನ್ನೇ ಇದಕ್ಕೆ ಬಳಸಿ ಬಳಸಿ ಗೆಲ್ಲುತ್ತಿವೆ. ಇದಕ್ಕೆ ಎದುರಾಗಿ ನಾವು ಕಟ್ಟಬೇಕಾಗಿರುವುದು ಆತ್ಮಬಲದ ಭಾಷೆಯನ್ನು, ಅವರ ಹುನ್ನಾರಗಳಿಗೆ ಬಲಿಯಾಗದ ಸ್ವಗೌರವದ ಭಾಷೆಯನ್ನು. ಕಣ್ಣು ಕಾಣದ ಗಾವಿಲರ ಕಣ್ಣುತೆರೆಯಿಸುವುದು ಸಾಧ್ಯವಾಗದಿದ್ದರೂ ಗಾವಿಲರಿಗೆ ಬಲಿಯಾಗದಿರುವ ಎಚ್ಚರ ನಮ್ಮಲ್ಲಿ ಸದಾ ಇರಬೇಕು.

ಹೆಣ್ಣಿನ ಅಂತಃಕರಣವನ್ನು ಮನದಣಿಯೆ ಉಂಡೂ ಉಳಿದೇ ಇರುವ ಈ ರಾಕ್ಷಸತ್ವ ಮಾತ್ರ ಗಂಡಿನ ಸ್ವಯಾರ್ಜಿತ.

ವಾಚಕರ ವಾಣಿ

ರಾಜ್ಯದ ಜನರಿಗೆ ಭ್ರಮನಿರಸನ

ಬೆಳಗಾವಿಯಲ್ಲಿ ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಸುವರ್ಣಸೌಧ ನಿರ್ಮಿಸಿರುವುದೇ ಉತ್ತರ ಮತ್ತು ದಕ್ಷಿಣ ಕರ್ನಾಟಕ ಭಾಗಗಳ ನಡುವೆ ಅಭಿವೃದ್ಧಿಯಲ್ಲಿ ಆಗಿರುವ ಅಸಮಾನತೆಯ ನಿವಾರಣೆಗೆ. ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳು, ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡ ಹತ್ತಾರು ವಿಷಯಗಳು ಚರ್ಚೆಗೆ ಒಳಪಟ್ಟು, ಉತ್ತರ ಕರ್ನಾಟಕದ ಅಭಿವೃದ್ಧಿಗೆ ನೆರವು ದೊರೆಯುತ್ತದೆ ಎಂಬ ಸಾರ್ವಜನಿಕರ ಆಶಯ ಈ ಬಾರಿಯೂ ಈಡೇರಲೇ ಇಲ್ಲ. ಈ ಮೊದಲು ಅಧಿವೇಶನ ನಡೆಯುವ ಸಂದರ್ಭದಲ್ಲಿ, ಜನನಾಯಕರೆಂದು ಕರೆಸಿಕೊಂಡವರು ಪೂರ್ವತಯಾರಿ ಮಾಡಿಕೊಂಡು ಬರುತ್ತಿದ್ದರು. ಅಂಕಿ ಅಂಶಗಳನ್ನು ಮುಂದಿಟ್ಟು ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸುತ್ತಿದ್ದರು. ಅಂತಹ ಮುತ್ಸದ್ದಿ ಜನಪ್ರತಿನಿಧಿಗಳ ಕೊರತೆ ಎದ್ದು ಕಾಣುತ್ತಿತ್ತು. ಅಧಿವೇಶನದಲ್ಲಿ ಜನಪ್ರತಿನಿಧಿಗಳ ನಿರ್ಲಕ್ಷ್ಯ, ಪ್ರಭುತ್ವದ ಅಸಡ್ಡೆ ಹಾಗೂ ರಾಜಕಾರಣಿಗಳ ವೈಯಕ್ತಿಕ ಕೆಸರೆರಚಾಟ ಕಂಡು ಕರ್ನಾಟಕದ ಜನ ಭ್ರಮನಿರಸನಗೊಂಡಿದ್ದಾರೆ.

ಉದಯ ಮ. ಯಂಡಿಗೇರಿ, ಧಾರವಾಡ

ತೀರ್ಪುಗಳ ಅನುವಾದ: ಇದೆ ಒಳಸುಳಿ

ಕನ್ನಡದಲ್ಲಿ ತೀರ್ಪುಗಳನ್ನು ಬರೆಯುವುದನ್ನು ಸ್ವಾಗತಿಸಿ ಸಿ. ಸೋಮಶೇಖರ್ ಅವರು ಬರೆದಿರುವ ಪತ್ರಕ್ಕೆ (ವಾ.ವಾ., ಡಿ. 14) ಪ್ರತಿಕ್ರಿಯೆ. ಕರ್ನಾಟಕ ಪ್ರತ್ಯೇಕ ದೇಶವಾಗಿ ತನ್ನದೇ ಕಾನೂನು ಹೊಂದಿದ್ದರೆ ಕನ್ನಡದಲ್ಲೇ ತೀರ್ಪು ಬರೆಯುವುದು ಸೂಕ್ತ ಎನಿಸುತ್ತಿತ್ತು. ಆದರೆ ಸಂವಿಧಾನ ಆದಿಯಾಗಿ ಕೇಂದ್ರ ಸರ್ಕಾರದ ಎಲ್ಲ ಕಾಯ್ದೆಗಳು ಇಂಗ್ಲಿಷ್‌ನಲ್ಲಿ ಇರುವಾಗ ಮತ್ತು ಒಂದೊಂದು ಜಟಿಲ ಕಾಯ್ದೆಯ ಒಂದೊಂದು ಪದದ ಅರ್ಥಜಿಜ್ಞಾಸೆ ನ್ಯಾಯಾಲಯಗಳಲ್ಲಿ ಬಹಳ ಆಳವಾಗಿ ನಡೆದು, ನ್ಯಾಯಾಧೀಶರು ಆ ಅರ್ಥಸೂಕ್ಷ್ಮಗಳನ್ನು ಆಧರಿಸಿ ತೀರ್ಪು ಬರೆಯುತ್ತಿರುವಾಗ, ಅಂತಹ ತೀರ್ಪುಗಳ ನಿರ್ದುಷ್ಟ ಅನುವಾದ ಎಲ್ಲಿಯಾದರೂ ಸಾಧ್ಯವೇ?

ಹೈಕೋರ್ಟು ಕನ್ನಡದಲ್ಲಿ ತೀರ್ಪು ನೀಡಿದರೆ ಅದರ ಇಂಗ್ಲಿಷ್ ಅನುವಾದವನ್ನು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿಯಲ್ಲಿ ಸಲ್ಲಿಸಬೇಕಾಗುತ್ತದೆ. ಇಂತಹ ಅನುವಾದಗಳು ಎಬ್ಬಿಸುವ ವಿವಾದಗಳೇ ನ್ಯಾಯಾಲಯಗಳಲ್ಲಿ ತುಂಬಿಹೋಗಿ ನ್ಯಾಯವ್ಯವಸ್ಥೆ ಕುಸಿದುಬೀಳುವ ಅಪಾಯ ಇದೆ. ದೇಶಕ್ಕೆಲ್ಲ ಒಂದೇ ಕಾನೂನು ಇರುವ ಬದಲು ಒಂದೊಂದು ಭಾಷೆಯ ಅನುವಾದದಲ್ಲೂ ಒಂದೊಂದು ಕಾನೂನು ಎಂಬ ಪರಿಸ್ಥಿತಿಗೆ ಇದು ನಮ್ಮನ್ನು ದೂಡಬಹುದು. ಕನ್ನಡ ಕಾಗುಣಿತವನ್ನೇ ಅರಿಯದ ಪದವೀಧರರು ಎಲ್ಲೆಡೆ ಇರುವಾಗ, ಗೋಜಲಿಲ್ಲದೆ ಕನ್ನಡದಲ್ಲಿ ತೀರ್ಪು ಬರೆಯುವ ನ್ಯಾಯಾಧೀಶರನ್ನಾದರೂ ಎಲ್ಲಿಂದ ತರಬೇಕು? ಅಂತಹ ತೀರ್ಪುಗಳ ಅನುವಾದ ಇನ್ನೊಂದು ಅಧ್ವಾನ ಎಂಬಂತೆ ಆಗಬಾರದು. ಆದ್ದರಿಂದ ಇದು ಬರೀ ಭಾವನಾತ್ಮಕ ವಿಷಯವಲ್ಲ. ಒಳಸುಳಿಗಳಿವೆ. ಮುಂದಡಿ ಇಡುವ ಮೊದಲು ಎಚ್ಚರ. ಸಾಂಕೇತಿಕವಾಗಿ ಇರಬೇಕಾದದ್ದು ಸಾರ್ವತ್ರಿಕ ಆಗಬಾರದು.

ಕೆ.ಟಿ. ಕೃಷ್ಣಕಾಂತ್, ಚಿಕ್ಕಬಳ್ಳಾಪುರ

ಇವರೆಲ್ಲ ನಮ್ಮವರು!

ಅವನು ನೂಕಿದ
ಇವನು ತಳ್ಳಿದ
ಒಬ್ಬ ಕೆಣಕಿದ
ಮತ್ತೊಬ್ಬ ಜಾಡಿಸಿದ
ಬಾಯಿಗೆ ಬಂದಂತೆ ಬೈದ
ಕದ ಒದ್ದ... ಶಿವ ಶಿವಾ!
ಪೈಪೋಟಿಗಿಳಿದಿಹರು
ರಾಜ್ಯ ಮತ್ತು ಕೇಂದ್ರದಲ್ಲಿ
ಇವರು, ನಾವೇ ಆರಿಸಿ
ಕಳುಹಿಸಿರುವವರು!

ಎಚ್.ಟಿ.ತಿಪ್ಪೇಸ್ವಾಮಿ, ಮೈಸೂರು

ಕುಸ್ತಿ ಮೈದಾನವಲ್ಲ, ಅದು ಸದನ

ಸದನವು ಇಡೀ ದೇಶದ ಜನರನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳು ವಿವಿಧ ಸಮಸ್ಯೆ ಹಾಗೂ ಅಭಿವೃದ್ಧಿಯ ಕುರಿತು ಚರ್ಚೆ ಮಾಡಲು ಇರುವ ವೇದಿಕೆ. ಅಲ್ಲಿ ಮಾತನಾಡುವ ಅವಕಾಶ ಸಿಕ್ಕಾಗ ಎಚ್ಚರಿಕೆಯಿಂದ, ಜವಾಬ್ದಾರಿಯುತವಾಗಿ ಮಾತನಾಡಬೇಕಾಗುತ್ತದೆ. ನಮ್ಮನ್ನು ಆರಿಸಿ ಕಳಿಸಿದ ಜನ ಮಾತ್ರವಲ್ಲದೆ ವಿದೇಶದವರೂ ನಮ್ಮನ್ನು ಗಮನಿಸುತ್ತಿರಬಹುದು. ಹಾದಿಬೀದಿಗಳಲ್ಲಿ ಜಗಳವಾಡಿದಂತೆ ಪರಸ್ಪರ ವೈಯಕ್ತಿಕ ನಿಂದನೆ, ಅವಾಚ್ಯ ಶಬ್ದಗಳು, ಅಸಾಂವಿಧಾನಿಕ ಪದಗಳನ್ನು ನುಡಿಯುವುದು ಸಲ್ಲದು. ಮಾತು ನಮ್ಮ ವ್ಯಕ್ತಿತ್ವದ ಪ್ರತಿಬಿಂಬ ಎನ್ನಲಾಗುತ್ತದೆ. ತಮ್ಮ ಪಕ್ಷದವರು ತಾವು ಹೇಳಿದ ಮಾತುಗಳಿಗೆಲ್ಲ ಮೇಜು ಕುಟ್ಟುತ್ತಾರೆ, ಅರಚುತ್ತಾರೆ ಎಂದಮಾತ್ರಕ್ಕೆ ಸದನವು ಕುಸ್ತಿ ಮೈದಾನ ಆಗುವುದು ತರವಲ್ಲ. ಇತಿಹಾಸದ ಪುಟಗಳಲ್ಲಿ ತಮ್ಮದೇ ಛಾಪನ್ನು ಮೂಡಿಸಿ ಅಜರಾಮರರಾಗಿರುವ ವ್ಯಕ್ತಿಗಳ ಬಗ್ಗೆ ತುಚ್ಛವಾಗಿ ಮಾತನಾಡುವುದು, ನಿಂದಿಸಿ ಮಾತನಾಡುವುದು ಮಾತನಾಡುವವರ ಯೋಗ್ಯತೆಯನ್ನು ಹೆಚ್ಚಿಸುವುದಿಲ್ಲ. ಅದು ಕೀಳು ಅಭಿರುಚಿಯನ್ನು ತೋರಿಸುತ್ತದೆ. ಸಾರ್ವಜನಿಕರ ಹತ್ತಾರು ಕೋಟಿ ತೆರಿಗೆ ಹಣದಿಂದ ನಡೆಯುವ ಸದನವು ಅಭಿವೃದ್ಧಿಯ ಚಿಂತನೆಗಳನ್ನು ಒಳಗೊಳ್ಳಲಿ.

ಮಲ್ಲತಹಳ್ಳಿ ಎಚ್. ತುಕಾರಾಮ್, ಬೆಂಗಳೂರು

ಉತ್ತರ ಕರ್ನಾಟಕ ಪರ ಕೇಳಿಬರಲಿ ಗಟ್ಟಿ ಧ್ವನಿ

ತುಮಕೂರು ಮತ್ತು ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಮೈದಾನಕ್ಕೆ ಚಾಲನೆ, ಬೆಂಗಳೂರಿನಲ್ಲಿ ಇನ್ನೊಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು ಸುತ್ತಮುತ್ತ ಔದ್ಯೋಗೀಕರಣದ ಭಾಗವಾಗಿ ಕ್ವಿನ್ ಸಿಟಿ ಮತ್ತು ಸ್ವಿಫ್ಟ್ ಸಿಟಿ ಸ್ಥಾಪನೆ, ಉತ್ತರ ಕರ್ನಾಟಕಕ್ಕೆ ಸೋಡಾ ಚೀಟಿ ಎಂದು ಉತ್ತರ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಕೇಳಿಬಂದ ಟೀಕೆಯಲ್ಲಿ ಅರ್ಥವಿಲ್ಲದೇ ಇಲ್ಲ. ವಿಧಾನಸಭೆಯಲ್ಲಿ ಉತ್ತರ ಕರ್ನಾಟಕ ಭಾಗದ 91 ಸದಸ್ಯರಿದ್ದು, ತಮ್ಮ ಭಾಗದ ನಿರ್ಲಕ್ಷ್ಯದ ವಿರುದ್ಧ ಅವರು ಬಲವಾದ ಧ್ವನಿ ಎತ್ತದಿರುವುದು ತೀರಾ ಆಶ್ಚರ್ಯಕರ. ಧ್ವನಿ ಎತ್ತಬೇಕಾದ ಸಮಯದಲ್ಲಿ ಎತ್ತದೇ ಆಗೊಮ್ಮೆ ಈಗೊಮ್ಮೆ ಮೆಲುಧ್ವನಿಯಲ್ಲಿ ಗೊಣಗಿದರೆ ಏನು ಪ್ರಯೋಜನ?

ಹುಬ್ಬಳ್ಳಿ- ಧಾರವಾಡದಲ್ಲಿ ರೈಲ್ವೆ ನೈರುತ್ಯ ವಲಯ ಮತ್ತು ಹೈಕೋರ್ಟ್ ಪೀಠಕ್ಕಾಗಿ ನಡೆದ ಹೋರಾಟಗಳನ್ನು ಉತ್ತರ ಕರ್ನಾಟಕದ ಜನಪ್ರತಿನಿಧಿಗಳು ಮರೆತಂತೆ ಕಾಣುತ್ತದೆ. ಮುಂದೆ ಬೆಂಗಳೂರು ಎಚ್‌ಎಎಲ್ ವಿಮಾನ ನಿಲ್ದಾಣವೂ ಮರಳಿ ಕಾರ್ಯಾರಂಭ ಮಾಡುವ ಸಾಧ್ಯತೆ ಇದ್ದು, ಆಗ ಬೆಂಗಳೂರಿನಲ್ಲಿ ಮೂರು ವಿಮಾನ ನಿಲ್ದಾಣಗಳಾಗುತ್ತವೆ. ಅವುಗಳಲ್ಲಿ ಒಂದನ್ನಾದರೂ ಉತ್ತರ ಅಥವಾ ಮಧ್ಯ ಕರ್ನಾಟಕಕ್ಕೆ ನೀಡಬಾರದೇ?

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅತುಲ್ ಸುಭಾಷ್ ಆತ್ಮಹತ್ಯೆ: ಕಾನೂನು ಬದಲಾವಣೆ ಮಾಡಬೇಕಿದೆಯೇ?

ಪ್ರತ್ಯೇಕ ವ್ಯಾಖ್ಯಾನ ಅಗತ್ಯ



ವರದಕ್ಷಿಣೆ ಕಿರುಕುಳದಂಥ ಪ್ರಕರಣಗಳ ವಿಚಾರಣೆ ವೇಳೆ 'ನ್ಯಾಯಾಲಯಗಳು ಎಚ್ಚರಿಕೆಯನ್ನು ವಹಿಸಬೇಕು' ಎಂಬ ಸಂದೇಶವನ್ನು ಸುಪ್ರೀಂ ಕೋರ್ಟ್ ನೀಡಿದೆ. ಆ ಎಚ್ಚರಿಕೆಯು ಸಕಾಲಿಕ ಹಾಗೂ ವಿವೇಕಯುತ ಎಂದು ಪರಿಗಣಿಸಬಹುದಾದರೂ ನಿಜವಾಗಿಯೂ ವರದಕ್ಷಿಣೆ ಕಾರಣಕ್ಕಾಗಿ ಪ್ರಾಣ ಕಳೆದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಇರುವ ಮಹಿಳೆಯರಿಗೆ ಮುಂದಿನ ದಾರಿ ಏನು ಎಂಬ ಆತಂಕ, ನೋವು ಮತ್ತು ಅಧೈರ್ಯ ಕಾಡುತ್ತವೆ

• ಬಾನು ಮುಷ್ತಾಕ್

ಬೆಂಗಳೂರಿನ ಟೆಕಿ ಅತುಲ್ ಸುಭಾಷ್ ಆತ್ಮಹತ್ಯೆ ಮಾಡಿಕೊಂಡಿದ್ದು, ಅವರ ಸಾವು ದೇಶದ ಅಂತರಾತ್ಮವನ್ನೇ ಕಲಕಿದೆ. ಕೌಟುಂಬಿಕ ಕಲಹಕ್ಕೆ ಬಲಿಯಾದ ಅವರ ಸಾವಿಗೆ ನ್ಯಾಯ ಕೇಳುವ ಧ್ವನಿ ಸಾಮಾಜಿಕ ಜಾಲತಾಣಗಳಲ್ಲಿ ಅನುರಣಿಸುತ್ತಿದೆ.

ಭಾರತೀಯ ಕಾನೂನು ಇತಿಹಾಸದ ಹಿಂದಿನ ಪುಟಗಳನ್ನು ತಿರುವಿ ಹಾಕಿದರೆ ಮಹಿಳೆಯರ ಮೇಲಿನ ವರದಕ್ಷಿಣೆ ಕಿರುಕುಳ, ವೈವಾಹಿಕ ದೌರ್ಜನ್ಯದ ಕರಾಳ ಇತಿಹಾಸ ಕಂಡುಬರುತ್ತದೆ. ಇದೊಂದು ಸಾಮಾಜಿಕ ಅನಿಷ್ಟ ಎಂದು ಪರಿಗಣಿಸಿದ ಸರ್ಕಾರವು ಭಾರತೀಯ ದಂಡ ಸಂಹಿತೆಯ (ಐಪಿಸಿ) ಕಲಂಗಳನ್ನು 1983ರಲ್ಲಿ ತಿದ್ದುಪಡಿ ಮಾಡಿ, 498 (ಎ) ಎಂಬ ಹೊಸ ಉಪಬಂಧವನ್ನು ಸೇರಿಸುವ ಮೂಲಕ ವೈವಾಹಿಕ ಕ್ರೌರ್ಯವನ್ನು ಶಿಕ್ಷಾರ್ಹ ಅಪರಾಧ ಮಾಡಿತು.

ಆದರೆ, ಸದರಿ ಕಾನೂನಿನ ದುರುಪಯೋಗವಾಗುತ್ತಿದೆ ಎಂಬ ಕೂಗೆದ್ದಿತು. ದುರುದ್ದೇಶಪೂರ್ವಕವಾಗಿ ಪತ್ನಿಯು ಪತಿಯ ವಿರುದ್ಧ ಸುಳ್ಳು ಕೇಸ್ ಅನ್ನು ದಾಖಲಿಸಿದರೂ ಯಾವುದೇ ಸಾಕ್ಷ್ಯ ಅಥವಾ ತನಿಖೆ ಇಲ್ಲದೇ ತನ್ನ ಪತಿ ಮತ್ತು ಆತನ ಸಂಬಂಧಿಗಳನ್ನು ಬಂಧಿಸುವಂತೆ ಒತ್ತಾಯಿಸಲು ಮಹಿಳೆಗೆ ಕಾನೂನಿನಲ್ಲಿ ಅವಕಾಶವಿತ್ತು. ಹೀಗಾಗಿ ಸುಪ್ರೀಂ ಕೋರ್ಟ್ ಈ ವಿಷಯದಲ್ಲಿ ಹಲವು ತೀರ್ಪುಗಳ ಮೂಲಕ ಪತಿ ಮತ್ತು ಆತನ ಕುಟುಂಬಕ್ಕೆ ರಕ್ಷಣೆಯನ್ನು ನೀಡಿದೆ.

ಪ್ರೀತಿ ಗುಪ್ತಾ ವಿರುದ್ಧ ಜಾರ್ಖಂಡ್ ರಾಜ್ಯ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಕೆಳಕಂಡಂತೆ ಅಭಿಪ್ರಾಯ ಪಟ್ಟಿದೆ: 'ಕ್ರಿಮಿನಲ್ ಪ್ರಕರಣಗಳು ಸಮಾಜದ ಶಾಂತಿ ಸಾಮರಸ್ಯದ ಮೇಲೆ ಪರಿಣಾಮ ಬೀರುತ್ತಿವೆ. ಶಾಸಕಾಂಗವು ಸಾರ್ವಜನಿಕ ಅಭಿಪ್ರಾಯ ಮತ್ತು ಪ್ರಾಯೋಗಿಕ ವಾಸ್ತವಗಳನ್ನು ಪರಿಗಣನೆಗೆ ತೆಗೆದುಕೊಂಡು ಕಾನೂನು ಸಂಬಂಧಿತ ನಿಬಂಧನೆಗಳಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡುವುದು ಕಡ್ಡಾಯವಾಗಿದೆ'.

ಬಿ.ಎಸ್.ಜೋಶಿ ವಿರುದ್ಧ ಹರಿಯಾಣ ರಾಜ್ಯ ಪ್ರಕರಣದಲ್ಲಿ ಕೋರ್ಟ್, '498 (ಎ) ಉಪಬಂಧವು ಮಹಿಳೆಯರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ನ್ಯಾಯಾಲಯವು ತನ್ನ ಅಂತರ್ಗತ ಅಧಿಕಾರವನ್ನು ಚಲಾಯಿಸುವ ಮೂಲಕ ಕ್ರಿಮಿನಲ್ ಪ್ರಕ್ರಿಯೆಗಳು ಅಥವಾ ಎಫ್‌ಐಆರ್ ಅಥವಾ ದೂರನ್ನು ರದ್ದುಗೊಳಿಸಬಹುದು' ಎಂದು ಅಭಿಪ್ರಾಯಪಟ್ಟಿತ್ತು. ಅಂದರೆ ಪೊಲೀಸ್ ಠಾಣೆಗಳಲ್ಲಿ ಪತ್ನಿಯು ಪತಿ ವಿರುದ್ಧ ದಾಖಲಿಸಿದ ದೂರು ಮತ್ತು ಎಫ್‌ಐಆರ್ ಅನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸುತ್ತದೆ. ಇಂಥ ಬೆಳವಣಿಗೆಗಳಿಂದ ಮಹಿಳೆಯರ ರಕ್ಷಣೆಯ ಸಲುವಾಗಿ ಮೂಡಿಬಂದ ಕಾನೂನುಗಳು ದುರ್ಬಲಗೊಳ್ಳುತ್ತಿವೆ. ಈ ಪರಿಸ್ಥಿತಿಗೆ ಕೆಲವು ಮಹಿಳೆಯರು ಸುಳ್ಳು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುತ್ತಿರುವುದು ಮತ್ತು ಸುಲಿಗೆ ಸ್ವರೂಪದ ಪರಿಹಾರವನ್ನು ಪತಿಯಿಂದ ಒತ್ತಾಯಿಸುತ್ತಿರುವುದು ಕಾರಣ. ಇಂದಿಗೂ ವಾಸ್ತವವಾಗಿ ನೂರಾರು ಮಂದಿ ನೊಂದ ಮಹಿಳೆಯರು ನ್ಯಾಯ ಪಡೆಯಲು ಹೋರಾಟ ಮಾಡುತ್ತಿದ್ದಾರೆ. ಅಂತಹುದುರಲ್ಲಿ ಅತುಲ್ ಸುಭಾಷ್ ಅವರ ಪ್ರಕರಣ ಮಹಿಳೆಯರ ಹಿತಾಸಕ್ತಿಗೆ ತೀವ್ರ ಹಿನ್ನಡೆ ಉಂಟುಮಾಡುವಂಥದ್ದಾಗಿದೆ.

ಅತುಲ್ ಪ್ರಕರಣದಲ್ಲಿ ನಡೆದಿರುವಂತಹ ಬೆಳವಣಿಗೆಗಳು ನಮ್ಮ ದೇಶದ ವಿವಿಧ ಭಾಗದ ಲಕ್ಷಾಂತರ ಯುವಕರ ಬಾಳಿನಲ್ಲಿ ಇಂದಿಗೂ ನಡೆಯುತ್ತಿವೆ. ಸುಪ್ರೀಂ ಕೋರ್ಟ್‌ನ ಅಭಿಪ್ರಾಯದಂತೆ ಕಾನೂನು ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸುವ ಕೆಲಸವನ್ನು ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗ ಒಟ್ಟಾಗಿ ಸೇರಿ ಮಾಡಬೇಕಾಗಿದೆ.

ಐಪಿಸಿ ಉಪಬಂಧಗಳ ಬದಲಿಗೆ ಈಗ ಚಾಲ್ತಿಯಲ್ಲಿರುವ ಬಿಎನ್‌ಎಸ್‌ನ ಕಲಂ 80 ವರದಕ್ಷಿಣೆ ಸಾವಿನ ಬಗ್ಗೆ ಮತ್ತು ಕಲಂ 85 ಮಹಿಳೆಯ ಮೇಲೆ ಆಕೆಯ ಪತಿ ಅಥವಾ ಆತನ ಸಂಬಂಧಿಕರಿಂದ ಎಸಗಲಾಗುವ ಕ್ರೌರ್ಯದ ವಿರುದ್ಧ ರಕ್ಷಣೆ ನೀಡುವ ವ್ಯವಸ್ಥೆಯಾಗಿದೆ.

ಇಂದು ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ ದೂರುದಾರ ಮಹಿಳೆಯರು ತಮ್ಮ ಮನಸೋ ಇಚ್ಛೆ ಪತಿಯ ಸಂಬಂಧಿಗಳನ್ನು ಆರೋಪಿಗಳನ್ನಾಗಿ ಕ್ರಿಮಿನಲ್ ಪ್ರಕರಣಗಳಲ್ಲಿ ಸಿಲುಕಿಸುತ್ತಿದ್ದಾರೆ. ಈ ಬಗ್ಗೆ ದಾರ ಲಕ್ಷ್ಮಿನಾರಾಯಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 'ಕೌಟುಂಬಿಕ ಕ್ರೌರ್ಯದಿಂದ ಮಹಿಳೆಯರನ್ನು ರಕ್ಷಿಸುವ ಕಾನೂನುಗಳನ್ನು ದುರುಪಯೋಗಪಡಿಸಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ' ಎಂದಿದೆ. ನ್ಯಾ. ಬಿ.ವಿ.ನಾಗರತ್ನ ಮತ್ತು ನ್ಯಾ. ಕೋಟೇಶ್ವರ ಸಿಂಗ್ ಅವರು ತಮ್ಮ ಸದರಿ ತೀರ್ಪಿನಲ್ಲಿ 'ವೈವಾಹಿಕ ವಿರಸದ ಸಂದರ್ಭದಲ್ಲಿ ಮಹಿಳೆಯ ಅಸ್ಪಷ್ಟ ಮತ್ತು ಸಾಮಾನ್ಯೀಕರಿಸಿದ ಆರೋಪಗಳನ್ನು ನ್ಯಾಯಾಲಯಗಳು ಎಚ್ಚರಿಕೆಯಿಂದ ಪರಿಶೀಲಿಸದೇ ಇದ್ದಲ್ಲಿ ಕಾನೂನು ಪ್ರಕ್ರಿಯೆಗಳ ದುರುಪಯೋಗ ಆಗಬಹುದು' ಎಂದಿದ್ದಾರೆ.


ವಾಸ್ತವವಾಗಿ, ಇಡೀ ಸಮಾಜದ ಆತಂಕ ಇರಬೇಕಾದದ್ದು ಈ ಬೆಳವಣಿಗೆಯಲ್ಲಿ. ವೈವಾಹಿಕ ಸಂರಕ್ಷಣೆಯ ಕಾನೂನುಗಳು ಇಂದಿಗೆ ಕೂಡ ಲಕ್ಷಾಂತರ ಮಹಿಳೆಯರಿಗೆ ಅಗತ್ಯವಾಗಿವೆ. ಎಲ್ಲಿಯವರೆಗೆ ನಮ್ಮ ಸಮಾಜದಲ್ಲಿ ವರದಕ್ಷಿಣೆ ಎಂಬ ಪೆಡಂಭೂತಕ್ಕೆ ಮಾನ್ಯತೆ ಇರುತ್ತದೆಯೋ ಅಲ್ಲಿಯವರೆಗೆ ಮಹಿಳೆಯರಿಗೆ ಅದರಿಂದ ರಕ್ಷಣೆ ಕೂಡ ಅಗತ್ಯವಾಗಿದೆ.

ವರದಕ್ಷಿಣೆ ಕಿರುಕುಳದಂಥ ಪ್ರಕರಣಗಳ ವಿಚಾರಣೆ ವೇಳೆ 'ನ್ಯಾಯಾಲಯಗಳು ಎಚ್ಚರಿಕೆಯನ್ನು ವಹಿಸಬೇಕು' ಎಂಬ ಸಂದೇಶವನ್ನು ಸುಪ್ರೀಂ ಕೋರ್ಟ್ ನೀಡಿದೆ. ಆ ಎಚ್ಚರಿಕೆಯು ಸಕಾಲಿಕ ಹಾಗೂ ವಿವೇಕಯುತ ಎಂದು ಪರಿಗಣಿಸಬಹುದಾದರೂ ನಿಜವಾಗಿಯೂ ವರದಕ್ಷಿಣೆ ಕಾರಣಕ್ಕಾಗಿ ಪ್ರಾಣ ಕಳೆದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಇರುವ ಮಹಿಳೆಯರಿಗೆ ಮುಂದಿನ ದಾರಿ ಏನು ಎಂಬ ಆತಂಕ, ನೋವು ಮತ್ತು ಅಧೈರ್ಯ ಕಾಡುತ್ತವೆ. ಮಹಿಳೆಯರ ಎದುರಿಗೆ ಮತ್ತೆ ಮುಚ್ಚಿದ ಬಾಗಿಲುಗಳು ಢಾಳಾಗಿ ಕಾಣುತ್ತಿವೆಯೇ? ಅರ್ಥಾತ್ ಸುಳ್ಳು ದೂರುಗಳು ವರ್ಸಸ್ ಭಯಾನಕ ಸತ್ಯಗಳ ನಡುವಿನ ತೆಳುವಾದ ಗೆರೆಯನ್ನು ಗುರುತಿಸುವ, ವಿಸ್ತರಿಸುವ, ವಿಶದೀಕರಿಸುವ ಕಾರ್ಯವನ್ನು ಯಾರು ನಿರ್ವಹಿಸಬೇಕು? ಮಹಿಳೆಯರ ಶತಶತಮಾನಗಳ ಕಣ್ಣೀರು, ಮಹಿಳಾ ಸಂಘಟನೆಗಳ ಅವಿರತ ಹೋರಾಟಗಳು, ಕಾನೂನು ತಿದ್ದುಪಡಿಗಳು, ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದ ಪರವಾದ ಶ್ರೀರಕ್ಷೆಗಳು- ಇವೆಲ್ಲವೂ ಅತುಲ್ ಸುಭಾಷ್ ಆತ್ಮಹತ್ಯೆಯ ಎದುರಿಗೆ ತರಗೆಲೆಗಳಂತೆ ಹಾರಿಹೋಗುವ ಸಂದರ್ಭವು ಗಾಬರಿಗೊಳಿಸುವಂತಿದೆ. ಇದು ಅತ್ಯಂತ ಆತಂಕಕಾರಿಯಾಗಿದ್ದು, ಮಹಿಳೆಯರ ಹಿತಾಸಕ್ತಿಗೆ ವಿರುದ್ಧವಾಗಿದೆ.

ವರದಕ್ಷಿಣೆ ಮತ್ತು ಸಂಬಂಧಿತ ಕಾನೂನು ಹಾಗೂ ವೈವಾಹಿಕ ಬದುಕಿನಲ್ಲಿ ಹೊಂದಾಣಿಕೆ ಇಲ್ಲದಿರುವುದಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ವಿಭಿನ್ನವಾಗಿ ಮತ್ತು ಪ್ರತ್ಯೇಕವಾಗಿ ಗುರುತಿಸಬೇಕಿದೆ. ಕಾನೂನು ಇವುಗಳನ್ನು ಪ್ರತ್ಯೇಕವಾಗಿ ವ್ಯಾಖ್ಯಾನ ಮಾಡಬೇಕಾಗಿದೆ. ಮದುವೆಯ ಸಂದರ್ಭದಲ್ಲಿ ವಿವಾಹಪೂರ್ವ ಕರಾರು ಪತ್ರಗಳನ್ನು ಉಭಯತ್ರರು ಕೂಡ ಬರೆಸಿ ದಾಖಲಿಸಬೇಕಾಗಿದೆ. ಆ ಕರಾರು ಪತ್ರದಲ್ಲಿ ವರದಕ್ಷಿಣೆ ಕೊಡುಕೊಳ್ಳುವಿಕೆಯ ಬಗ್ಗೆ ಕೂಡ ದಾಖಲಿಸಬೇಕಾಗಿದೆ. ವೈವಾಹಿಕ ಬದುಕಿನಲ್ಲಿ ಹೊಂದಾಣಿಕೆ ಇಲ್ಲದೇ ನ್ಯಾಯಾಲಯಗಳ ಮೆಟ್ಟಿಲು ಹತ್ತಿದ ವ್ಯಾಜ್ಯಗಳ ಸಂದರ್ಭದಲ್ಲಿ ಪತಿಯ ಮಾತನ್ನೂ ಆಲಿಸಬೇಕಾದ ಅವಕಾಶವನ್ನು ಕೂಡ ಕಾನೂನಾತ್ಮಕವಾಗಿ ಒದಗಿಸಬೇಕಿದೆ.

ಲೇಖಕಿ: ಸಾಹಿತಿ, ವಕೀಲೆ

ಪ್ರಜಾವಾಣಿ ಚರ್ಚೆ



ಪ್ರಕ್ರಿಯೆ ಬದಲು ಆಗಬೇಕು



ಸಮಾಜವಾಗಿ, ಕಕ್ಷಿದಾರರಾಗಿ, ವಕೀಲರಾಗಿ ನಮ್ಮೆಲ್ಲರ ದೃಷ್ಟಿಕೋನಗಳು ಏನು ಎಂಬುದು ವರದಕ್ಷಿಣೆ, ಕೌಟುಂಬಿಕ ಹಿಂಸೆಯ ಪ್ರಕರಣಗಳ ದೆಸೆಯನ್ನು ನಿರ್ಧರಿಸುತ್ತವೆ. ಸಮಾಜದ ನಿಲುವುಗಳನ್ನು ಬದಲು ಮಾಡುವ, ಹೆಣ್ಣನ್ನು ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ನೋಡುವ ದಿಸೆಯಲ್ಲಿ ನಾವು ಹೆಜ್ಜೆ ಇಡಬೇಕು. ಜತೆಗೆ, ಕಕ್ಷಿದಾರರಿಗೆ ಕಾನೂನು ಅರಿವು ಮೂಡಿಸಬೇಕು

• ಮೈತ್ರೇಯಿ ಸಚ್ಚಿದಾನಂದ ಹೆಗಡೆ

ಅತುಲ್ ಸುಭಾಷ್ ಆತ್ಮಹತ್ಯೆಯಿಂದಾಗಿ ವರದಕ್ಷಿಣೆ, ಕೌಟುಂಬಿಕ ಹಿಂಸೆ ಮೊದಲಾದ ಅಪರಾಧಗಳನ್ನು ಮಟ್ಟ ಹಾಕಲು ಇರುವ ಕಾನೂನುಗಳ ಬಗ್ಗೆ ಮತ್ತೆ ಚರ್ಚೆಗಳು ಬಿರುಸು ಪಡೆದುಕೊಂಡಿವೆ. ಒಂದೆರಡು ತಿಂಗಳ ಹಿಂದೆ ಐದೋ ಆರೋ ಮದುವೆ ಆಗಿ ವಿಚ್ಛೇದನ ಪಡೆದ ಒಬ್ಬ ಮಹಿಳೆ ಏಳನೇ ಮದುವೆಯ ಗಂಡನ ಮೇಲೆ ಹಾಕಿದ ಕ್ರಿಮಿನಲ್ ಪ್ರಕರಣದ ವಿಚಾರಣೆ ಹೈಕೋರ್ಟ್ ಮುಂದೆ ಬಂದಾಗ, ನ್ಯಾಯಮೂರ್ತಿಯವರು ಈ ಕುರಿತು ಆಶ್ಚರ್ಯ ವ್ಯಕ್ತಪಡಿಸಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅಲ್ಲಲ್ಲಿ ಆಗಾಗ ನಾವು ವರದಕ್ಷಿಣೆ, ಕೌಟುಂಬಿಕ ಕಾನೂನುಗಳು ಹೇಗೆ ಗಂಡ, ಆತನ ವಯಸ್ಸಾದ ತಂದೆ-ತಾಯಂದಿರ ಮೇಲೆ ದೌರ್ಜನ್ಯ ಎಸಗುವ ಆಯುಧವಾಗಿ ಬದಲಾಗುತ್ತಿವೆ ಎಂಬ ಆರೋಪವನ್ನು ಕೇಳುತ್ತಲೇ ಇರುತ್ತೇವೆ. ಇನ್ನೂ ಬಾಳಬೇಕಿದ್ದ, ಮೂವತ್ತರ ಗಡಿ ದಾಟುತ್ತಲೇ ಬದುಕು ಸಾಕೆಂದು ಬರೆದಿಟ್ಟು ಹೋದ ಅತುಲ್ ಸಾವು ನಿಜಕ್ಕೂ ನಮ್ಮ ನ್ಯಾಯ ವ್ಯವಸ್ಥೆಗೆ ಕಪ್ಪುಚುಕ್ಕೆಯೇ ಸರಿ. ಆದರೆ, ಕಾನೂನುಗಳ ಬದಲಾವಣೆಯಿಂದ ಅದಕ್ಕೆ ಪರಿಹಾರ ಸಿಗುವುದೇ ಎನ್ನುವ ಬಗ್ಗೆ ನಾವು ಚಿಂತನೆ ನಡೆಸಬೇಕಿದೆ.

ವರದಕ್ಷಿಣೆ ಕಾನೂನುಗಳ ದುರುಪಯೋಗ ನಿರಂತರವಾಗಿ ಹೆಚ್ಚುತ್ತಿದೆ ಎಂಬ ಕಳವಳಕ್ಕೆ ಆಧಾರ ಇದೆಯೇ ಎನ್ನುವ ಮೂಲಭೂತ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ವರದಕ್ಷಿಣೆ, ಕೌಟುಂಬಿಕ ಹಿಂಸೆಗಳ ಆರೋಪಗಳ ಮೇಲೆ ದಾಖಲಾದ ಪ್ರಕರಣಗಳಲ್ಲಿ ಶಿಕ್ಷೆ ಆಗುವುದು ಕಡಿಮೆ, ಸುಳ್ಳು ಕೇಸುಗಳು ಹೆಚ್ಚಾಗುತ್ತಿವೆ ಎಂಬುದೇ ಇದಕ್ಕೆ ಸಾಕ್ಷ್ಯ ಎಂಬುದು ಹಲವರ ಅಂಬೋಣ. ಅವೇಕ್ಷಾ ಎಂಬ ಬೆಂಗಳೂರಿನ ಸಂಸ್ಥೆ ನಡೆಸಿದ ಸಮೀಕ್ಷೆಯ ಪ್ರಕಾರ, 2017ರಿಂದ 2022ರವರೆಗೆ ಆತ್ಮಹತ್ಯೆ ಮಾಡಿಕೊಂಡ ಮಹಿಳೆಯರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ವಿವಾಹಿತರು. ಆದರೆ, ಗಂಡಸರ ಆತ್ಮಹತ್ಯೆಗಳಲ್ಲಿ ವೈವಾಹಿಕ ಬದುಕಿಗೆ ಸಂಬಂಧಿಸಿ ಸಾವಿಗೆ ಶರಣಾದವರ ಪ್ರಮಾಣ ಶೇ 3ರಷ್ಟು ಮಾತ್ರ. ಸಾಮಾಜಿಕ ಮಾಧ್ಯಮಗಳಲ್ಲಿ, ಸಮೂಹ ಮಾಧ್ಯಮಗಳಲ್ಲಿ ಕೇಳುವ ಕೂಗುಗಳು ಸಂಖ್ಯೆಗಳಲ್ಲಿ ಕಾಣುವುದಿಲ್ಲ ಎಂಬುದು ಆ ವರದಿಯ ಸಾರಾಂಶ.

ಅತುಲ್ ಸುಭಾಷ್ ಪ್ರಕರಣದ ಸಂದರ್ಭದಲ್ಲೇ ಬಂದ ನ್ಯಾ. ವಿಕ್ರಂನಾಥ್ ಹಾಗೂ ನ್ಯಾ.ಪಿ.ಬಿ.ವರಾಳೆ ಅವರು ಕೊಟ್ಟ ತೀರ್ಪಿನ ಕಡೆ ನಾವು ಗಮನ ಹರಿಸಿಯೇ ಇಲ್ಲ. ಕಿರುಕುಳ ಕೊಟ್ಟಿದ್ದಾರೆ ಎಂಬುದು ಮಾತ್ರ ಆತ್ಮಹತ್ಯೆಗೆ ಪ್ರೇರೇಪಿಸಿದಂತೆ ಆಗುವುದಿಲ್ಲ ಎಂದು ಸೊಸೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಇಂತಹ ಪ್ರಕರಣಗಳು ಇಂದಿಗೂ ಸಾವಿರಗಳ ಸಂಖ್ಯೆಯಲ್ಲಿ ವರದಕ್ಷಿಣೆ, ಕೌಟುಂಬಿಕ ಹಿಂಸೆಗಳಿಂದಾಗಿ ಬಲಿಯಾಗುತ್ತಿರುವ ಮಹಿಳೆಯರ ಕಥೆಗಳನ್ನು ಹೇಳುತ್ತವೆ. ನೂರು ಅಪರಾಧಿಗಳು ತಪ್ಪಿಸಿಕೊಂಡರೂ ಒಬ್ಬ ನಿರಪರಾಧಿಗೂ ಶಿಕ್ಷೆ ಆಗಬಾರದು ಎಂಬ ತತ್ವದ ಮೇಲೆ ನಿಂತಿರುವ ನಮ್ಮ ನ್ಯಾಯವ್ಯವಸ್ಥೆಯಲ್ಲಿ ಎಂತಹ ಅಪರಾಧಕ್ಕೂ ಶಿಕ್ಷೆ ಆಗುವುದು ಕಡಿಮೆಯೇ. ಸಾಕ್ಷಿಗಳಿದ್ದರೂ ಒಂದು ಸಣ್ಣ ಕೊರತೆಯಿಂದ ಆಪಾದಿತರು ನಿರಪರಾಧಿಗಳು ಎಂದು ವ್ಯವಸ್ಥೆ ತೀರ್ಮಾನ ಕೊಡುತ್ತದೆ. ಹಾಗಿದ್ದಾಗ, ಕೇವಲ ಸಾಬೀತಾಗದ ಕೇಸುಗಳ ಆಧಾರದಲ್ಲಿ ವರದಕ್ಷಿಣೆ, ಕೌಟುಂಬಿಕ ದೌರ್ಜನ್ಯದ ಸುಳ್ಳು ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಪ್ರತಿಪಾದಿಸುವುದು ಸರಿಯಲ್ಲ.

ಹಾಗೆಂದ ಮಾತ್ರಕ್ಕೆ ವರದಕ್ಷಿಣೆ, ಕೌಟುಂಬಿಕ ಹಿಂಸೆಗಳ ಆರೋಪಗಳೆಲ್ಲ ಶೇ 100ರಷ್ಟು ಸರಿ ಇರುತ್ತವೆ ಎಂದು, ಈ ಕಾನೂನುಗಳ ದುರುಪಯೋಗ ಆಗುತ್ತಲೇ ಇಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತಾಗುತ್ತದೆ. ವ್ಯವಸ್ಥೆಯಲ್ಲಿರುವ ಲೋಪದೋಷಗಳ ಲಾಭ ಪಡೆದುಕೊಂಡು, ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳುವ ನಿದರ್ಶನಗಳು ಎಲ್ಲ ಕಾಲದಲ್ಲೂ, ಎಲ್ಲ ಕ್ಷೇತ್ರಗಳಲ್ಲೂ ಆಗುತ್ತಲೇ ಇರುತ್ತವೆ. ಭ್ರಷ್ಟಾಚಾರದ ಪ್ರಕರಣಗಳೇ ಆಗಲಿ, ದೇಶದ್ರೋಹದ ವಿರುದ್ಧದ ಪ್ರಕರಣಗಳೇ ಆಗಲಿ, ಅಷ್ಟೇಕೆ ಸಾಧಾರಣವಾದ ಔದ್ಯೋಗಿಕ ಕಾನೂನುಗಳಲ್ಲಿ ಹಣ, ಬುದ್ಧಿ, ಶಕ್ತಿ ಇರುವವರು ಕಾನೂನುಗಳನ್ನು ಉಪಯೋಗಿಸಿ ದುರ್ಬಲವಾಗಿರುವ ವ್ಯಕ್ತಿಗಳಿಗೆ ಕಿರುಕುಳ ನೀಡುತ್ತಾರೆ. ಇದರಲ್ಲಿ ಮಹಿಳಾಕೇಂದ್ರಿತ ಕಾನೂನುಗಳೂ ಸೇರಿವೆ. ಆದರೆ, ಮಾಧ್ಯಮಗಳ ಉತ್ಪ್ರೇಕ್ಷಿತ ವರದಿಗಳು ಅಥವಾ ಜನಸಾಮಾನ್ಯರ ಅರಿವಿನ ಕೊರತೆ ಮತ್ತು ಸಹಜವಾಗಿಯೇ ಪುರುಷ ಪ್ರಧಾನ ಸಮಾಜದ ನಿಲುವುಗಳಿಂದ ಈ ಘಟನೆಗಳು ಎಲ್ಲಿಲ್ಲದ ಪ್ರಾಮುಖ್ಯವನ್ನು ಪಡೆಯುತ್ತಿವೆ.

ಹಾಗೆಂದ ಮಾತ್ರಕ್ಕೆ ಸಮಾಜ ಅಥವಾ ಕಾನೂನು ಈ ಸಮಸ್ಯೆಗೆ ಕುರುಡಾಗಬೇಕೆಂದಲ್ಲ. ಮೂಲಭೂತವಾದ ಕಾನೂನುಗಳಲ್ಲಿ ಬದಲಾವಣೆ ತರುವುದರಿಂದ ಸಮಾಜಕ್ಕೆ ಉಪಯೋಗಕ್ಕಿಂತ ನಷ್ಟವೇ ಹೆಚ್ಚು. ಹಾಗಾಗಿ ಇಂಥ ಪ್ರಕರಣಗಳ ವಿಚಾರಣಾ ಪ್ರಕ್ರಿಯೆಯಲ್ಲಿ ಬದಲಾವಣೆ ತರುವ ತಿದ್ದುಪಡಿಗಳನ್ನು ಮಾಡಬೇಕು. ಇಂತಹ ವೈವಾಹಿಕ ವಿವಾದಗಳ ಬಗೆಗಿನ ಪ್ರಕರಣಗಳನ್ನು ಪರಿಶೀಲಿಸಿದಾಗ, ವಿಚಾರಣಾ ಅವಧಿ ಈ ಕೇಸುಗಳಲ್ಲಿ ದೊಡ್ಡ ಖಳನಾಯಕ ಎಂಬುದು ಗೊತ್ತಾಗುತ್ತದೆ. ಎಷ್ಟೋ ಬಾರಿ ಪ್ರಕರಣದ ತೀರ್ಪು ಬರಲು ದಶಕಗಳೇ ಬೇಕಾಗುತ್ತದೆ. ದೆಹಲಿ ಹೈಕೋರ್ಟ್‌ನ ಮತ್ತು ಕರ್ನಾಟಕ ಹೈಕೋರ್ಟ್‌ನ ನಿರ್ದೇಶನಗಳನ್ನು ಹೊರತುಪಡಿಸಿದರೆ ಕೌಟುಂಬಿಕ ವಿವಾದಗಳನ್ನು ಬಗೆಹರಿಸಲು ನಿಗದಿತ ಅವಧಿ ಎಂಬುದೇ ಇಲ್ಲ. ಗ್ರಾಹಕರಿಗೆ ಸಂಬಂಧಿಸಿದ ಪ್ರಕರಣಗಳು, ರೇರಾ ಪ್ರಕರಣಗಳನ್ನು ಬಗೆಹರಿಸಲು ನ್ಯಾಯಾಲಯಗಳು ಹೆಚ್ಚು ಸಮಯ ತೆಗೆದುಕೊಳ್ಳುವಂತಿಲ್ಲ ಎಂಬ ನಿಯಮ ಇದೆ. ಅಂತಹ ಬದಲಾವಣೆಯನ್ನು ವೈವಾಹಿಕ, ಕೌಟುಂಬಿಕ ಹಿಂಸೆಗೆ ಸಂಬಂಧಿಸಿದ ಕಾನೂನುಗಳಲ್ಲಿಯೂ ತರಬೇಕಿದೆ.

ವೈವಾಹಿಕ ಪ್ರಕರಣಗಳಲ್ಲಿ ಉನ್ನತ ನ್ಯಾಯಾಲಯಗಳು ಈ ಹಿಂದೆ ಕೊಟ್ಟ ತೀರ್ಪುಗಳಿಗೆ ಹೆಚ್ಚಿನ ಮಹತ್ವ ಇಲ್ಲ. ಯಾಕೆಂದರೆ, ಕೋರ್ಟ್‌ನ ಮುಂದೆ ಬರುವ ಒಂದೊಂದು ಪ್ರಕರಣಕ್ಕೂ ಒಂದೊಂದು ಹಿನ್ನೆಲೆ ಇರುತ್ತದೆ. ಹಾಗಾಗಿ ಇಂಥ ಪ್ರಕರಣಗಳಲ್ಲಿ ನ್ಯಾಯಾಧೀಶರ ದೃಷ್ಟಿಕೋನವೇ ಹೆಚ್ಚಿನ ಮಹತ್ವ ಪಡೆಯುತ್ತದೆ. ಕೌತುಕವೆಂದರೆ, ಪುರುಷಪ್ರಧಾನ ಸಮಾಜದ ಹಲವು ಗ್ರಹಿಕೆಗಳು ಕೌಟುಂಬಿಕ ಪ್ರಕರಣಗಳಲ್ಲಿ ಪತಿಯ ವಿರುದ್ಧದ ತೀರ್ಪುಗಳಿಗೆ ದಾರಿ ಮಾಡುತ್ತವೆ. ಉದಾಹರಣೆಗೆ ಜೀವನಾಂಶ. ಹೆಂಡತಿಗೆ ಕೆಲಸ ಮಾಡುವ ವಿದ್ಯಾಭ್ಯಾಸವಿದ್ದರೂ ಅವಳನ್ನು ನೋಡಿಕೊಳ್ಳುವುದು ಗಂಡನ ಕರ್ತವ್ಯ ಎಂಬ ಅಭಿಪ್ರಾಯವನ್ನು ನ್ಯಾಯಾಧೀಶರು ಹೊಂದಿದ್ದರೆ, ಅವರ ಮುಂದೆ ಬರುವ ಎಲ್ಲ ಪ್ರಕರಣಗಳಲ್ಲಿಯೂ ಅಂತಹ ನಿಲುವನ್ನೇ ಅವರು ತಾಳುತ್ತಾರೆ. ಹೆಣ್ಣೂ ಸ್ವತಂತ್ರವಾಗಿ ಜೀವನ ನಡೆಸಬಲ್ಲಳು ಎಂದು ಆಲೋಚಿಸುವ ನ್ಯಾಯಾಧೀಶರು, ವಿಚ್ಛೇದಿತ ಮಹಿಳೆ ಕೆಲಸ ಮಾಡುತ್ತಿದ್ದರೂ ಆಕೆಯ ಜೀವನಾಂಶವನ್ನು ಗಂಡ ಭರಿಸಬೇಕು ಎಂಬ ನಿಲುವು ತಾಳುವುದಿಲ್ಲ.

ಸಮಾಜವಾಗಿ, ಕಕ್ಷಿದಾರರಾಗಿ, ವಕೀಲರಾಗಿ ನಮ್ಮೆಲ್ಲರ ದೃಷ್ಟಿಕೋನಗಳು ಏನು ಎಂಬುದು ವರದಕ್ಷಿಣೆ, ಕೌಟುಂಬಿಕ ಹಿಂಸೆಯ ಪ್ರಕರಣಗಳ ದೆಸೆಯನ್ನು ನಿರ್ಧರಿಸುತ್ತವೆ. ಸಮಾಜದ ನಿಲುವುಗಳನ್ನು ಬದಲು ಮಾಡುವ, ಹೆಣ್ಣನ್ನು ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ನೋಡುವ ದಿಸೆಯಲ್ಲಿ ನಾವು ಹೆಜ್ಜೆ ಇಡಬೇಕು. ಅದರ ಜೊತೆಯಲ್ಲಿಯೇ ಕಕ್ಷಿದಾರರ ಅರಿವಿನ ಕೊರತೆಯೂ ಕಾನೂನು ದುರುಪಯೋಗಕ್ಕೆ ಅನುವು ಮಾಡಿಕೊಡುತ್ತದೆ ಎಂಬುದನ್ನು ಮನಗಂಡು, ಅದರ ವಿರುದ್ಧ ಕಾನೂನಿನಲ್ಲಿಯೇ ಇರುವ ದಾರಿಗಳ ಬಗ್ಗೆ ಕಕ್ಷಿದಾರರಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕು. ಅತುಲ್ ಸುಭಾಷ್ ಅವರ ಸಾವು ಅಂತಹ ಮೂಲಭೂತವಾದ ಬದಲಾವಣೆಗೆ ದಾರಿಯಾಗಲಿ.

ಲೇಖಕಿ: ಸುಪ್ರೀಂ ಕೋರ್ಟ್ ಮತ್ತು ಕೇರಳ ಹೈಕೋರ್ಟ್ ವಕೀಲೆ



ಮಿದುಳಿಗೆ ಕೈ ಇಡುವ ಜಗತ್ತು!

ಶ್ರೀಮಂತರ ಸಂಪತ್ತನ್ನು ಕಿತ್ತು ಬಡವರಿಗೆ ಹಂಚಬೇಕು, ಸಮಾಜದಲ್ಲಿ ರಾಜಕಾರಣಿಗಳು ಶ್ರೀಮಂತರಾಗುವುದೇ ಬಡವರ ದುಡ್ಡಿನಿಂದ. ನಾವು ಅವರ ದಾಸ್ಯದಿಂದ ಹೊರಬರಬೇಕು, ಸಾಮಾನ್ಯರು ಶ್ರೀಮಂತರನ್ನು ಆಳುವಂತಾಗಬೇಕು ಎಂಬ ತಮ್ಮ ಹಿಂದಿನ ಸಿನಿಮಾಗಳ ಸಂದೇಶವನ್ನೇ ಉಪೇಂದ್ರ ಮತ್ತೆ 'ಯುಐ'ನಲ್ಲಿ ಪುನರುಚ್ಚರಿಸಿದ್ದಾರೆ. ಆದರೆ ಅದನ್ನು ಹೇಳಿಕೊಂಡು ಹೋದ ರೀತಿ, ಅದಕ್ಕಾಗಿ ಸೃಷ್ಟಿಸಿದ ಜಗತ್ತು ಭಿನ್ನವಾಗಿದೆ. ಉಪೇಂದ್ರ ಅವರ 'ಎ', 'ಸೂಪರ್' ಸಿನಿಮಾಗಳ ಒಂದಷ್ಟು ಅಂಶಗಳು ಇಲ್ಲಿಯೂ ಮರುಕಳಿಸುತ್ತವೆ. ಅದರಲ್ಲಿಯೂ 'ಎ' ಸಿನಿಮಾದ ದೃಶ್ಯಗಳು, ಅಲ್ಲಿ ಬಳಸಿದ್ದ ತಂತ್ರಗಳು ಇಲ್ಲಿಯೂ ಕಾಣಸಿಗುತ್ತದೆ. ಅಷ್ಟಾಗಿಯೂ 'ಯುಐ' ಕಥೆ ಇಷ್ಟೇ ಎನ್ನಲು ಸಾಧ್ಯವಿಲ್ಲ. ಮನುಷ್ಯ ಪ್ರಕೃತಿಯನ್ನು ಹಾಳುಗೆಡುವುತ್ತಿರುವುದರಿಂದ ಹಿಡಿದು ಒಳಿತು, ಕೆಡುಕುಗಳವರೆಗೆ ಸಾಕಷ್ಟು ಅಂಶಗಳು ಚಿತ್ರದಲ್ಲಿ ಕಾಣಸಿಗುತ್ತದೆ. ಕಥೆಗಿಂತ ಹೆಚ್ಚಾಗಿ ಚಿತ್ರಕಥೆಯನ್ನು ಪ್ರಮುಖವಾಗಿಸಿಕೊಂಡಿರುವ ಚಿತ್ರವಿದು.

ಉಪೇಂದ್ರ ಅವರ 'ಶ್', 'ಎ' ಸಿನಿಮಾದಂತೆಯೆ ಇಲ್ಲಿಯೂ ಸಿನಿಮಾದೊಳಗೊಂದು ಸಿನಿಮಾ. ಚಿತ್ರಮಂದಿರದಲ್ಲಿ 'ಯುಐ' ಸಿನಿಮಾ ನೋಡಿ ವಿಮರ್ಶೆ ಬರೆಯಲು ಪರದಾಡುವ ವಿಮರ್ಶಕನಿಂದ ಕಥೆ ಆರಂಭವಾಗುತ್ತದೆ. ಉಪೇಂದ್ರ 'ಎ' ಸಿನಿಮಾದಲ್ಲಿ 'ಇದು ಕಡ್ಡಾಯವಾಗಿ ಬುದ್ಧಿವಂತರಿಗೆ ಮಾತ್ರ' ಎಂಬ ಟ್ಯಾಗ್‌ಲೈನ್ ಇಟ್ಟಿದ್ದರು. ಇಲ್ಲಿ 'ನೀವು ಬುದ್ಧಿವಂತರಾಗಿದ್ರೆ ಈಗಲೇ ಚಿತ್ರಮಂದಿರದಿಂದ ಎದ್ದೋಗಿ..' ಎಂದಿದ್ದಾರೆ. ಅದೊಂದು ವಿಚಿತ್ರ ಲೋಕ. ಮಿದುಳು ಹೊಂದಿರುವವರ ಲೋಕವದು ಎಂಬುದನ್ನು ಉಪೇಂದ್ರ ಸೂಚ್ಯವಾಗಿ ಹೇಳಿದ್ದಾರೆ.

ನಾವು ನೋಡಿದ ಸಿನಿಮಾ

ಯುಐ

- **ನಿರ್ದೇಶನ:** ಉಪೇಂದ್ರ
- **ನಿರ್ಮಾಣ:** ಜಿ.ಮನೋಹರನ್, ಕೆ.ಪಿ. ಶ್ರೀಕಾಂತ್
- **ತಾರಾಗಣ:** ಉಪೇಂದ್ರ, ರೀಷ್ಮಾ ನಾಣಯ್ಯ, ರವಿಶಂಕರ್, ಸಾಧು ಕೋಕಿಲ ಮತ್ತಿತರರು

ಅಲ್ಲಿ ಸತ್ಯ ಮತ್ತು ಕಲ್ಕಿಯಾಗಿ ದ್ವಿಪಾತ್ರದಲ್ಲಿ ಉಪೇಂದ್ರ ಬರುತ್ತಾರೆ. ಕಲ್ಕಿ ಖಳನಟನಾಗಿ ಜಗತ್ತನ್ನು ಬದಲಿಸಲು ಹೊರಟವನಾದರೆ, ಸತ್ಯ ಬುದ್ಧನಾಗಿ ಜಗತ್ತನ್ನು ಕಟ್ಟಲು ಹೊರಟವನು. ಕಲ್ಕಿ ಮನುಷ್ಯನ ಬಾಹ್ಯ ರೂಪದ ಪ್ರತೀಕವಾದರೆ, ಸತ್ಯ ಮನುಷ್ಯನ ಆಂತರಿಕ ರೂಪ ಎಂಬುದನ್ನು ಒಂದುಕಡೆ ಹೇಳುತ್ತಾರೆ.

ಈ ಜೋಡಿ ಅಲ್ಲಿನ ರಾಜನಾಗಿದ್ದ ರವಿಶಂಕರ್ ಅವರನ್ನು ಕುರ್ಚಿಯಿಂದ ಕೆಳಗಿಳಿಸುವುದು, ಅದರ ನಂತರದ ಆ ಸಾಮ್ರಾಜ್ಯವೇ ಒಟ್ಟಾರೆ ಚಿತ್ರಕಥೆ. ಇದಕ್ಕಾಗಿ ನಿರ್ದೇಶಕರು ಸೃಷ್ಟಿಸಿದ ಜಗತ್ತು ಬಹಳ ಮಜವಾಗಿದೆ. ಕಥೆ ಹೇಳಿಕೊಂಡು ಹೋದ ರೀತಿ, ಅದನ್ನು ದೃಶ್ಯವಾಗಿಸಿರುವುದು ಎಲ್ಲವೂ ಕೆಲವು ಕಡೆ ಭಿನ್ನಲೋಕಕ್ಕೆ ಹೋದ ಅನುಭವ ನೀಡುತ್ತದೆ. ಕೋಣೆಯಲ್ಲಿ ಸತ್ಯ ಬಂಧಿಯಾಗಿರುತ್ತಾನೆ. ಹೊರಗೆ ನೂರಾರು ಕೀಗಳು ಬಿದ್ದಿರುತ್ತವೆ. ಸಾಮಾನ್ಯವಾಗಿ ಯಾವ ಕೀ ಯಿಂದ ಬೀಗ ತೆರೆದುಕೊಳ್ಳಬಹುದೆಂದು ಯೋಚಿಸುತ್ತೇವೆ. ಯಾವುದೋ ಒಂದು ಕೀ ಬಳಸಿ, ಲಾಕ್‌ನ ಸ್ಕ್ರೂಗಳನ್ನೇ ಕಳಚಿ ಸತ್ಯ ಲಾಕ್ ತೆಗೆಯುತ್ತಾನೆ. ಬಹಳ ಸಮಾಧಾನದಿಂದ ಯೋಚಿಸಿದರೆ ಪರಿಹಾರ ಅಲ್ಲೇ ಇರುತ್ತದೆ. ಗಮನ ಮುಖ್ಯ ಎನ್ನುವ ರೀತಿಯ ಕೆಲವಷ್ಟು ದೃಶ್ಯಗಳು ಹೊಸತನದಿಂದ ಕೂಡಿವೆ.


ಇಡೀ ಚಿತ್ರದ ದೊಡ್ಡ ಶಕ್ತಿ ಉಪೇಂದ್ರ ನಟನೆ. ಸತ್ಯನಾಗಿ ಸೌಮ್ಯ ಪಾತ್ರದಲ್ಲಿ, ಕಲ್ಕಿಯಾಗಿ ರೌದ್ರ ಪಾತ್ರದಲ್ಲಿ ಉಪೇಂದ್ರ ಇಡೀ ಸಿನಿಮಾವನ್ನು ಹೆಗಲ ಮೇಲೆ ಹೊತ್ತುಕೊಂಡು ಸಾಗುತ್ತಾರೆ. ರವಿಶಂಕರ್ ಪಾತ್ರಕ್ಕೆ ಸ್ವಲ್ಪ ಆದ್ಯತೆ ಇದೆ. ನಾಯಕಿ ಪಾತ್ರ ಹಾಡು, ನೃತ್ಯಕ್ಕೆ ಸೀಮಿತವಾಗಿದೆ. ಉಳಿದ ಪಾತ್ರಗಳಿಗೆ ಮಹತ್ವವಿಲ್ಲ. ಜೊತೆಗೆ ಒಂದು ಸರಿಯಾದ ಅಂತ್ಯವೂ ಇಲ್ಲ. ಗ್ರಾಫಿಕ್ಸ್ ಎಂದು ಗೊತ್ತಾಗದಷ್ಟು ಸೊಗಸಾಗಿರುವ ಗ್ರಾಫಿಕ್ಸ್ ಚಿತ್ರದ ದೃಶ್ಯ ವೈಭವವನ್ನು ಹೆಚ್ಚಿಸಿದೆ. ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ ದೃಶ್ಯಗಳಿಗೆ ತಕ್ಕಂತಿದೆ. ಚಿತ್ರದ ಬಹುತೇಕ ಹಾಡುಗಳು, ಅದರ ಸಾಹಿತ್ಯ ಆ ಸನ್ನಿವೇಶದಲ್ಲಿ ಮಜ ನೀಡುತ್ತವೆ. ಒಂದಷ್ಟು ವಿಷಯಗಳನ್ನು ಉಪದೇಶ ಎನಿಸದಂತೆ ರಂಜನೀಯವಾಗಿ ಹೇಳುವ, ತಾಳ್ಮೆ ಪರೀಕ್ಷಿಸುವ ಕೆಲ ದೃಶ್ಯಗಳಿಗೆ ಕತ್ತರಿ ಹಾಕುವ ಅವಕಾಶ ನಿರ್ದೇಶಕರಿಗಿತ್ತು.

ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5898

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ದಾರಿ ತೋರುವವನು ಇಲ್ಲಿದ್ದಾನೆ (5)
4.ಆಯುಧಗಳಿಂದ ಸಜ್ಜುಗೊಂಡದ್ದು (3)
5.ಕುಲದವನು ತೋರಿಸಿದ ಮುಂಗುಸಿ (3)
6.ಹತ್ತು ವರ್ಷಗಳ ಅವಧಿ (3)
7.ಗಮನಿಸುವಾಗ ಮುಸುಕು ಕಾಣಿಸಿತೇ? (3)
9.ನಿಬಿಡತೆಯನ್ನು ಹೀಗೆನ್ನಿ (3)
10.ಮಿತಿಯಲ್ಲಿ ಕೊನೆಗೊಂಡಿರುವ ಸಂಘ (3)
13.ಗಸಿ ತರುತ್ತಿರುವ ಕ್ರೂರಿ! (3)
15.ಗೂಬೆ ಇಲ್ಲಿದೆ (3)
16.ಮಾವಿನ ಮರ ಚಿಕ್ಕದಾಗಿದೆ! (3)
17.ಅಡಕೆಯ ಹೂವಿನ ಗೊಂಚಲು (3)
18.ವ್ಯಾಯಾಮ ಶಾಲೆಯಿದು(5)

ಮೇಲಿಂದ ಕೆಳಕ್ಕೆ

1.ತಿಂಗಳಿಗೊಮ್ಮೆ ಕೊಡುವ ವೇತನ (4)
2.ಈತ ಕಡುಬಡವ (5)
3.ತಿರುಗಿಸಿ ನೋಡಿದರೂ ಇದು ಸುವರ್ಣ (3)
4.ಆನೆಗಳ ಗುಂಪಿನ ನಾಯಕ (3)
8.ಸತಿ ಇರುವ ಅತಿಥಿ ಗೃಹ (3)
9.ಸಧ್ಯದ ಸಮಯ (3)
11.ಮಿಡಿ ತೊಟ್ಟಿರುವ ಒಯ್ಯಾರಿ (5)
12.ನೆರೆಮನೆಯವನು ತೋರಿಸಿದ ಜೈಲು (4)
14.ಈತ ಪಕ್ಕಾ ಹಳ್ಳಿಯವನು (3)
15.ಊರ ಹತ್ತಿರ ಕಾಣಿಸಿದ ಹಾವು (3)

5897ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿಯಾಮಕ 3.ಮಧುಚಂದ್ರ
5.ನವೀನ 6.ತರಕಲು
8.ವಿಧುರ 10.ಮಸಲತ್ತು
11.ವಭಸಂಅ 12.ಮಿಥುನ
14.ಸಮರಸ 17.ಸುಸ್ವರ
18.ತಪರಾಕು 19.ದಿಗಂಬರ

ಮೇಲಿಂದ ಕೆಳಕ್ಕೆ:
1.ನಿಶ್ಚಿತ 2.ಕನಲು
3.ಮನವಿ 4.ದ್ರವ
7.ರಥಸಪ್ತಮಿ 9.ರಕ್ತಸಂಚಾರ
13.ನಸುಕು 14.ಸರದಿ
15.ಸಮರ 16.ಪ್ಲುತ

ಸುಡೊಕು 6283

6				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6282 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಡಿಸೆಂಬರ್ 21, 2024

ಶ್ರೀಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಷಷ್ಠಿ ಗಂ. 12-22 ನಕ್ಷತ್ರ: ಪೂರ್ವಫಲ್ಗುನಿ ಗಂ. 30-14, ಯೋಗ: ಪ್ರೀತಿ ಗಂ. 18-23 ಕರಣ: ವಣಿಜ ಗಂ. 12-22, ಧನು ಮಾಸದ 05 ನೇ ದಿನ, ಮಳೆನಕ್ಷತ್ರ: ಮೂಲ 2.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-52 ಸೂರ್ಯಾಸ್ತ : 06-05
ಮುಸ್ಲಿಂ ದಿನಾಂಕ : 18 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 11, 10

ಮೇಷ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡುವುದು ಸಮಂಜಸವಾಗಿ ಕಾಣುವುದಿಲ್ಲ. ಕೊಡು-ಕೊಳ್ಳುವಿಕೆಯ ವ್ಯವಹಾರದಿಂದ ಅಧಿಕ ಲಾಭ ಬರಲಿದೆ. ಹಿರಿಯರ ಆರೋಗ್ಯದಲ್ಲಿ ಪ್ರಗತಿ.

ವೃಷಭ: ತಾಯಿಯ ಸಹಾಯದಿಂದ ಸ್ವಂತ ಉದ್ಯೋಗದಲ್ಲಿ ಅಧಿಕ ಲಾಭ. ಸರ್ಕಾರಿ ಕೆಲಸದ ಗುತ್ತಿಗೆದಾರರು ಕಾಮಗಾರಿಗಳನ್ನು ನಿಮ್ಮೆಡೆಗೆ ಮಾಡಿಕೊಳ್ಳುವಿರಿ. ಮಹಾಲಕ್ಷ್ಮಿಯನ್ನು ಪ್ರಾರ್ಥಿಸಿ ಸತ್ಫಲ ಉಂಟಾಗುವುದು.

ಮಿಥುನ: ನಾಟಕ ಹಾಗೂ ಸಿನಿಮಾ ರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಯಶಸ್ಸು ಇದ್ದು, ಹೆಚ್ಚಿನ ಪ್ರೋತ್ಸಾಹಗಳು ದೊರೆತು ಸಮಾಜದಲ್ಲಿನ ಉತ್ತಮ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ತಲುಪುವಂತಾಗಲಿದೆ.

ಕರ್ಕಾಟಕ: ಕೈಗಾರಿಕಾ ಕ್ಷೇತ್ರದಲ್ಲಿರುವವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಆದರೆ, ಸಾಫ್ಟ್‌ವೇರ್ ವೃತ್ತಿಯಲ್ಲಿರುವವರು ಎಚ್ಚರದಿಂದ ಹೆಜ್ಜೆ ಇಡುವುದು ಉತ್ತಮ.

ಸಿಂಹ: ಮನಸ್ಸಿನ ಭಾವನೆಗಳಿಗೆ ಕಿವಿಗೊಡುವುದು ಬುದ್ಧಿವಂತಿಕೆಯ ನಡೆಯಾಗಲಿದೆ. ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ಪಡೆಯುವಿರಿ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರುವುದು ಒಳ್ಳೆಯದು.

ಕನ್ಯಾ: ಸತ್ಕಾರ್ಯ ನೆರವೇರಿಸುವ ಬಗ್ಗೆ ಪೂರ್ವಭಾವಿಯಾಗಿ ಕುಟುಂಬದವರೊಡನೆ ದೀರ್ಘ ಸಮಾಲೋಚನೆ ನಡೆಸಿರಿ. ವೃತ್ತಿಗೆ ಸಂಬಂಧಿಸಿದಂತೆ ದಿನಚರಿಯನ್ನು ವ್ಯತ್ಯಾಸ ಮಾಡುವುದು ಸರಿಯಲ್ಲ.

ತುಲಾ: ಕಂಪನಿಯ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡಬೇಕಾದ ಸಂದರ್ಭ ಬರುವುದು. ನಾನಾ ರೀತಿಯಲ್ಲಿ ಅಭಿವೃದ್ಧಿ, ಉನ್ನತಿ ಗೋಚರಕ್ಕೆ ಬಂದರೂ ಲೆಕ್ಕಾಚಾರದ ಬಗ್ಗೆ ಗಮನವಿರಲಿ. ಗೃಹಿಣಿಯರಿಗೆ ಇಷ್ಟಾರ್ಥಗಳು ಸಿದ್ಧಿ.

ವೃಶ್ಚಿಕ: ವಿದೇಶಿ ವಿನಿಮಯವನ್ನು ಮಾಡುವವರು ಮಧ್ಯವರ್ತಿಗಳ ಕೆಲವು ನೀಚಬುದ್ಧಿಯಿಂದ ನಷ್ಟವನ್ನು ಅನುಭವಿಸುವಿರಿ. ಪರರ ಟೀಕೆ ಟಿಪ್ಪಣಿಗೆ ಕಿವಿಗೊಡುವ ಮನಸ್ಥಿತಿಯನ್ನು ಬದಲಿಸಿಕೊಳ್ಳಿರಿ. ಸತ್ಯ ಮಾರ್ಗದಲ್ಲಿ ನಡೆಯಿರಿ.

ಧನು: ಮಾತುಕತೆಯಿಂದ ಬಗೆಹರಿಸಿಕೊಳ್ಳಬಹುದಾದ ಹಲವು ಸಮಸ್ಯೆಗಳನ್ನು ಮೌನದಿಂದಾಗಿ ಹೆಚ್ಚು ಮಾಡಿಕೊಳ್ಳುವಿರಿ. ನಿಯಮ ನೀತಿಯನ್ನು ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವುದು ಸರಿಯಲ್ಲ.

ಮಕರ: ಅಲ್ಲಗಳೆಯುವವರ ಜತೆಯಲ್ಲಿ ಕಾರ್ಯನಿರ್ವಹಿಸುವುದರಿಂದ ಆದಷ್ಟು ತಪ್ಪಿಸಿಕೊಳ್ಳುವಂಥ ಪ್ರಯತ್ನ ನಡೆಸುವಿರಿ. ಸಂಬಂಧಿಕರ ಅತಿ ವಿಶ್ವಾಸ, ಪ್ರೀತಿಯನ್ನು ಕಂಡು ಮರುಳಾಗಬೇಡಿ.

ಕುಂಭ: ವಾತಾವರಣವು ಬೇಕಾದ ರೀತಿಯಲ್ಲಿ ಇಲ್ಲದೇ ಇರುವುದರಿಂದ ಪೂರ್ವನಿಯೋಜಿತ ಕೆಲಸಗಳನ್ನು ಮಾಡುವಲ್ಲಿ ಹಿನ್ನಡೆಯಾಗಬಹುದು. ಮುಂದಾಲೋಚನೆ ಇಲ್ಲದೆ ತೆಗೆದುಕೊಂಡ ನಿರ್ಧಾರಗಳಿಂದ ಎಡವಬಹುದು.


ಮೀನ: ವ್ಯಾಪಾರಿಗಳು ಗ್ರಾಹಕರಲ್ಲಿ ಸ್ನೇಹ, ವಿಶ್ವಾಸವನ್ನು ಬೆಳೆಸಿಕೊಳ್ಳುವುದರಿಂದ ಅಭಿವೃದ್ಧಿಯನ್ನು ಪಡೆಯಬಹುದು. ದಿನದ ಪೂರ್ವಾರ್ಧದಲ್ಲಿ ಮಾನಸಿಕ ಖಿನ್ನತೆ ಇರಬಹುದು. ಆರೋಗ್ಯದ ಬಗ್ಗೆ ಕಾಳಜಿ ತೋರಿ.

PROPERTY CORNER

ಕ್ಲಾಸಿಫೈಡ್ಸ್

PROPERTY CORNER ಕ್ಲಾಸಿಫೈಡ್ಸ್


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,951
ಇಂದಿನ ಅಂತ್ಯ	23,587
▼	364
ದಿನದ ಗರಿಷ್ಠ	26,631

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹590

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹395-625
ದ್ವಿತಳಿ (ಬಿ.ವಿ)	₹333-766

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹175

(ಪ್ರತಿ ಕೆ.ಜಿಗೆ)

ವಿನಿಮಯ ದರ

$ ಡಾಲರ್	85.04
£ ಪೌಂಡ್	106.24
€ ಯುರೊ	88.26
¥ ಯೆನ್ (100ಕ್ಕೆ)	54

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಸರಕು	57100-93520	ಕೆಂಪುಗೋಟು	14899-26969
ಕೋಕ	20000-27500	ಸಿದ್ದಾಪುರ		ರಾಶಿ	38809-58169
ಹಳತು	45000-48500	ಬಿಳೆಗೋಟು	23989-27369	ತಟ್ಟಿಬೆಟ್ಟೆ	27000-38109
ಕುಮಟ		ಕೆಂಪುಗೋಟು	33299-37099	ಅಪಿ	58950-63165
ಚಾಲಿ	33569-36799	ಕೋಕ	16119-16119	ಕಾರ್ಕಳ	
ಚಿಪ್ಪು	16869-26289	ಚಾಲಿ	42989-47929	ಹೊಸತು	25000-34500
ಕೋಕ	6089-22569	ತಟ್ಟಿಬೆಟ್ಟೆ	26309-33119	ಹಳತು	30000-48500
ಪಟೋರ	37099-39629	ಶಿರಸಿ		ಚಿತ್ರದುರ್ಗ	
ಹೊಸಚಾಲಿ	25069-28899	ಬೆಟ್ಟೆ	28699-36609	ಅಪಿ	48600-49000
ಕುಂದಾಪುರ		ಬಿಳೆಗೋಟು	22600-30629	ಬೆಟ್ಟೆ	29100-29500
ಹಳೆ ಚಾಲಿ	40000-45000	ಚಾಲಿ	34208-38791	ಕೆಂಪುಗೋಟು	24600-25000
ಹೊಸ ಚಾಲಿ	25000-33000	ರಾಶಿ	42789-47499	ರಾಶಿ	48100-48500
ಶಿವಮೊಗ್ಗ		ಕೆಂಪುಗೋಟು	10169-20599	ಪುತ್ತೂರು	
ಬೆಟ್ಟೆ	45600-58040	ಯಲ್ಲಾಪುರ		ಕೋಕ	22000-28500
ಗೊರಬಲು	17200-30569	ಬಿಳಿಗೋಟು	12899-29411	ಹೊಸತು	25000-34500
ಹೊಸತು	31366-49911	ಚಾಲಿ	29698-38419	ಹಳತು	36000-48500
ರಾಶಿ	28009-50411	ಕೋಕ	4899-18499		

ಬಜೆಟ್ ಪೂರ್ವ ಸಭೆ: ಕೇಂದ್ರದ ಮುಂದೆ ಬೇಡಿಕೆ ಮಂಡಿಸಿದ ರಾಜ್ಯ ಸರ್ಕಾರ

‘ರೈಲ್ವೆ ಪೂರ್ಣ ಮೊತ್ತ ಭರಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕರ್ನಾಟಕ ರಾಜ್ಯಕ್ಕೆ ಹೆಚ್ಚುವರಿ ರೈಲ್ವೆ ಯೋಜನೆಗಳನ್ನು ಮಂಜೂರು ಮಾಡಬೇಕು. ಆಮೆ ಗತಿಯಲ್ಲಿ ಸಾಗುತ್ತಿರುವ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ರೈಲ್ವೆ ಯೋಜನೆಗಳ ಸಂಪೂರ್ಣ ಮೊತ್ತ ಭರಿಸಬೇಕು ಹಾಗೂ ಭೂಸ್ವಾಧೀನ ವೆಚ್ಚದಲ್ಲಿ ಶೇ 50ರಷ್ಟು ನೀಡಬೇಕು’ ಎಂದು ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಕೇಂದ್ರ ಸರ್ಕಾರದ ಬಜೆಟ್‌ಗೆ ಸಂಬಂಧಿಸಿ ರಾಜ್ಯ ಸರ್ಕಾರಗಳೊಂದಿಗಿನ ಸಮಾಲೋಚನೆ ಜೈಸಲ್ಮೇರ್‌ನಲ್ಲಿ ಶುಕ್ರವಾರ ಜರುಗಿತು. ರಾಜ್ಯ ಸರ್ಕಾರದ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಭಾಗಿಯಾಗಿ ರಾಜ್ಯದ ಬೇಡಿಕೆಗಳನ್ನು ಮುಂದಿಟ್ಟರು. ಪ್ರಸ್ತುತ ರಾಜ್ಯದ ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರ ಉಚಿತವಾಗಿ ಭೂಮಿ ನೀಡುತ್ತಿದೆ ಹಾಗೂ ಯೋಜನೆಯ ಶೇ 50ರಷ್ಟು ಮೊತ್ತ ಭರಿಸುತ್ತಿದೆ.



ಕೃಷ್ಣ ಬೈರೇಗೌಡ

ಸಾಮಾಜಿಕ ಭದ್ರತಾ ಯೋಜನೆಯಡಿ ರಾಜ್ಯದಲ್ಲಿ 68.66 ಲಕ್ಷ ಫಲಾನುಭವಿಗಳಿದ್ದಾರೆ. ಕೇಂದ್ರ ಸರ್ಕಾರದ ನೆರವು ಕೇವಲ 14.44 ಲಕ್ಷ ಜನರಿಗೆ ಸಿಗುತ್ತಿದೆ. 2023–24ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಈ ಯೋಜನೆಗಳಿಗೆ ₹10,554 ಕೋಟಿ ಖರ್ಚು ಮಾಡಿತ್ತು. ಅದರಲ್ಲಿ ಕೇಂದ್ರದ ಪಾಲು ₹471 ಕೋಟಿ ಮಾತ್ರ. ಹೆಚ್ಚಿನ ಫಲಾನುಭವಿಗಳಿಗೆ ಕೇಂದ್ರ ನೆರವು ನೀಡಬೇಕು ಹಾಗೂ ಕೇಂದ್ರದ ಪಾಲನ್ನು ಜಾಸ್ತಿ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದಿಂದ 5.94 ಲಕ್ಷ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ಸಿಗಲಿದೆ. ಈ ಯೋಜನೆಗೆ ₹51,148 ಕೋಟಿ ವೆಚ್ಚವಾಗಲಿದೆ. ಈ ಯೋಜನೆಯ ವಿಸ್ತೃತ ಯೋಜನಾ ವರದಿಗೆ ಅನುಮೋದನೆ ನೀಡಬೇಕು ಹಾಗೂ ಅದನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಬೇಕು ಎಂದು ಅವರು ಒತ್ತಾಯಿಸಿದರು.

‘ಕರ್ನಾಟಕದ ವಿದ್ಯುತ್ ಸರಬರಾಜು ಕಂಪನಿಗಳು ತೀವ್ರ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿವೆ. ಈ ಬಿಕ್ಕಟ್ಟು ಪರಿಹರಿಸಲು ಬಡ್ಡಿ ರಹಿತ ಅಥವಾ ಕಡಿಮೆ ಬಡ್ಡಿ ದರದ ಸಾಲವನ್ನು ಕೇಂದ್ರ ಸರ್ಕಾರ ನೀಡಬೇಕು. ಜತೆಗೆ, ವಿಪತ್ತು ನಿರ್ವಹಣೆಗೂ ವಿಶೇಷ ಅನುದಾನ ಒದಗಿಸಬೇಕು’ ಎಂದು ಅವರು ಮನವಿ ಮಾಡಿದರು.

ರಾಜ್ಯದ ಬೇಡಿಕೆಗಳೇನು?

- ಕಲ್ಯಾಣ ಕರ್ನಾಟಕದ ಹಿಂದುಳಿದ ಪ್ರದೇಶ ಮತ್ತು ಜಾಗತಿಕ ಪರಿಸರ ಸೂಕ್ಷ್ಮ ಪ್ರದೇಶವಾದ ಪಶ್ಚಿಮ ಘಟ್ಟಗಳ ಅಭಿವೃದ್ಧಿಗೆ ₹10 ಸಾವಿರ ಕೋಟಿಯ ವಿಶೇಷ ಅನುದಾನ
- ಬರಪೀಡಿತ ಮಧ್ಯ ಕರ್ನಾಟಕಕ್ಕೆ ನೀರು ಒದಗಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಈ ಹಿಂದೆಯೇ ಘೋಷಿಸಿದ್ದ ₹5300 ಕೋಟಿ ಬಿಡುಗಡೆ
- ಮೇಕೆದಾಟು ಮತ್ತು ಮಹದಾಯಿ ಯೋಜನೆಗಳಿಗೆ ಅನುಮೋದನೆ
- 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿರುವ ವಿಶೇಷ ಅನುದಾನ ₹11,495 ಕೋಟಿ ಬಿಡುಗಡೆ
- ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರ ಗೌರವಧನ ₹5,000 ಮತ್ತು ಅಡುಗೆಯವರು ಮತ್ತು ಸಹಾಯಕರಿಗೆ ₹2,000ಕ್ಕೆ ಹೆಚ್ಚಳ
- ಪ್ರಧಾನಮಂತ್ರಿ ಆವಾಜ್ ಯೋಜನೆ ನೆರವನ್ನು ನಗರ ಪ್ರದೇಶದ ಮನೆಗಳಿಗೆ ₹1.5 ಲಕ್ಷದಿಂದ ₹5 ಲಕ್ಷಕ್ಕೆ ಮತ್ತು ಗ್ರಾಮೀಣ ಮನೆಗಳಿಗೆ ₹72000 ರಿಂದ ₹3 ಲಕ್ಷಕ್ಕೆ ಹೆಚ್ಚಳ
- ವೃದ್ಧಾಪ್ಯ, ವಿಧವೆಯರು ಮತ್ತು ವಿಕಲಚೇತನರ ಪಿಂಚಣಿ ಹೆಚ್ಚಿಸಬೇಕು

ಅದಾನಿಗೆ ನೀಡಿದ್ದ ಗುತ್ತಿಗೆ ಪ್ರಕರಣ

ಧಾರಾವಿ ಟೆಂಡರ್: ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ಅಸ್ತು

ಮುಂಬೈ (ಪಿಟಿಐ): ಧಾರಾವಿ ಕೊಳೆಗೇರಿ ಪುನರಾಭಿವೃದ್ಧಿಗೆ ಅದಾನಿ ಸಮೂಹಕ್ಕೆ ಮಹಾರಾಷ್ಟ್ರ ರಾಜ್ಯ ಸರ್ಕಾರ ನೀಡಿದ್ದ ಟೆಂಡರ್ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ಅಮಿತ್ ಬೋರ್ಕರ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ‘ಟೆಂಡರ್ ನೀಡುವಲ್ಲಿ ನಿರಂಕುಶತೆ, ಅಸಮರ್ಪಕತೆ ಅಥವಾ ವಿಕೃತತೆ ಇರುವುದು ಕಂಡುಬಂದಿಲ್ಲ’ ಎಂದು ಹೇಳಿದೆ.

ಧಾರಾವಿ ಪುನರಾಭಿವೃದ್ಧಿ ಯೋಜನೆಯು ಮಹಾರಾಷ್ಟ್ರದಲ್ಲಿ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆ ವೇಳೆ ರಾಜಕೀಯವಾಗಿ ಬಹುಚರ್ಚಿತ ವಿಷಯವಾಗಿತ್ತು. ಬಿಜೆಪಿ ನೇತೃತ್ವದ ಮಹಾಯುತಿ ಮತ್ತು ಕಾಂಗ್ರೆಸ್ ನೇತೃತ್ವದ ಮಹಾ ವಿಕಾಸ ಆಘಾಡಿ ಕೂಟಕ್ಕೆ ಪ್ರತಿಷ್ಠೆಯ ವಿಷಯವಾಗಿತ್ತು.

ಪ್ರಕರಣ ಏನು?: 2018ರಲ್ಲಿ ನಡೆದ ಟೆಂಡರ್‌ನಲ್ಲಿ ಯುಎಇ ಮೂಲದ ಸೆಕ್ಲಿಂಕ್ ಟೆಕ್ನಾಲಜೀಸ್ ಕಂಪನಿಯು ₹7,200 ಕೋಟಿಗೆ ಬಿಡ್ ಸಲ್ಲಿಸಿ, ಅತಿದೊಡ್ಡ ಬಿಡ್ಡರ್ ಆಗಿತ್ತು.

ಆದರೆ, ಸರ್ಕಾರವು 2022ರಲ್ಲಿ ಈ ಟೆಂಡರ್ ರದ್ದುಪಡಿಸಿ ಹೆಚ್ಚುವರಿ ಷರತ್ತುಗಳೊಂದಿಗೆ ಹೊಸ ಟೆಂಡರ್ ಪ್ರಕಟಿಸಿತ್ತು. ₹5,069 ಕೋಟಿ ಮೊತ್ತದ ಈ ಟೆಂಡರ್ ಅದಾನಿ ಸಮೂಹದ ಪಾಲಾಗಿತ್ತು.

ಸರ್ಕಾರವು ಅದಾನಿ ಸಮೂಹಕ್ಕೆ ಅನುಕೂಲ ಕಲ್ಪಿಸಲು ತನಗೆ ಸೇರಬೇಕಿದ್ದ ಟೆಂಡರ್ ಅನ್ನು ರದ್ದುಪಡಿಸಿದೆ ಎಂದು ಸೆಕ್ಲಿಂಕ್ ಟೆಕ್ನಾಲಜೀಸ್ ಕಂಪನಿಯು ಹೈಕೋರ್ಟ್‌ನ ಮೆಟ್ಟಿಲೇರಿತ್ತು.

ಮುಂಬೈನ ಹೃದಯ ಭಾಗದಲ್ಲಿರುವ ಈ ಕೊಳೆಗೇರಿ ಪ್ರದೇಶವು 259 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ.

ಪ್ರಯಾಣ ನಿಷೇಧ ಆತಂಕ: ಕ್ಯಾಂಪಸ್‌ಗೆ ಮರಳಲು ವಿದೇಶಿ ವಿದ್ಯಾರ್ಥಿಗಳಿಗೆ ಸಲಹೆ

ಕಾನ್‌ಕಾರ್ಡ್ (ಅಮೆರಿಕ) (ಎಪಿ): ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಮೊದಲ ಆಡಳಿತದ ಅವಧಿಯಲ್ಲಿ ಮಾಡಿದಂತೆ ಪ್ರಯಾಣ ನಿಷೇಧ ಹೇರಬಹುದೆಂಬ ಕಳವಳದ ಹಿನ್ನೆಲೆಯಲ್ಲಿ ಅಮೆರಿಕದ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಕ್ಯಾಂಪಸ್‌ಗೆ ಮರಳುವಂತೆ ವಿದೇಶಿ ವಿದ್ಯಾರ್ಥಿಗಳಿಗೆ ಸಲಹೆ ನೀಡುತ್ತಿವೆ.

ಟ್ರಂಪ್ ಅವರ ಯೋಜನೆಗಳು ಅನಿಶ್ಚಿತವಾಗಿದ್ದರೂ, ಟ್ರಂಪ್ ತಮ್ಮ ಎರಡನೇ ಅವಧಿಯ ಆಡಳಿತ ಚುಕ್ಕಾಣಿ ಹಿಡಿಯುವ ಮೊದಲು ವಿದೇಶಗಳ ವಿದ್ಯಾರ್ಥಿಗಳು ಕ್ಯಾಂಪಸ್‌ಗೆ ಮರಳುವಂತೆ ಸೂಚನೆ ನೀಡಲಾಗಿದೆ. ಹಲವು ಶಾಲೆಗಳು ಇಂತಹ ಸಲಹೆಗಳನ್ನು ನೀಡಿವೆ.

ಜಿಎಸ್‌ಟಿ ಮಂಡಳಿ ಸಭೆ ಇಂದು

ಆರೋಗ್ಯ, ಜೀವ ವಿಮೆ ಕಂತಿಗೆ ತೆರಿಗೆ ರಿಯಾಯಿತಿ ಘೋಷಣೆ ಸಾಧ್ಯತೆ

ಜೈಸಲ್ಮೇರ್ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿ ಸಭೆಯು ಶನಿವಾರ ನಡೆಯಲಿದೆ.

ಆರೋಗ್ಯ ಮತ್ತು ಜೀವ ವಿಮೆ ಕಂತಿನ ಮೇಲೆ ವಿಧಿಸುತ್ತಿರುವ ಶೇ 18ರಷ್ಟು ಜಿಎಸ್‌ಟಿ ಪರಿಷ್ಕರಣೆ ಸಂಬಂಧ ರಚಿಸಿದ್ದ ಸಚಿವರ ಸಮಿತಿಯು, ಅವಧಿ ವಿಮೆ (ಟರ್ಮ್ ಲೈಫ್ ಇನ್ಶೂರೆನ್ಸ್) ಮತ್ತು ಹಿರಿಯ ನಾಗರಿಕರ ಆರೋಗ್ಯ ವಿಮೆ ಕಂತಿನ ಮೇಲಿನ ತೆರಿಗೆ ಹಿಂಪಡೆಯುವ ಕುರಿತು ಶಿಫಾರಸು ಮಾಡಿದೆ.

ಹಿರಿಯ ನಾಗರಿಕರನ್ನು ಹೊರತುಪಡಿಸಿ ವೈಯಕ್ತಿಕ ವಿಮೆದಾರರ ₹5 ಲಕ್ಷದೊಳಗಿನ ಆರೋಗ್ಯ ವಿಮಾ ಕಂತಿನ ಮೇಲೆ ತೆರಿಗೆ ವಿನಾಯಿತಿ ನೀಡಲು ವರದಿ ಸಲ್ಲಿಸಿದೆ. ಈ ಶಿಫಾರಸುಗಳಿಗೆ ಸಭೆಯು ಅಂಕಿತ ಹಾಕುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಅಲ್ಲದೆ ದುಬಾರಿ ಕೈಗಡಿಯಾರ, ಶೂ ಮತ್ತು ಉಡುಪುಗಳ ಮೇಲಿನ ಜಿಎಸ್‌ಟಿ ಹೆಚ್ಚಿಸುವಂತೆ ಸಮಿತಿಯು ಶಿಫಾರಸು ಮಾಡಿದೆ. ಇದಕ್ಕೂ ಒಪ್ಪಿಗೆ ಸೂಚಿಸುವ ಸಾಧ್ಯತೆಯಿದೆ ಎಂದು ಹೇಳಿವೆ.

ಪ್ರಸ್ತುತ ಆನ್‌ಲೈನ್ ಮೂಲಕ ಆಹಾರ ಪೂರೈಸುವ ಸ್ವಿಗ್ಗಿ ಮತ್ತು ಜೊಮಾಟೊದ ಆಹಾರ ವಿತರಣೆ ಮೇಲೆ ಸದ್ಯ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದನ್ನು ಶೇ 5ಕ್ಕೆ ಕಡಿತಗೊಳಿಸುವ ಬಗ್ಗೆ ಸಭೆಯು ಅಂತಿಮ ತೀರ್ಮಾನ ಪ್ರಕಟಿಸುವ ನಿರೀಕ್ಷೆಯಿದೆ. ಇದರಿಂದ ಗ್ರಾಹಕರ ಮೇಲಿನ ಹೊರೆ ಕಡಿಮೆಯಾಗಲಿದೆ.

ಬಳಕೆ ಮಾಡಿದ ವಿದ್ಯುತ್‌ಚಾಲಿತ ಕಾರುಗಳ ಮಾರಾಟದ ಮೇಲೆ ಶೇ 18ರಷ್ಟು ತೆರಿಗೆ ವಿಧಿಸುವ ಬಗ್ಗೆ ರಾಜ್ಯ ಮತ್ತು ಕೇಂದ್ರದ ಅಧಿಕಾರಿಗಳನ್ನು ಒಳಗೊಂಡ ಸಮಿತಿಯು ಸಭೆಯಲ್ಲಿ ಪ್ರಸ್ತಾವ ಮಂಡಿಸುವ ಸಾಧ್ಯತೆಯಿದೆ. ಅಲ್ಲದೆ, ಸಣ್ಣ ಪೆಟ್ರೋಲ್ ಮತ್ತು ಡೀಸೆಲ್ ವಾಹನಗಳ ಮಾರಾಟದ ಮೇಲೆ ಸದ್ಯ ವಿಧಿಸುತ್ತಿರುವ ಶೇ 12ರಷ್ಟು ಜಿಎಸ್‌ಟಿಯನ್ನು ಶೇ 18ಕ್ಕೆ ಹೆಚ್ಚಿಸುವ ಬಗ್ಗೆಯೂ ಪ್ರಸ್ತಾಪಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಅವಧಿ ವಿಸ್ತರಣೆ ಸಾಧ್ಯತೆ

ಜಿಎಸ್‌ಟಿ ಪರಿಹಾರ ಸೆಸ್‌ಗೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ಮಂಡಳಿಯು ಸಚಿವರ ಸಮಿತಿ ರಚಿಸಿದೆ. ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರ ನೇತೃತ್ವದಲ್ಲಿ 10 ಸಚಿವರು ಈ ಸಮಿತಿಯಲ್ಲಿ ಇದ್ದಾರೆ.

ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು ಹಾಗೂ ಐಷಾರಾಮಿ ಸರಕುಗಳ ಮೇಲೆ ಜಿಎಸ್‌ಟಿ ಅಡಿ ವಿಧಿಸುವ ಪರಿಹಾರ ಸೆಸ್ ಅವಧಿಯು 2026ರ ಮಾರ್ಚ್‌ಗೆ ಮುಕ್ತಾಯವಾಗುತ್ತದೆ. ಅಂತಿಮ ವರದಿ ಸಲ್ಲಿಕೆ ಅವಧಿಯನ್ನು ಮತ್ತೆ ಆರು ತಿಂಗಳವರೆಗೆ ವಿಸ್ತರಿಸುವ ಬಗ್ಗೆ ಸಚಿವರ ಸಮಿತಿಯು ಸಭೆಯಲ್ಲಿ ಮನವಿ ಸಲ್ಲಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಜಿಎಸ್‌ಟಿ ವ್ಯಾಪ್ತಿಗೆ ವಿಮಾನ ಇಂಧನ ಸೇರ್ಪಡೆಗೊಳಿಸುವ ನಿರೀಕ್ಷೆ

ಕಚ್ಚಾ ತೈಲ, ನೈಸರ್ಗಿಕ ಅನಿಲ, ಪೆಟ್ರೋಲ್, ಡೀಸೆಲ್ ಮತ್ತು ವಿಮಾನ ಇಂಧನವನ್ನು (ಎಟಿಎಫ್) ಜಿಎಸ್‌ಟಿ ಕಾಯ್ದೆಯಡಿ ಸೇರ್ಪಡೆಗೊಳಿಸಲಾಗಿದೆ. ಆದರೆ, ಇವುಗಳ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತಿಲ್ಲ.

ವಿಮಾನ ಇಂಧನವನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಬಗ್ಗೆ ಸಭೆಯು ಚರ್ಚಿಸುವ ನಿರೀಕ್ಷೆಯಿದೆ ಎಂದು ಹೇಳಲಾಗಿದೆ. 148 ಸರಕುಗಳ ಮೇಲಿನ ಜಿಎಸ್‌ಟಿ ಪರಿಷ್ಕರಣೆ ಬಗ್ಗೆಯೂ ಚರ್ಚಿಸುವ ನಿರೀಕ್ಷೆಯಿದೆ.



ಎ.ಶಿವಮಣಿ ಹಾಗೂ ಇತರ ಕಲಾವಿದರು ಡ್ರಮ್ ಬಾರಿಸುವ ಮೂಲಕ ಜಾಕಿರ್ ಹುಸೇನ್ ಅವರಿಗೆ ಅಂತಿಮ ನಮನ ಸಲ್ಲಿಸಿದರು —ಪಿಟಿಐ ಚಿತ್ರ

ಜಾಕಿರ್ ಹುಸೇನ್ ಅಂತ್ಯಕ್ರಿಯೆ

ನ್ಯೂಯಾರ್ಕ್ (ಪಿಟಿಐ): ವಿಶ್ವವಿಖ್ಯಾತ ತಬಲಾ ವಾದಕ ಜಾಕಿರ್ ಹುಸೇನ್ ಅವರ ಅಂತ್ಯಕ್ರಿಯೆ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಗುರುವಾರ ನೆರವೇರಿತು.

ಭಾರತದ ಪ್ರಸಿದ್ಧ ಶಾಸ್ತ್ರೀಯ ಸಂಗೀತಗಾರರಲ್ಲಿ ಒಬ್ಬರಾದ ಹುಸೇನ್ (73) ಸೋಮವಾರ ನಿಧನರಾಗಿದ್ದರು. ಶ್ವಾಸಕೋಶ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಅವರು ಸ್ಯಾನ್ ಫ್ರಾನ್ಸಿಸ್ಕೊದ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

ಸ್ಯಾನ್ ಫ್ರಾನ್ಸಿಸ್ಕೊದ ಫೆರ್ನ್‌ವುಡ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖ್ಯಾತ ಡ್ರಮ್ಮರ್ ಎ.ಶಿವಮಣಿ ಮತ್ತು ಇತರ ಕಲಾವಿದರು ಸ್ಮಶಾನದ ಅಲ್ಪ ದೂರದಲ್ಲಿ ಡ್ರಮ್ ಬಾರಿಸುವ ಮೂಲಕ ತಬಲಾ ಮಾಂತ್ರಿಕನಿಗೆ ಅಂತಿಮ ಗೌರವ ಸಲ್ಲಿಸಿದರು. ಜಾಕಿರ್ ಅವರ ನೂರಾರು ಅಭಿಮಾನಿಗಳು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡರು.

ಜಾಕಿರ್ ಅವರ ಅಂತಿಮ ದರ್ಶನ ಪಡೆಯಲು ಅಮೆರಿಕಕ್ಕೆ ತೆರಳುವುದಾಗಿ ಶಿವಮಣಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದರು.

ನಾಲ್ಕು ಗ್ರ್ಯಾಮಿ ಪುರಸ್ಕಾರಗಳನ್ನು ಪಡೆದಿರುವ ಹುಸೇನ್ ಅವರಿಗೆ ಪತ್ನಿ ಆಂಟೋನಿಯಾ ಮಿನೆಕೋಲಾ, ಪುತ್ರಿಯರಾದ ಅನಿಸಾ ಖುರೇಷಿ ಮತ್ತು ಇಸಾಬೆಲ್ಲಾ ಖುರೇಷಿ ಇದ್ದಾರೆ.

5ನೇ ದಿನವೂ ಸೂಚ್ಯಂಕ ಕುಸಿತ

ಮುಂಬೈ (ಪಿಟಿಐ): ಸತತ ಐದನೇ ದಿನವಾದ ಶುಕ್ರವಾರವೂ ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿದಿದ್ದು, ಸೂಚ್ಯಂಕಗಳು ಶೇ 1.5ರಷ್ಟು ಕುಸಿತ ಕಂಡಿವೆ.



ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿದರ ಕಡಿತಗೊಳಿಸಿದ್ದರಿಂದ ಜಾಗತಿಕ ಮಟ್ಟದಲ್ಲಿ ಷೇರುಪೇಟೆಗಳು ಕುಸಿತ ಕಂಡಿವೆ. ಇದು ದೇಶೀಯ ಷೇರುಪೇಟೆಯ ಕುಸಿತಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕಳೆದ ಐದು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹18.43 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,176 ಅಂಶ ಇಳಿಕೆ ಕಂಡು 78,041 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 364 ಅಂಶ ಇಳಿಕೆ ಕಂಡು 23,587 ಅಂಶಗಳಲ್ಲಿ ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟೆಕ್ ಮಹೀಂದ್ರ, ಇಂಡಸ್ ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಸುದ್ದಿ 2 ನಿಮಿಷ

ದತ್ತಾಂಶ–ಕೃತಕ ಬುದ್ಧಿಮತ್ತೆ ಲ್ಯಾಬ್ ತೆರೆಯಲು ನಿರ್ಧಾರ

ನವದೆಹಲಿ (ಪಿಟಿಐ): ದೇಶದ ಟೈರ್ 2 ಮತ್ತು ಟೈರ್ 3 ನಗರಗಳಲ್ಲಿ ದತ್ತಾಂಶ ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ಲ್ಯಾಬ್ ತೆರೆಯಲು ನಿರ್ಧರಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಪ್ರಸ್ತಾವಗಳನ್ನು ಆಹ್ವಾನಿಸಲಾಗಿದೆ ಎಂದು ಕೇಂದ್ರ ಸರ್ಕಾರವು, ಶುಕ್ರವಾರ ಸಂಸತ್‌ಗೆ ತಿಳಿಸಿದೆ.

ಇಂಡಿಯಾ ಎ.ಐ ಮಿಷನ್ ಮೂಲಕ ರಾಷ್ಟ್ರೀಯ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಸಹಭಾಗಿತ್ವದಡಿ 27 ಲ್ಯಾಬ್‌ಗಳನ್ನು ತೆರೆಯಲಾಗುವುದು ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಖಾತೆಯ ರಾಜ್ಯ ಸಚಿವ ಜಿತಿನ್ ಪ್ರಸಾದ ರಾಜ್ಯಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಈ ನಗರಗಳ ವ್ಯಾಪ್ತಿಯಲ್ಲಿರುವ ಪ್ರಮುಖ ಕೈಗಾರಿಕಾ ತರಬೇತಿ ಕೇಂದ್ರ/ಪಾಲಿಟೆಕ್ನಿಕ್‌ಗಳ ಪಟ್ಟಿ ಸಲ್ಲಿಸುವಂತೆ ಕೋರಲಾಗಿದೆ ಎಂದು ಹೇಳಿದ್ದಾರೆ.

ಕೌಶಲಾಭಿವೃದ್ಧಿ ದೃಷ್ಟಿಯಿಂದ ಇಂಡಿಯಾ ಎ.ಐ ಮಿಷನ್‌ನಡಿ ಈ ದತ್ತಾಂಶ ಮತ್ತು ಎ.ಐ ಲ್ಯಾಬ್ ತೆರೆಯಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಅನುಮೋದಿತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ 400 ಬಿ.ಟೆಕ್ ಮತ್ತು 500 ಎಂ.ಟೆಕ್ ವಿದ್ಯಾರ್ಥಿಗಳಿಗೆ ಇಂಡಿಯಾ ಎ.ಐ ಫೆಲೋಶಿಪ್ ನೀಡಲಾಗುತ್ತಿದೆ ಎಂದು ವಿವರಿಸಿದ್ದಾರೆ.



ಹೋಂಡಾ ಕಾರು ದರ ಏರಿಕೆ

ನವದೆಹಲಿ (ಪಿಟಿಐ): ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯು ಜನವರಿಯಿಂದ ತನ್ನ ಎಲ್ಲಾ ಮಾದರಿಯ ಕಾರುಗಳ ಬೆಲೆಯನ್ನು ಶೇ 2ರಷ್ಟು ಹೆಚ್ಚಿಸಲು ನಿರ್ಧರಿಸಿದೆ.

ಉತ್ಪಾದನೆ ಮತ್ತು ಸಾಗಣೆ ವೆಚ್ಚದಲ್ಲಿ ಏರಿಕೆಯಾಗಿದೆ. ಇದನ್ನು ಸರಿದೂಗಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಇದು ಗ್ರಾಹಕರ ಮೇಲೆ ಅಲ್ಪ ಪ್ರಮಾಣದಲ್ಲಿ ಪರಿಣಾಮ ಬೀರಲಿದೆ ಎಂದು ಕಂಪನಿಯ ಉಪಾಧ್ಯಕ್ಷ (ಮಾರುಕಟ್ಟೆ ಮತ್ತು ಮಾರಾಟ) ಕುನಾಲ್ ಬೆಹ್ಲ್ ತಿಳಿಸಿದ್ದಾರೆ.

ಈಗಾಗಲೇ ಮಾರುತಿ ಸುಜುಕಿ, ಹುಂಡೈ ಮತ್ತು ಟಾಟಾ ಮೋಟರ್ಸ್ ಹೊಸ ವರ್ಷದಿಂದ ಕಾರುಗಳ ಬೆಲೆ ಏರಿಕೆ ಮಾಡುವುದಾಗಿ ಪ್ರಕಟಿಸಿವೆ.

ಕೊಬ್ಬರಿ ಎಂಎಸ್‌ಪಿ ₹420 ಹೆಚ್ಚಳ

ನವದೆಹಲಿ (ಪಿಟಿಐ): ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಶುಕ್ರವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು 2025ನೇ ಋತುವಿಗೆ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಹೆಚ್ಚಿಸಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂವಹನ ಸಚಿವ ಅಶ್ವಿನಿ ವೈಷ್ಣವ್, ‘ಪ್ರತಿ ಕ್ವಿಂಟಲ್ ಉಂಡೆ ಕೊಬ್ಬರಿಗೆ ₹100 ಹಾಗೂ ಹೋಳಾದ (ಮಿಲ್ಲಿಂಗ್) ಕೊಬ್ಬರಿಗೆ ₹420 ದರ ಹೆಚ್ಚಿಸಲಾಗಿದೆ. ಕ್ವಿಂಟಲ್ ಉಂಡೆ ಕೊಬ್ಬರಿಗೆ ₹12,100 ಸಾವಿರ ಹಾಗೂ ಹೋಳಾದ ಕೊಬ್ಬರಿಗೆ ₹11,582 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ’ ಎಂದು ವಿವರಿಸಿದರು.



ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ (ಸಿಎಸಿಪಿ) ಶಿಫಾರಸು ಅನ್ವಯ ಈ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಇದಕ್ಕಾಗಿ ₹855 ಕೋಟಿ ಅನುದಾನವನ್ನು ಮೀಸಲಿಡಲಾಗಿದೆ. ಉತ್ಪಾದನಾ ವೆಚ್ಚಕ್ಕಿಂತಲೂ ಶೇ 50ರಷ್ಟು ಹೆಚ್ಚು ಎಂಎಸ್‌ಪಿ ನಿಗದಿಪಡಿಸಲಾಗಿದೆ ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಹಾಗೂ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟವು (ನಾಫೆಡ್) ಕೊಬ್ಬರಿ ಖರೀದಿಸುವ ಕೇಂದ್ರದ ನೋಡಲ್ ಏಜೆನ್ಸಿಗಳಾಗಿವೆ. ಈ ಏಜೆನ್ಸಿಗಳು ಬೆಲೆ ಪ್ರೋತ್ಸಾಹ ಯೋಜನೆಯಡಿ ಕೊಬ್ಬರಿ ಮತ್ತು ಸಿಪ್ಪೆ ಸುಲಿದ ತೆಂಗಿನ ಕಾಯಿಯನ್ನೂ ಖರೀದಿಸುತ್ತವೆ.

ಇಡೀ ದೇಶದ ಕೊಬ್ಬರಿ ಉತ್ಪಾದನೆ ಪೈಕಿ ಕರ್ನಾಟಕದ ಪಾಲು ಶೇ 32.7ರಷ್ಟಿದೆ. ತಮಿಳುನಾಡು ಶೇ25.7, ಕೇರಳ ಶೇ25.4 ಹಾಗೂ ಆಂಧ್ರ ಪ್ರದೇಶವು ಶೇ 7.7ರಷ್ಟು ಪಾಲು ಹೊಂದಿವೆ.

ಎಂಎಸ್‌ಪಿ ಹೆಚ್ಚಳವು ರೈತರ ಆದಾಯ ಹೆಚ್ಚಳಕ್ಕೆ ನೆರವಾಗಲಿದೆ. ದೇಶೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿನ ಬೇಡಿಕೆಗೆ ಅನುಗುಣವಾಗಿ ಕೊಬ್ಬರಿ ಉತ್ಪಾದನೆಯನ್ನು ಮತ್ತಷ್ಟು ಹೆಚ್ಚಳಕ್ಕೆ ಸಹಕಾರಿಯಾಗಲಿದೆ ಎಂದು ಸರ್ಕಾರ ಹೇಳಿದೆ.

ದೇಶದಲ್ಲಿ ಕೊಬ್ಬರಿ ಋತು ಜನವರಿಯಿಂದ ಆರಂಭವಾಗಲಿದ್ದು, ಏಪ್ರಿಲ್‌ವರೆಗೆ ಇರಲಿದೆ.

ಪಾಕ್‌ನ ಅತ್ಯಾಧುನಿಕ ಕ್ಷಿಪಣಿ ಯೋಜನೆ: ಅಮೆರಿಕ ಕಳವಳ

ವಾಷಿಂಗ್ಟನ್ (ಪಿಟಿಐ): ಪಾಕಿಸ್ತಾನ ಅಭಿವೃದ್ಧಿಪಡಿಸುತ್ತಿರುವ ಅತ್ಯಾಧುನಿಕ ಕ್ಷಿಪಣಿ ತಂತ್ರಜ್ಞಾನ ಯೋಜನೆ ಬಗ್ಗೆ ಅಮೆರಿಕ ಕಳವಳ ವ್ಯಕ್ತಪಡಿಸಿದೆ.

ಈ ಯೋಜನೆಯು ಯಶಸ್ವಿಯಾದರೆ, ಬ್ಯಾಲಿಸ್ಟಿಕ್ ಕ್ಷಿಪಣಿಗಳು ದಕ್ಷಿಣ ಏಷ್ಯಾದ ಆಚೆಗೂ ದಾಳಿ ನಡೆಸುವ ಸಾಮರ್ಥ್ಯವನ್ನು ಹೊಂದಲಿವೆ. ಇದರಿಂದ ಅಮೆರಿಕಕ್ಕೂ ಬೆದರಿಕೆ ಒಡ್ಡಬಹುದಾಗಿದೆ ಎಂದಿದೆ.

ಕ್ಷಿಪಣಿ ಯೋಜನೆಯ ಜವಾಬ್ದಾರಿಯನ್ನು ಹೊಂದಿರುವ ಇಸ್ಲಾಮಾಬಾದ್ ಮೂಲದ ರಾಷ್ಟ್ರೀಯ ಅಭಿವೃದ್ಧಿ ನಿಗಮವು ಅವಶ್ಯಕ ವಸ್ತುಗಳ ಸ್ವಾಧೀನಕ್ಕೆ ಮುಂದಾಗಿದೆ. ಇದರಿಂದಾಗಿ ಕೆಲವು ಸಂಸ್ಥೆಗಳ ಮೇಲೆ ನಿರ್ಬಂಧ ವಿಧಿಸಲಾಗಿದೆ ಎಂದು ಅಮೆರಿಕದ ಪ್ರಧಾನ ಉಪರಾಷ್ಟ್ರೀಯ ಭದ್ರತಾ ಸಲಹೆಗಾರ ಜಾನ್ ಫೈನರ್ ತಿಳಿಸಿದ್ದಾರೆ. ಪಾಕಿಸ್ತಾನದ ಬ್ಯಾಲಿಸ್ಟಿಕ್ ಕ್ಷಿಪಣಿ ಕಾರ್ಯಕ್ರಮಕ್ಕೆ ಕೊಡುಗೆ ನೀಡಿದ ಆರೋಪದ ಮೇಲೆ ನಾಲ್ಕು ಸಂಸ್ಥೆಗಳ ಮೇಲೆ ಅಮೆರಿಕ ನಿರ್ಬಂಧ ವಿಧಿಸಿದ ಬಳಿಕ ಉನ್ನತ ಅಧಿಕಾರಿಯೊಬ್ಬರು ಈ ಹೇಳಿಕೆ ನೀಡಿದ್ದಾರೆ.

ಬಾಂಗ್ಲಾ ಹೇಳಿಕೆಗೆ ಆಕ್ಷೇಪ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರ ಸಹಾಯಕ ಮಹಫೂಜ್ ಆಲಂ ನೀಡಿರುವ ವಿವಾದಾತ್ಮಕ ಹೇಳಿಕೆಗೆ ಸಂಬಂಧಿಸಿದಂತೆ ಭಾರತವು ತನ್ನ ತೀವ್ರ ಪ್ರತಿಭಟನೆ ದಾಖಲಿಸಿದೆ.



ರಣಧೀರ್ ಜೈಸ್ವಾಲ್

ಶೇಖ್ ಹಸೀನಾ ಅವರು ರಾಜೀನಾಮೆ ನೀಡಲು ಕಾರಣವಾದ ಹೋರಾಟವನ್ನು ಭಾರತವು ಗುರುತಿಸಿ ಮಾನ್ಯ ಮಾಡಬೇಕು ಎಂದು ಆಲಂ ಅವರು ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದರು. ಆ ಬಳಿಕ ತಮ್ಮ ಪೋಸ್ಟ್‌ಅನ್ನು ಅಳಿಸಿ ಹಾಕಿದ್ದರು.

‘ಈ ವಿಷಯಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶಕ್ಕೆ ನಮ್ಮ ಬಲವಾದ ಪ್ರತಿಭಟನೆಯನ್ನು ದಾಖಲಿಸಿದ್ದೇವೆ. ವಿವಾದಿತ ಹೇಳಿಕೆ ನೀಡಿ, ಬಳಿಕ ಪೋಸ್ಟ್‌ಅನ್ನು ತೆಗೆದು ಹಾಕಿರುವುದನ್ನು ನಾವು ಗಮನಿಸಿದ್ದೇವೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

‘ಸಾರ್ವಜನಿಕವಾಗಿ ಹೇಳಿಕೆ ನೀಡುವಾಗ ಸಾಕಷ್ಟು ಎಚ್ಚರದಿಂದ ಇರಬೇಕು ಎಂದು ಸಂಬಂಧಪಟ್ಟ ಎಲ್ಲರಿಗೂ ನೆನಪಿಸಲು ಬಯಸುತ್ತೇವೆ’ ಎಂದಿದ್ದಾರೆ. ‘ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಮತ್ತು ಅಲ್ಲಿನ ಜನರ ಜತೆ ಉತ್ತಮ ಬಾಂಧವ್ಯ ಬೆಳೆಸಲು ಭಾರತವು ಪದೇ ಪದೇ ಆಸಕ್ತಿ ತೋರಿಸಿದೆ. ಇಂತಹ ಹೇಳಿಕೆಗಳು ಸಂಬಂಧಕ್ಕೆ ಧಕ್ಕೆ ಉಂಟುಮಾಡುವ ಸಾಧ್ಯತೆಯಿರುವುದರಿಂದ, ಸಾರ್ವಜನಿಕವಾಗಿ ಮಾತನಾಡುವಾಗ ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಬೇಕು’ ಎಂದು ತಿಳಿಸಿದ್ದಾರೆ.

2,200 ದೌರ್ಜನ್ಯ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ವಿರುದ್ಧ ಬಾಂಗ್ಲಾದೇಶದಲ್ಲಿ ಈ ವರ್ಷದ ಡಿ. 8ರವರೆಗೂ ಒಟ್ಟು 2,200 ಹಿಂಸಾಚಾರದ ಪ್ರಕರಣಗಳು ನಡೆದಿವೆ ಎಂದು ವರದಿಯಾಗಿದೆ.

ಲೋಕಸಭೆಯಲ್ಲಿ ಕೇಳಲಾದ ಪ್ರಶ್ನೆಯೊಂದಕ್ಕೆ ವಿದೇಶಾಂಗ ಸಚಿವಾಲಯವು ಶುಕ್ರವಾರ ಸಲ್ಲಿಸಿದ ಲಿಖಿತ ಉತ್ತರದಲ್ಲಿ ಈ ಅಂಕಿ–ಅಂಶ ಉಲ್ಲೇಖವಾಗಿದೆ.

ಅಲ್ಪಸಂಖ್ಯಾತರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಢಾಕಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬುದು ಭಾರತದ ನಿರೀಕ್ಷೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ವಿದೇಶಾಂಗ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಅವರು ಲಿಖಿತವಾಗಿ ಸಲ್ಲಿಸಿರುವ ಪ್ರತಿಕ್ರಿಯೆಯಲ್ಲಿ ಅಲ್ಪಸಂಖ್ಯಾತರು ಮತ್ತು ಮಾನವ ಹಕ್ಕುಗಳ ಸಂಘಟನೆಗಳ ಅಂಕಿ–ಅಂಶವನ್ನು ಉಲ್ಲೇಖಿಸಿದ್ದಾರೆ.

ದೆಹಲಿ ಪೊಲೀಸ್ ಅಪರಾಧ ವಿಭಾಗಕ್ಕೆ ಪ್ರಕರಣ ವರ್ಗ; ಗಾಯಗೊಂಡ ಸಂಸದರ ಹೇಳಿಕೆ ದಾಖಲು?

ತಳ್ಳಾಟ ಪ್ರಕರಣ: ರಾಹುಲ್ ವಿಚಾರಣೆ ಸಾಧ್ಯತೆ

ನವದೆಹಲಿ (ಪಿಟಿಐ): ಸಂಸತ್ ಆವರಣದಲ್ಲಿ ಗುರುವಾರ ನಡೆದ ತಳ್ಳಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಗಾಯಗೊಂಡಿರುವ ಇಬ್ಬರು ಬಿಜೆಪಿ ಸಂಸದರ ಹೇಳಿಕೆಗಳನ್ನು ದಾಖಲಿಸುವ ಸಾಧ್ಯತೆಯಿದೆ.

ಈ ಘಟನೆ ನಡೆದ ಪ್ರದೇಶದಲ್ಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಒದಗಿಸುವಂತೆ ದೆಹಲಿ ಪೊಲೀಸರು ಸಂಸತ್ತಿನ ಕಾರ್ಯಾಲಯಕ್ಕೆ ಪತ್ರ ಬರೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸರು, ಗಾಯಗೊಂಡಿರುವ ಸಂಸದರಾದ ಪ್ರತಾಪ್ ಸಾರಂಗಿ ಮತ್ತು ಮುಕೇಶ್ ರಜಪೂತ್ ಅವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿ ಹೇಳಿಕೆ ಪಡೆಯಲಿದ್ದಾರೆ. ಅಲ್ಲದೆ ರಾಹುಲ್ ಗಾಂಧಿ ಅವರನ್ನು ಕರೆಸಿ ಪ್ರಶ್ನಿಸುವ ಸಾಧ್ಯತೆಯಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಬಿಜೆಪಿ ಸಂಸದರಾದ ಹೇಮಾಂಗ್ ಜೋಶಿ, ಅನುರಾಗ್ ಠಾಕೂರ್, ಬಾನ್ಸುರಿ ಸ್ವರಾಜ್ ಅವರು ರಾಹುಲ್ ಗಾಂಧಿ ವಿರುದ್ಧ ಪಾರ್ಲಿಮೆಂಟ್ ಸ್ಟ್ರೀಟ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಅಪರಾಧ ವಿಭಾಗಕ್ಕೆ ವರ್ಗ: ಪಾರ್ಲಿಮೆಂಟ್ ಸ್ಟ್ರೀಟ್ ಠಾಣೆಯಲ್ಲಿ ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ದೆಹಲಿ ಪೊಲೀಸರು ಶುಕ್ರವಾರ ಅಪರಾಧ ವಿಭಾಗಕ್ಕೆ ವರ್ಗಾಯಿಸಿದರು. ಈ ಪ್ರಕರಣದ ತನಿಖೆಯನ್ನು ಇನ್ನು ಅಪರಾಧ ವಿಭಾಗದವರು ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆರೋಗ್ಯ ಸ್ಥಿತಿ ಸುಧಾರಣೆ: ತಳ್ಳಾಟದಲ್ಲಿ ಗಾಯಗೊಂಡಿದ್ದ ಇಬ್ಬರು ಸಂಸದರ ಆರೋಗ್ಯ ಸ್ಥಿತಿ ಈಗ ಸುಧಾರಿಸಿದ್ದು, ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯ ಐಸಿಯುನಲ್ಲಿ ನಿಗಾವಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಿಯಾಂಕಾಗೆ ‘1984’ ಕೈಚೀಲ ಉಡುಗೊರೆ



ಪ್ರಿಯಾಂಕಾ ಅವರಿಗೆ ಉಡುಗೊರೆಯಾಗಿ ನೀಡಲು ತಂದ ಕೈಚೀಲವನ್ನು ಅಪರಾಜಿತಾ ಸಾರಂಗಿ ಪ್ರದರ್ಶಿಸಿದರು

ಬಿಜೆಪಿ ಸಂಸದೆ ಅಪರಾಜಿತಾ ಸಾರಂಗಿ ಅವರು ಕೆಂಪು ಬಣ್ಣದಲ್ಲಿ ‘1984’ ಎಂದು ಬರೆದ ಕೈಚೀಲವನ್ನು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಶುಕ್ರವಾರ ಉಡುಗೊರೆಯಾಗಿ ನೀಡಿದ್ದಾರೆ.

ಪ್ಯಾಲೆಸ್ಟೀನ್ ಜನರು ಮತ್ತು ಬಾಂಗ್ಲಾದೇಶದ ಅಲ್ಪ ಸಂಖ್ಯಾತರ ಪರ ಬರಹ ಇದ್ದ ಕೈಚೀಲವನ್ನು ಹಿಡಿದುಕೊಂಡು ಪ್ರಿಯಾಂಕಾ ಅವರು ಸಂಸತ್ತಿಗೆ ಬಂದ ಕೆಲ ದಿನಗಳ ಬಳಿಕ ಈ ಬೆಳವಣಿಗೆ ನಡೆದಿದೆ.

ಭುವನೇಶ್ವರ ಕ್ಷೇತ್ರದ ಸಂಸದೆ ಸಾರಂಗಿ ಅವರು ಸಂಸತ್ ಕಟ್ಟಡದ ಮೊಗಸಾಲೆಯಲ್ಲಿ ಪ್ರಿಯಾಂಕಾ ಅವರಿಗೆ ಈ ಕೈಚೀಲ ನೀಡಿದ್ದಾರೆ. ಸಾರಂಗಿ ಅವರಿಂದ ಕೈಚೀಲ ಪಡೆದ ಪ್ರಿಯಾಂಕಾ ಮರು ಮಾತನಾಡದೆ ಅಲ್ಲಿಂದ ತೆರಳಿದ್ದಾರೆ.

‘ಕೈಚೀಲದಲ್ಲಿ ‘1984ರ ಗಲಭೆ’ ಎಂದು ಬರೆಯಲಾಗಿದೆ. ಪ್ರಿಯಾಂಕಾ ಅವರು ಕೈಚೀಲದಲ್ಲಿ ಬರಹಗಳ ಮೂಲಕ ವಿವಿಧ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಇದು ಕೂಡಾ ಅವರು ಪ್ರಸ್ತಾಪಿಸಬೇಕಾದ ವಿಷಯ’ ಎಂದು ಸಾರಂಗಿ ಹೇಳಿದ್ದಾರೆ.

ಇಸ್ರೇಲ್–ಹಮಾಸ್ ಯುದ್ಧದಲ್ಲಿ ಪ್ಯಾಲೆಸ್ಟೀನ್ ಜನರ ಪರ ಬೆಂಬಲ ಸೂಚಿಸಲು ಪ್ರಿಯಾಂಕಾ ಅವರು ಸೋಮವಾರ ‘ಪ್ಯಾಲೆಸ್ಟೀನ್’ ಎಂದು ಬರೆದಿದ್ದ ಕೈಚೀಲದೊಂದಿಗೆ ಸಂಸತ್ತಿಗೆ ಬಂದಿದ್ದರು.

ಅದರ ಮರುದಿನ ಅವರು ‘ಬಾಂಗ್ಲಾದೇಶ್ ಕೆ ಹಿಂದೂ ಔರ್ ಈಸಾಯಿಯೋಂಕೆ ಸಾಥ್ ಖಡೆ ಹೊ’ (ಬಾಂಗ್ಲಾದೇಶದ ಹಿಂದೂಗಳು ಮತ್ತು ಕ್ರೈಸ್ತರ ಪರವಾಗಿ ನಿಲ್ಲಿ) ಎಂಬ ಬರಹ ಇದ್ದ ಕೈಚೀಲ ಹಿಡಿದುಕೊಂಡಿದ್ದರು.

ಅಂಬೇಡ್ಕರ್ ಬಗ್ಗೆ ಬಿಜೆಪಿ ಭಾವನೆಗಳು ಬಹಿರಂಗವಾಗಿದ್ದರಿಂದ ಅದು ಹೆದರುತ್ತಿದೆ. ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಸರ್ಕಾರದ ಹತಾಶೆಯನ್ನು ತೋರಿಸುತ್ತದೆ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಸಂಸದೆ

ಒಂದು ಚುನಾವಣೆ ಮಸೂದೆ ಜೆಪಿಸಿಗೆ

ಒಂದನೇ ಪುಟದಿಂದ...

ಪ್ರತಿಪಕ್ಷಗಳ ಸದಸ್ಯರ ಗದ್ದಲದ ಮಧ್ಯೆ ನಿರ್ಣಯವನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು. ಬಳಿಕ ಉಭಯ ಸದನಗಳ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಸಮಿತಿಗೆ ವರದಿ ಸಲ್ಲಿಸಲು ಬಜೆಟ್ ಅಧಿವೇಶನದ ಕೊನೆಯ ವಾರದ ಮೊದಲ ದಿನದವರೆಗೆ ಕಾಲಾವಕಾಶ ನೀಡಲಾಗಿದೆ. ಮಾರ್ಚ್ ಅಂತ್ಯ ಅಥವಾ ಏಪ್ರಿಲ್ ಕೊನೆಯ ವಾರದಲ್ಲಿ ವರದಿ ಮಂಡನೆಯಾಗುವ ಸಾಧ್ಯತೆ ಇದೆ.

ಜಂಟಿ ಸಮಿತಿಗೆ ಲೋಕಸಭೆಯ ಆರು ಸದಸ್ಯರನ್ನು ಸೇರಿಸಲಾಗಿದೆ. ಇದರಲ್ಲಿ ಬಿಜೆಪಿಯ ಇಬ್ಬರು, ಎಲ್‌ಜೆಪಿ, ಸಿಪಿಐ(ಎಂ), ಶಿವಸೇನಾ (ಯುಬಿಟಿ) ಹಾಗೂ ಸಮಾಜವಾದಿ ಪಕ್ಷದ ತಲಾ ಒಬ್ಬರು ಸದಸ್ಯರು ಇದ್ದಾರೆ.

ಸಮಿತಿಯಲ್ಲಿ ಎನ್‌ಡಿಎ ಮೈತ್ರಿಕೂಟ 22 ಸಂಸದರನ್ನು ಹೊಂದಿದೆ. ಬಿಜೆಪಿಯ 16, ಜೆಡಿಯು, ಟಿಡಿಪಿ, ಶಿವಸೇನಾ, ಎಲ್‌ಜೆಪಿ, ಜನಸೇನಾ ಹಾಗೂ ಆರ್‌ಎಲ್‌ಡಿಯ ತಲಾ ಒಬ್ಬರು ಸಂಸದರು ಇದ್ದಾರೆ. ‘ಇಂಡಿಯಾ’ ಮೈತ್ರಿಕೂಟದ 15 ಸಂಸದರು ಇದ್ದಾರೆ. ಇದರಲ್ಲಿ ಕಾಂಗ್ರೆಸ್‌ನ 5, ಟಿಎಂಸಿ, ಡಿಎಂಕೆ ಹಾಗೂ ಸಮಾಜವಾದಿ ಪಕ್ಷದ ಇಬ್ಬರು, ಎನ್‌ಸಿಪಿ (ಶರದ್ ಪವಾರ್ ಬಣ), ಎಎಪಿ, ಸಿಪಿಐ(ಎಂ), ಶಿವಸೇನಾ (ಯುಬಿಟಿ) ತಲಾ ಒಬ್ಬರು ಸದಸ್ಯರು ಇದ್ದಾರೆ. ಯಾವುದೇ ಮೈತ್ರಿಕೂಟದಲ್ಲಿ ಗುರುತಿಸಿಕೊಳ್ಳದ ಬಿಜೆಡಿ ಹಾಗೂ ವೈಎಸ್‌ಆರ್ ಕಾಂಗ್ರೆಸ್‌ನ ತಲಾ ಒಬ್ಬರು ಸಂಸದರು ಇದ್ದಾರೆ.

ಎರಡು ಮಸೂದೆಗಳನ್ನು ಲೋಕಸಭೆಯಲ್ಲಿ ಬುಧವಾರ ಮಂಡಿಸಲಾಗಿತ್ತು.

‘ಕೆನಡಾ ‘ಸಾಕ್ಷ್ಯ’ ಒದಗಿಸಿಲ್ಲ’

ನವದೆಹಲಿ (ಪಿಟಿಐ): ಭಾರತದ ವಿರುದ್ಧ ಮಾಡಿರುವ ‘ಗಂಭೀರ ಆರೋಪ’ಗಳನ್ನು ಸಾಬೀತುಪಡಿಸುವಂತಹ ಯಾವುದೇ ಸಾಕ್ಷ್ಯಗಳನ್ನು ಕೆನಡಾ ಇದುವರೆಗೂ ಒದಗಿಸಿಲ್ಲ ಎಂದು ಸರ್ಕಾರವು ಶುಕ್ರವಾರ ಲೋಕಸಭೆಗೆ ತಿಳಿಸಿದೆ.

‘ಈ ವಿಷಯಕ್ಕೆ ಸಂಬಂಧಿಸಿದಂತೆ ಕೆನಡಾದ ಸಾರ್ವಜನಿಕ ನಿರೂಪಣೆಯು ಅದರ ಭಾರತ ವಿರೋಧಿ ಪ್ರತ್ಯೇಕತಾವಾದಿ ಕಾರ್ಯಸೂಚಿಯ ಭಾಗ ಎಂಬಂತೆ ಗೋಚರಿಸುತ್ತಿದೆ’ ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

‘ಅಮೆರಿಕ ಮತ್ತು ಕೆನಡಾದಲ್ಲಿ ನೆಲೆಸಿರುವ, ಅಲ್ಲಿ ಉದ್ಯೋಗದಲ್ಲಿರುವ ಹಾಗೂ ಶಿಕ್ಷಣ ಪಡೆಯುತ್ತಿರುವ ಭಾರತದ ಪ್ರಜೆಗಳ ಸುರಕ್ಷತೆಯು ಸರ್ಕಾರಕ್ಕೆ ಅತ್ಯಂತ ಮಹತ್ವದ್ದಾಗಿದೆ. ಅಮೆರಿಕ ಮತ್ತು ಕೆನಡಾದಲ್ಲಿ ಭಾರತೀಯ ಪ್ರಜೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಸಮಸ್ಯೆಗಳಿಗೆ ತಕ್ಷಣದಲ್ಲೇ ಪರಿಹಾರ ಕಂಡುಕೊಳ್ಳಲಾಗುವುದು’ ಎಂದಿದ್ದಾರೆ.

ಭಾರತದ ಪ್ರಜೆಗಳು ಮತ್ತು ಅಧಿಕಾರಿಗಳನ್ನು ಒಳಗೊಂಡ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಮೆರಿಕ ಹಾಗೂ ಕೆನಡಾದಲ್ಲಿ ನಡೆದಿರುವ ಬೆಳವಣಿಗೆಗಳನ್ನು ಕೇಂದ್ರ ಸರ್ಕಾರವು ಗಮನಿಸುತ್ತಿದೆಯೇ ಎಂದು ಸಂಸದ ಮನೀಶ್ ತಿವಾರಿ ಪ್ರಶ್ನಿಸಿದ್ದರು.

ಗ್ಯಾಸ್ ಟ್ಯಾಂಕರ್ ಅಪಘಾತ: 11 ಸಾವು



ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಅಡುಗೆ ಅನಿಲ ತುಂಬಿದ್ದ ಟ್ಯಾಂಕರ್‌ವೊಂದು ಶುಕ್ರವಾರ ಹಲವು ವಾಹನಗಳಿಗೆ ಗುದ್ದಿದ ಪರಿಣಾಮ ಅಗ್ನಿಅವಘಡ ಸಂಭವಿಸಿ 11 ಜನ ಮೃತಪಟ್ಟಿದ್ದಾರೆ ಮತ್ತು 35 ಮಂದಿ ಗಾಯಗೊಂಡಿದ್ದಾರೆ.

ಜೈಪುರ –ಅಜ್ಮೇರ್ ಹೆದ್ದಾರಿಯಲ್ಲಿ ಶಾಲೆಯೊಂದರ ಮುಂದೆ ಮುಂಜಾನೆ 5.45ಕ್ಕೆ ಅವಘಡ ಸಂಭವಿಸಿದೆ. 30ಕ್ಕೂ ಅಧಿಕ ವಾಹನಗಳು ಬೆಂಕಿಗಾಹುತಿ ಆಗಿವೆ.

‘ಗಾಯಗೊಂಡವರಲ್ಲಿ ಅರ್ಧದಷ್ಟು ಜನರ ಆರೋಗ್ಯ ಸ್ಥಿತಿ ಗಂಭಿರವಾಗಿದೆ’ ಎಂದು ರಾಜಸ್ಥಾನದ ಆರೋಗ್ಯ ಸಚಿವ ಗಜೇಂದ್ರ ಸಿಂಗ್ ಖಿಮ್ಸರ್ ತಿಳಿಸಿದ್ದಾರೆ.

‘ಅಪಘಾತದಲ್ಲಿ ಟ್ಯಾಂಕರ್‌ನ ಪೈಪ್‌ಗೆ ಹಾನಿಯಾದ ಕಾರಣ ಅಡುಗೆ ಅನಿಲ ಸೋರಿಕೆಯಾಗಿ ಅಗ್ನಿ ಅವಘಡ ಸಂಭವಿಸಿದೆ. ಟ್ಯಾಂಕರ್ ಹಿಂದೆ ನಿಂತಿದ್ದ, ಎದುರಿನಿಂದ ಬರುತ್ತಿದ್ದ ಮತ್ತು ಅಪಘಾತಗೊಂಡ ವಾಹನಗಳು ಬೆಂಕಿಗಾಹುತಿಯಾಗಿವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಕ್ಷಣಕ್ಕೆ ವಾಹನದಿಂದ ಹೊರಬರಲಾಗದೆ ಹಲವರು ಸುಟ್ಟುಕರಕಲಾಗಿದ್ದಾರೆ.ಎಲ್ಲವಾಹನಗಳನ್ನುಪರಿಶೀಲಿಸಿದ ಬಳಿಕ ಪೂರ್ಣ ಮಾಹಿತಿ ಸಿಗಲಿದೆ ಎಂದು ಪೊಲೀಸರು ಹೇಳಿದ್ದಾರೆ.

‘ಹೆದ್ದಾರಿ ಬಳಿ ಇರುವ ಪೈಪ್ ಕಾರ್ಖಾನೆಗೂ ಹಾನಿಯಾಗಿದೆ. ಒಂದು ಕಿ.ಮೀ ವ್ಯಾಪ್ತಿಯಲ್ಲಿ ದಟ್ಟ ಹೊಗೆ ಆವರಿಸಿತ್ತು. ಅಗ್ನಿಶಾಮಕ ಪಡೆಯು ಘಟನಾ ಸ್ಥಳಕ್ಕೆ ತಕ್ಷಣಕ್ಕೆ ತಲುಪುವುದು ಕಷ್ಟಕರವಾಯಿತು. ಘಟನೆ ನಡೆದ ಪ್ರದೇಶದಲ್ಲಿ 3 ಪೆಟ್ರೋಲ್ ಬಂಕ್‌ಗಳಿದ್ದು, ಅದೃಷ್ಟವಶಾತ್ ಅವುಗಳಿಗೆ ಹಾನಿಯಾಗಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತರ ಕುಟುಂಬದವರಿಗೆ ತಲಾ ಎರಡು ಲಕ್ಷ ಮತ್ತು ಗಾಯಗೊಂಡವರಿಗೆ ತಲಾ 50 ಸಾವಿರ ಪರಿಹಾರ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ‘ಎಕ್ಸ್’ ಮೂಲಕ ತಿಳಿಸಿದ್ದಾರೆ.

ರಾಜಸ್ಥಾನ ಸರ್ಕಾರವು ಮೃತ ಕುಟುಂಬಕ್ಕೆ ₹5 ಲಕ್ಷ ಮತ್ತು ಗಾಯಗೊಂಡವರಿಗೆ ₹1 ಲಕ್ಷ ಪರಿಹಾರ ಘೋಷಿಸಿದೆ.

ಮುಖ್ಯಾಂಶಗಳು

- ಹಲವು ವಾಹನಗಳಿಗೆ ಗುದ್ದಿದ್ದ ಟ್ಯಾಂಕರ್
- ಅನಿಲ ಸೋರಿಕೆಯಾಗಿ ಅಗ್ನಿ ಅವಘಡ
- ಸುತ್ತ–ಮುತ್ತಲಿದ್ದ ವಾಹನಗಳು ಬೆಂಕಿಗಾಹುತಿ



ಸಂಭ್ರಮ... ಪಟ್ನಾದ ಮಹಿಳಾ ಕಾಲೇಜಿನಲ್ಲಿ ಕ್ರಿಸ್‌ಮಸ್ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಂಟಾ ಕ್ಲಾಸ್ ವೇಷಧಾರಿಯೊಬ್ಬ ವಿದ್ಯಾರ್ಥಿನಿಯರನ್ನು ರಂಜಿಸಿದ ಪಿಟಿಐ ಚಿತ್ರ

ಸಂಭಲ್ ಸಂಸದನಿಗೆ ₹1.91 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ವಿದ್ಯುತ್ ಕಳ್ಳತನ

ಲಖನೌ: ಉತ್ತರ ಪ್ರದೇಶದ ಸಂಭಲ್ ಲೋಕಸಭಾ ಕ್ಷೇತ್ರದ ಸಂಸದ, ಸಮಾಜವಾದಿ ಪಕ್ಷದ ಜಿಯಾ ಉರ್ ರೆಹಮಾನ್ ಬರ್ಕ್ ಅವರಿಗೆ ವಿದ್ಯುತ್ ಇಲಾಖೆಯು ಶುಕ್ರವಾರ ₹1.91 ಕೋಟಿ ದಂಡ ವಿಧಿಸಿದೆ. ಅವರ ಮನೆಯ ವಿದ್ಯುತ್ ಸಂಪರ್ಕವನ್ನೂ ಸ್ಥಗಿತಗೊಳಿಸಿದೆ.

ವಿದ್ಯುತ್ ಇಲಾಖೆಯ ಸಿಬ್ಬಂದಿ ಎರಡು ದಿನಗಳ ಹಿಂದೆ ಜಿಯಾ ಉರ್ ರೆಹಮಾನ್ ಅವರ ಮನೆಯಲ್ಲಿ ಶೋಧ ನಡೆಸಿ, ಮೀಟರ್ ಇಲ್ಲದ ವಿದ್ಯುತ್ ಸಂಪರ್ಕಗಳನ್ನು ಪತ್ತೆ ಮಾಡಿದ್ದರು.

‘ಅವರ ಮನೆಯ ವಿದ್ಯುತ್ ಬಿಲ್ ಹಲವು ತಿಂಗಳುಗಳಿಂದ ಶೂನ್ಯ ಎಂದು ತೋರಿಸುತ್ತಿತ್ತು. ಮನೆಯ ಎರಡು ಸಂಪರ್ಕಗಳಿಗೆ ಒಂದು ವರ್ಷದಲ್ಲಿ ಕೇವಲ ₹14 ಸಾವಿರ ಬಿಲ್ ಮಾತ್ರ ಬಂದಿದೆ’ ಎಂದು ವಿದ್ಯುತ್ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ತಂದೆ ವಿರುದ್ಧ ಪ್ರಕರಣ: ವಿದ್ಯುತ್ ಇಲಾಖೆಯ ಸಿಬ್ಬಂದಿ ಶೋಧ ನಡೆಸಲು ಮನೆಗೆ ಬಂದಾಗ ಸಂಸದರ ತಂದೆ ಹಾಗೂ ಇತರ ಇಬ್ಬರು ಅವರಿಗೆ ಅಡ್ಡಿಪಡಿಸಿದ್ದಾರೆ. ಮಾತ್ರವಲ್ಲ, ‘ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಬೆದರಿಕೆಯನ್ನೂ ಹಾಕಿದ್ದಾರೆ. ಈ ಸಂಬಂಧ ಮೂವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಒತ್ತುವರಿ ತೆರವು: ದೀಪಾ ಸರಾಯ್ ಪ್ರದೇಶದಲ್ಲಿರುವ ಜಿಯಾ ಉರ್ ರೆಹಮಾನ್ ಅವರ ಮನೆಯ ಮೆಟ್ಟಿಲುಗಳನ್ನು ಅಧಿಕಾರಿಗಳು ಶುಕ್ರವಾರ ಬುಲ್ಡೋಜರ್ ಬಳಸಿ ತೆರವುಗೊಳಿಸಿದರು. ಮೆಟ್ಟಿಲುಗಳನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಿರುವುದು ಕಂಡುಬಂದ ಕಾರಣ ಜಿಲ್ಲಾಡಳಿತವು ಈ ಕ್ರಮ ಕೈಗೊಂಡಿದೆ.

ಸಚಿವ ಸ್ಥಾನದಲ್ಲಿ ಮುಂದುವರಿದ ಸೆಂಥಿಲ್ ಬಾಲಾಜಿ

ಸುಪ್ರೀಂ ಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ



ನವದೆಹಲಿ: ‘ಉದ್ಯೋಗಕ್ಕಾಗಿ ಹಣ’ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ವಿಚಾರಣೆ ನಡೆಯುತ್ತಿರುವಂತೆಯೇ ಡಿಎಂಕೆ ನಾಯಕ ವಿ. ಸೆಂಥಿಲ್ ಬಾಲಾಜಿ ಅವರು ಸಚಿವ ಸ್ಥಾನದಲ್ಲಿ ಮುಂದುವರಿದಿರುವುದಕ್ಕೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

‘ಒಬ್ಬ ವ್ಯಕ್ತಿಯು ಜಾಮೀನಿನಲ್ಲಿ ಬಿಡುಗಡೆಯಾದ ತಕ್ಷಣವೇ ಸಚಿರಾಗುತ್ತಾರೆ ಎಂದಾದರೆ, ಇದರಲ್ಲಿ ಏನೋ ಭಾರಿ ತಪ್ಪು ಇದೆ’ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರನ್ನೊಳಗೊಂಡ ವಿಭಾಗೀಯ ಪೀಠ ಶುಕ್ರವಾರ ಹೇಳಿದೆ.

ಈ ಪ್ರಕರಣದಲ್ಲಿ ಎಷ್ಟು ಸಾಕ್ಷಿಗಳ ವಿಚಾರಣೆ ಬಾಕಿಯಿದೆ ಎಂಬ ಬಗ್ಗೆ ಸ್ಪಷ್ಟನೆ ನೀಡುವಂತೆ ಪೀಠವು ತಮಿಳುನಾಡು ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು. ಒಟ್ಟು ಎಷ್ಟು ಮಂದಿ ಸಂತ್ರಸ್ತರಿದ್ದಾರೆ ಎಂಬ ಮಾಹಿತಿ ನೀಡುವಂತೆ ತಮಿಳುನಾಡು ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರಿಗೆ ಸೂಚಿಸಿತು.

‘ಪ್ರಕರಣದ ಬಹುತೇಕ ಸಾಕ್ಷಿಗಳು ಸರ್ಕಾರಿ ಅಧಿಕಾರಿಗಳಾಗಿದ್ದಾರೆ. ಸಾಮಾನ್ಯ ಜನರು ಇಲ್ಲಿ ಸಂತ್ರಸ್ತರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆರೋಪಿ ಸ್ಥಾನದಲ್ಲಿರುವವರು ಸಚಿವ ಸ್ಥಾನದಲ್ಲಿ ಮುಂದುವರಿದರೆ ಸಾಕ್ಷಿಗಳು ಎಷ್ಟರ ಮಟ್ಟಿಗೆ ಸ್ವತಂತ್ರರಿರುತ್ತಾರೆ’ ಎಂದು ಪ್ರಶ್ನಿಸಿದ ಪೀಠ ಮುಂದಿನ ವಿಚಾರಣೆಯನ್ನು ಜ.15ಕ್ಕೆ ನಿಗದಿಪಡಿಸಿತು.

‘ಈ ಪ್ರಕರಣದ ಬಹುತೇಕ ಪ್ರಾಸಿಕ್ಯೂಷನ್ ಸಾಕ್ಷಿಗಳು ಸರ್ಕಾರಿ ಅಧಿಕಾರಿಗಳಾಗಿದ್ದಾರೆ ಮತ್ತು ಪ್ರತಿವಾದಿ ಸಚಿವರು ಮೂರು ಖಾತೆಗಳನ್ನು ಹೊಂದಿದ್ದಾರೆ. ಸಚಿವರಿಗೆ ಜಾಮೀನು ಮಂಜೂರು ಮಾಡಿರುವುದರಿಂದ ಸಾಕ್ಷಿಗಳಲ್ಲಿ ಒಬ್ಬರು ಭಯದಿಂದ ವಿಚಾರಣೆಗೆ ಹಾಜರಾಗಲು ವಿಫಲರಾಗಿದ್ದಾರೆ’ ಎಂದು ಸಂತ್ರಸ್ತರೊಬ್ಬರ ಪರ ಹಾಜರಿದ್ದ ಹಿರಿಯ ವಕೀಲ ಗೋಪಾಲ ಶಂಕರನಾರಾಯಣ ಅವರು ಪೀಠಕ್ಕೆ ತಿಳಿಸಿದರು.

ತಮಿಳುನಾಡಿನ ಸಚಿವ ಸೆಂಥಿಲ್ ಬಾಲಾಜಿ ಅವರಿಗೆ ಜಾಮೀನು ಮಂಜೂರು ಮಾಡಿ ನೀಡಿದ್ದ ಆದೇಶವನ್ನು ಹಿಂಪಡೆಯುವಂತೆ ಜಾರಿ ನಿರ್ದೇಶನಾಲಯವು ಕಳೆದ ವಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಮನವಿ ಮಾಡಿತ್ತು.

ಓಂ ಪ್ರಕಾಶ್ ಚೌಟಾಲಾ ನಿಧನ



ಚೌಟಾಲಾ

ಗುರುಗ್ರಾಮ (ಪಿಟಿಐ): ಭಾರತೀಯ ರಾಷ್ಟ್ರೀಯ ಲೋಕದಳದ ಅಧ್ಯಕ್ಷ ಮತ್ತು ಹರಿಯಾಣದಲ್ಲಿ ಐದು ಬಾರಿ ಮುಖ್ಯಮಂತ್ರಿಯಾಗಿದ್ದ ಓಂ ಪ್ರಕಾಶ್ ಚೌಟಾಲಾ (89) ಅವರು ಶುಕ್ರವಾರ ನಿಧನರಾದರು.

ಚೌಟಾಲಾ ಅವರಿಗೆ ಮನೆಯಲ್ಲಿ ಹೃದಯ ಸ್ತಂಭನವಾಯಿತು. ಕೂಡಲೇ ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಉಳಿಸಿಕೊಳ್ಳಲು ಆಗಲಿಲ್ಲ ಎಂದು ಪಕ್ಷದ ವಕ್ತಾರರು ತಿಳಿಸಿದ್ದಾರೆ.

ಮೇದಾಂತ ಆಸ್ಪತ್ರೆಯಲ್ಲಿ ಮಧ್ಯಾಹ್ನ 12 ಗಂಟೆಗೆ ಅವರು ಕೊನೆಯುಸಿರೆಳೆದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಚೌಟಾಲಾ ಅವರು ಮಾಜಿ ಉಪ ಪ್ರಧಾನಿ ದಿವಂಗತ ದೇವಿ ಲಾಲ್ ಅವರ ಮಗ.

ಚೌಟಾಲಾ ಅವರಿಗೆ ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರಿದ್ದಾರೆ. ಅವರ ಪತ್ನಿ ಐದು ವರ್ಷಗಳ ಹಿಂದೆ ಮೃತಪಟ್ಟಿದ್ದರು.

ಆಂಧ್ರ: ಕುಟುಂಬಕ್ಕೆ ₹1.35 ಕೋಟಿ ಹಣಕ್ಕೆ ಬೇಡಿಕೆ

ಅಪರಿಚಿತ ವ್ಯಕ್ತಿ ಶವ ಪಾರ್ಸೆಲ್

ಯಂಡಗಂಡಿ (ಆಂಧ್ರಪ್ರದೇಶ) (ಪಿಟಿಐ): ಪಶ್ಚಿಮ ಗೋದಾವರಿ ಜಿಲ್ಲೆಯ ಕುಟುಂಬವೊಂದಕ್ಕೆ ಒಂದು ಕೋಟಿಗೂ ಹೆಚ್ಚು ಹಣಕ್ಕೆ ಬೇಡಿಕೆ ಇರಿಸಿ, ಪೆಟ್ಟಿಗೆಯೊಂದರಲ್ಲಿ ಸುಮಾರು 45 ವರ್ಷದ ಅಪರಿಚಿತ ವ್ಯಕ್ತಿಯ ಶವವನ್ನು ಕಳುಹಿಸಿರುವ ಪ್ರಕರಣ ವರದಿಯಾಗಿದೆ.

‘ಉಂಡಿ ಮಂಡಲದ ಯಂಡಗಂಡಿ ಗ್ರಾಮದ ಸಾಗಿ ತುಳಸಿ ಎಂಬವರ ನಿರ್ಮಾಣ ಹಂತದಲ್ಲಿರುವ ಮನೆಗೆ ಗುರುವಾರ ರಾತ್ರಿ ಶವ ಇದ್ದ ಪೆಟ್ಟಿಗೆ ಆಟೋರಿಕ್ಷಾದಲ್ಲಿ ಬಂದಿದೆ. ‘ತುಳಸಿ ಅವರ ಪತಿ 2008ರಲ್ಲಿ ₹3 ಲಕ್ಷ ಸಾಲ ಪಡೆದಿದ್ದು, ಅದು ಈಗ ಬಡ್ಡಿ ಸೇರಿ ₹1.35 ಕೋಟಿಯಾಗಿದೆ. ಕುಟುಂಬಕ್ಕೆ ಯಾವುದೇ ಕೆಡುಕು ಆಗಬಾರದೆಂದರೆ ಸಾಲವನ್ನು ಪಾವತಿಸಬೇಕು’ ಎಂಬ ಬೆದರಿಕೆಯ ಸಾರಾಂಶವಿರುವ ಪತ್ರವು ಶವದ ಪೆಟ್ಟಿಗೆಯಲ್ಲಿ ಸಿಕ್ಕಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅದ್ನಾನ್ ನಯೀಮ್ ಅಸ್ಮಿ ಶುಕ್ರವಾರ ತಿಳಿಸಿದರು.

‘ಇದರ ಹಿಂದೆ ಆಸ್ತಿ ವಿವಾದ ಇರುವ ಬಗ್ಗೆಯೂ ಶಂಕೆ ವ್ಯಕ್ತವಾಗಿದೆ. ಕಳೆದ ಮೂರ್ನಾಲ್ಕು ದಿನಗಳಲ್ಲಿ ನಾಪತ್ತೆಯಾಗಿರುವ ಎಲ್ಲರ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ. ಮರಣೋತ್ತರ ಪರೀಕ್ಷೆ ನಂತರ ಅಪರಿಚಿತ ಶವದ ಬಗ್ಗೆ ಹೆಚ್ಚಿನ ಸ್ಪಷ್ಟತೆ ಸಿಗಲಿದೆ. ಏತನ್ಮಧ್ಯೆ, ತುಳಸಿ ಅವರ ಕುಟುಂಬದ ಕಿರಿಯ ಅಳಿಯ ಗುರುವಾರದಿಂದ ಕಾಣೆಯಾಗಿರುವ ಮಾಹಿತಿ ಸಿಕ್ಕಿದೆ’ ಎಂದು ಅವರು ತಿಳಿಸಿದರು.

ಪೊಲೀಸ್ ಮೂಲಗಳ ಪ್ರಕಾರ, ತುಳಸಿಯವರ ಪತಿ 10 ವರ್ಷಗಳ ಹಿಂದೆ ನಾಪತ್ತೆಯಾಗಿದ್ದು, ಆಕೆ ತನ್ನ ಹೆತ್ತವರೊಂದಿಗೆ ವಾಸಿಸುತ್ತಿದ್ದರು. ನಂತರ ಬಾಡಿಗೆ ಮನೆಗೆ ವಾಸ್ತವ್ಯ ಬದಲಿಸಿದ್ದರು. ಹೆತ್ತವರ ಮನೆಗೆ ಸಮೀಪದಲ್ಲೇ ಹೊಸ ಮನೆಯನ್ನು ಕಟ್ಟಿಸುತ್ತಿದ್ದರು. ಈಕೆ ವಿಧವೆ ಎಂದು, ಅಪರಿಚಿತ ಪರೋಪಕಾರಿ ವ್ಯಕ್ತಿಯೊಬ್ಬರು ಮನೆ ನಿರ್ಮಾಣಕ್ಕೆ ನೆರವು ನೀಡುತ್ತಿದ್ದರು. ಆ ವ್ಯಕ್ತಿ ತುಳಸಿಗೆ ಕಳೆದ ಸೆಪ್ಟೆಂಬರ್‌ನಲ್ಲಿ ಅತ್ಯುತ್ತಮ ಗುಣಮಟ್ಟದ ಟೈಲ್ಸ್ ಮತ್ತು ಬಣ್ಣವನ್ನು ಕಳುಹಿಸಿಕೊಟ್ಟಿದ್ದರು.

ಅಂತೆಯೇ, ಗುರುವಾರ ಮೋಟಾರ್‌ಗಳು ಮತ್ತು ಕೆಲವು ಎಲೆಕ್ಟ್ರಿಕಲ್ ವಸ್ತುಗಳ ಪಾರ್ಸಲ್ ಬರುತ್ತಿದ್ದು, ಸ್ವೀಕರಿಸುವಂತೆ ತುಳಸಿ ಅವರಿಗೆ ಸಂದೇಶ ಕಳುಹಿಸಲಾಗಿದೆ. ಆದರೆ, ಪೆಟ್ಟಿಗೆಯಲ್ಲಿ ಶವ ಇರಿಸಿ ಕಳುಹಿಸಿದ್ದಾರೆ. ಶವ ಪತ್ತೆಯಾಗುತ್ತಿದ್ದಂತೆ ತುಳಸಿ ಕುಟುಂಬದವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಅಲಿಗಢ: ಮತ್ತೊಂದು ಶಿವ ದೇಗುಲ ಪತ್ತೆ



ಅಲಿಗಢ (ಪಿಟಿಐ): ಮುಸ್ಲಿಂ ಸಮುದಾಯದವರು ಹೆಚ್ಚಿರುವ ಇಲ್ಲಿನ ಪ್ರದೇಶದಲ್ಲಿ ಮತ್ತೊಂದು ಶಿವ ದೇವಾಲಯ ಪತ್ತೆಯಾಗಿದೆ ಎಂದು ಹಿಂದೂ ಬಲಪಂಥೀಯ ಸಂಘಟನೆಯ ನಾಯಕರು ತಿಳಿಸಿದರು.

ಅಲಿಗಢದ ಸರಾಯ ಮಿಯಾನ್ ಪ್ರದೇಶದಲ್ಲಿ ಇದನ್ನು ಗುರುವಾರ ಸಂಜೆ ಶೋಧಿಸಲಾಯಿತು. ಪೊಲೀಸರ ಸಮ್ಮುಖದಲ್ಲಿ ಬಾಗಿಲಿನ ಬೀಗಗಳನ್ನು ಒಡೆದು ದೇಗುಲವನ್ನು ಸ್ವಚ್ಛಗೊಳಿಸಲಾಯಿತು. ಧಾರ್ಮಿಕ ಪೂಜಾ, ಕಾರ್ಯಗಳನ್ನು ನೆರವೇರಿಸಿ ಶುದ್ಧೀಕರಿಸಲಾಯಿತು ಎಂದು ಭಾರತೀಯ ಜನತಾ ಯುವ ಮೋರ್ಚಾದ ನಗರ ಘಟಕದ ಕಾರ್ಯದರ್ಶಿ ಹರ್ಷದ್ ವಿವರಿಸಿದರು.

‘ದೇಗುಲ ಪಾಳು ಬಿದ್ದಂತಾಗಿತ್ತು. ಅದರಲ್ಲಿನ ವಿಗ್ರಹಗಳ ಮೇಲೆ ಮಣ್ಣು ಸುರಿದಿತ್ತು’ ಎಂದರು. ಬಜರಂಗದಳದ ಮುಖಂಡ ಅಂಕುರ್ ಶಿವಾಜಿ ಸಹ ದೇಗುಲ ಪರಿಶೀಲಿಸಿದರು.

36 ಗಂಟೆಗಳ ಹಿಂದೆಯಷ್ಟೇ ಸರಾಯ ರೆಹಮಾನ್ ಪ್ರದೇಶದಲ್ಲಿ ಶಿವ ದೇಗುಲ ಪತ್ತೆ ಮಾಡಲಾಗಿತ್ತು.

ಕೆಟಿಆರ್ ಬಂಧನಕ್ಕೆ ಡಿ.30ರವರೆಗೆ ತಡೆ

ಹೈದರಾಬಾದ್: ಫಾರ್ಮುಲಾ– ಇ ರೇಸ್‌ಗೆ ಸಂಬಂಧಿಸಿದ ಹಣಕಾಸು ಅವ್ಯವಹಾರ ಆರೋಪದಡಿ ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಅವರನ್ನು ಡಿ.30ರವರೆಗೆ ಬಂಧಿಸದಂತೆ ತೆಲಂಗಾಣ ಹೈಕೋರ್ಟ್ ಶುಕ್ರವಾರ ಮಧ್ಯಂತರ ಆದೇಶ ನೀಡಿದೆ.

‘ಪ್ರಕರಣದ ಕುರಿತಾದ ತನಿಖೆ ಮುಂದುವರಿಯಲಿ ಮತ್ತು ಕೆಟಿಆರ್ ಅವರು ತನಿಖೆಗೆ ಸಹಕಾರ ನೀಡಬೇಕು’ ಎಂದು ನ್ಯಾಯಮೂರ್ತಿ ಶ್ರವಣ್ ಕುಮಾರ್ ಅವರ ಪೀಠವು ಹೇಳಿದೆ.

ನ್ಯಾಯಾಲಯವು ಪ್ರಕರಣದ ವಿಚಾರಣೆಯನ್ನು ಡಿ.30ಕ್ಕೆ ಮುಂದೂಡಿದೆ.

ಮನ ನಿಯಂತ್ರಣಕ್ಕೆ ಧ್ಯಾನ



● ಎಸ್. ಸೂರ್ಯಪ್ರಕಾಶ ಪಂಡಿತ್

ವಿಶ್ವ ಧ್ಯಾನ ದಿನ

ವಿಶ್ವಸಂಸ್ಥೆಯು ಡಿಸೆಂಬರ್ 21ನ್ನು ‘ವಿಶ್ವ ಧ್ಯಾನದಿನ’ವನ್ನಾಗಿ ಘೋಷಿಸಿದೆ. ಈಗಾಗಲೇ ಪ್ರತಿವರ್ಷದ ಜೂನ್ 21ರಂದು ‘ವಿಶ್ವ ಯೋಗ-ದಿನ’ವನ್ನು ಆಚರಿಸುತ್ತಿದ್ದೇವೆ. ಯೋಗಕ್ಕೆ ಈಗ ಧ್ಯಾನವೂ ಸೇರಿಕೊಂಡು ಒಟ್ಟು ಯೋಗದರ್ಶನಕ್ಕೆ ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಕ್ಕಂತಾಗಿದೆ.

ಜೀವನ ಸಾರ್ಥಕಗೊಳಿಸಿಕೊಳ್ಳಲು ಮನುಷ್ಯನಿಗೆ ಬೇಕಾದ ಮೊದಲ ಸಲಕರಣೆ ಎಂದರೆ ಅವನ ಶರೀರವೇ. ಹೀಗಾಗಿ ಶರೀರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕೆಂಬ ತುಡಿತವೂ ಎಚ್ಚರಿಕೆಯೂ ಭಾರತೀಯ ಸಂಸ್ಕೃತಿಯಲ್ಲಿ ಸ್ಪಷ್ಟವಾಗಿದೆ. ‘ಧರ್ಮದ ದಾರಿಯಲ್ಲಿ ಶರೀರವೇ ಮೊದಲ ಸಾಧನ’ ಎಂಬುದು ಈ ನೆಲದ ಮಂತ್ರ. ಮೋಕ್ಷವೇ ಧರ್ಮಸಾಧನೆಯ ಅಂತಿಮ ಗುರಿ. ಹೀಗಾಗಿ ಧರ್ಮಕ್ಕೂ ಶರೀರಕ್ಕೂ ಮೋಕ್ಷಕ್ಕೂ ನೇರ ನಂಟು ಇದೆ. ಈ ತಾತ್ವಿಕ ಭಿತ್ತಿಯಲ್ಲಿ ಸಿದ್ಧವಾದ ಕಾಣ್ಕೆಯೇ ಯೋಗದರ್ಶನ. ಇದು ಭಾರತೀಯ ದರ್ಶನ ಪರಂಪರೆಯಲ್ಲಿ ಮುಖ್ಯ ಸ್ಥಾನವನ್ನು ಪಡೆದಿದೆ.

‘ಯೋಗ’ ಎಂದರೆ ಈಗ ಸಾಮಾನ್ಯರ ಗ್ರಹಿಕೆಯಲ್ಲಿ ಆಸನಗಳು ಮಾತ್ರ. ಆದರೆ ಯೋಗದರ್ಶನದ ವ್ಯಾಪ್ತಿ ಇನ್ನೂ ವಿಸ್ತಾರವೂ ಆಳವೂ ಆಗಿದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ – ಈ ಎಂಟು ಸಾಧನೆಗಳನ್ನು ಒಳಗೊಂಡಿರುವುದೇ ದಿಟವಾದ ‘ಯೋಗ’. ಇವು ಬೌದ್ಧಿಕ, ಶಾರೀರಿಕ ಮತ್ತು ಮಾನಸಿಕ ಸಾಧನೆಗೆ ಒದಗಿರುವ ಮೆಟ್ಟಿಲುಗಳು. ಕೊನೆಯಲ್ಲಿ ಎಲ್ಲದಕ್ಕೂ ಶಿಖರಪ್ರಾಯವಾಗಿ ಪ್ರಜ್ಞೆಯ ಬೆಳಕು ದಿಕ್ಸೂಚಿಯಾಗಿರುತ್ತದೆ.

‘ಧ್ಯಾನ’ ಎಂದರೆ ಏನು? ಮನಸ್ಸಿನ ಏಕಾಗ್ರತೆ. ಇದು ಯೋಗದ ಅಂಗಗಳಲ್ಲಿ ಒಂದು. ಮೊದಲಿಗೆ ನಮ್ಮ ನಿತ್ಯದ ಚಟುವಟಿಕೆಗಳನ್ನು ನಮ್ಮ ಒಳಿತಿಗೆ ಪೂರಕವಾಗಿರುವಂತೆ ಹದ ಮಾಡಿಕೊಳ್ಳಬೇಕು. ಆ ಬಳಿಕ ನಮ್ಮ ಶರೀರವನ್ನೂ ಹೀಗೆ ಸಿದ್ಧಮಾಡಿಕೊಳ್ಳಬೇಕು. ಅನಂತರ ನಮ್ಮ ಮನಸ್ಸನ್ನು ನಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ತೊಡಗಬೇಕು. ನಮ್ಮ ಎಲ್ಲ ಆಗುಹೋಗುಗಳಿಗೂ ಮೂಲಕಾರಣವೇ ಮನಸ್ಸು. ಇದನ್ನು ನಮ್ಮ ವಶದಲ್ಲಿಟ್ಟುಕೊಳ್ಳುವುದು ಸುಲಭವಲ್ಲ. ಹೀಗೆ ಮನಸ್ಸನ್ನು ಹದಗೊಳಿಸುವ ಉಪಾಯವೇ ಧ್ಯಾನ ಎನಿಸಿಕೊಳ್ಳುತ್ತದೆ. ಇಷ್ಟೂ ಸೇರಿದಾಗಲೇ ಅದು ಯೋಗ ಎನಿಸಿಕೊಳ್ಳುವುದು.

ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವುದು ಎಷ್ಟು ಕಷ್ಟ ಎಂದು ನಮಗೆಲ್ಲರಿಗೂ ತಿಳಿದಿದೆ. ನಮ್ಮ ಸುತ್ತಮುತ್ತಲಿನ ವಸ್ತು–ವ್ಯಕ್ತಿ–ವಿವರಗಳು ಸದಾ ನಮ್ಮನ್ನು ಮುತ್ತಿ, ನಮ್ಮ ಇಂದ್ರಿಯಗಳನ್ನು ಸೆಳೆದು, ಬುದ್ಧಿಯನ್ನು ಕೆಣಕಿ, ಮನಸ್ಸನ್ನು ಕೆಡಿಸಿ ನಮ್ಮ ಜೀವನದ ಗತಿಯನ್ನೇ ಏರುಪೇರು ಮಾಡುತ್ತಿರುತ್ತವೆ. ಹೀಗೆ ಕೆಡುತ್ತಿರುವ ನಮ್ಮ ಜೀವನಕ್ಕೆ ಒಳಿತನ್ನು ಒದಗಿಸುವ ಯೋಗಮಾರ್ಗವೇ ಧ್ಯಾನ.

ಮನಸ್ಸಿನ ಏಕಾಗ್ರತೆ ಎನ್ನುವುದು ನಮ್ಮ ಲೌಕಿಕ ಸುಖ–ಸಂತೋಷಕ್ಕೂ, ಅಲೌಕಿಕ ಆನಂದಕ್ಕೂ ಅನಿವಾರ್ಯವಾಗಿರುವಂಥದ್ದು. ಧ್ಯಾನವು ಇಹಕ್ಕೂ ಪರಕ್ಕೂ – ಎರಡಕ್ಕೂ ಒದಗುವುದರಿಂದ ಅದರ ವ್ಯಾಪ್ತಿಯೂ ವಿಸ್ತಾರವಾಗಿದೆ. ಹೀಗಾಗಿಯೇ ನಮ್ಮ ವೈದಿಕ, ಅವೈದಿಕ, ತಾಂತ್ರಿಕ – ಎಲ್ಲ ದಾರ್ಶನಿಕ ಪಂಥಗಳೂ ಅದನ್ನು ಆದರಿಸಿವೆ. ಬೌದ್ಧದರ್ಶನದಲ್ಲಿಯಂತೂ ಧ್ಯಾನಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಇಂದು ಜಗತ್ತಿನ ದೊಡ್ಡ ಪ್ರಭಾವ ಎನಿಸಿರುವ ‘ಝೆನ್’ದರ್ಶನದ ಮೂಲರೂಪವೇ ಧ್ಯಾನ. ಜಗತ್ತಿನ ಹಲವು ದಾರ್ಶನಿಕ ಪಂಥಗಳಲ್ಲೂ ಧ್ಯಾನದ ವಿವರಗಳನ್ನು ಕಾಣಬಹುದು.

ಧ್ಯಾನವೇ ಮೋಕ್ಷಕ್ಕೆ ಮೂಲಸಾಧನ ಎನ್ನುವುದು ಪರಂಪರೆಯ ಒಕ್ಕಣೆ. ನಮ್ಮ ಕಣ್ಣಿಗೆ ಕಾಣದ ಮೋಕ್ಷ ಬೇಡ, ಇಲ್ಲಿಯ ಸುಖವೇ ಸಾಕು – ಎನ್ನುವವರಿಗೂ ಧ್ಯಾನದ ಬೆಂಬಲ ಬೇಕೇ ಬೇಕು. ದಿಕ್ಕು ತಪ್ಪಿದ ನಮ್ಮ ನಿತ್ಯಜೀವನವನ್ನು ಧ್ಯಾನದ ಅನುಸಂಧಾನದಿಂದ ಸುಖಮಯಗೊಳಿಸಿಕೊಳ್ಳಬಹುದು.

ನಿರಂತರವಾಗಿ ಎಡೆಬಿಡದೆ ಒಂದಾನೊಂದು ವಸ್ತುವನ್ನು ಕುರಿತು ನಡೆಸುವ ಚಿಂತನೆಯೇ ಧ್ಯಾನ. ಈ ಏಕಾಗ್ರತೆಗೆ ಯಾವುದೂ ವಸ್ತು ಆಗಬಹುದು. ಆದರೆ ಈ ವಸ್ತುವಿನ ಆಯ್ಕೆಯಲ್ಲಿ ನಮ್ಮ ಜೀವನದ ಗೊತ್ತು–ಗುರಿಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆಯೆನ್ನಿ. ಚಿತ್ತ, ಎಂದರೆ ಬುದ್ಧಿಯ ಚಂಚಲತೆಯಿಂದ ಬಿಡಿಸಿಕೊಂಡು ಧ್ಯಾನವನ್ನು ಸಿದ್ಧಿಸಿಕೊಂಡರೆ ಅಂಥವನಿಗೆ ಹಗಲೂ ಇಲ್ಲ, ರಾತ್ರಿಯೂ ಇಲ್ಲ – ಎನ್ನುತ್ತದೆ, ಯೋಗವಾಸಿಷ್ಠ. ಧ್ಯಾನ ನಮಗೆ ನೀಡುವ ಅದ್ಭುತ ಶಕ್ತಿ ಇದು: ಕಾಲವನ್ನೇ ಗೆಲ್ಲುವುದು. ಕಾಲವನ್ನೇ ಗೆದ್ದವನಿಗೆ ನೋವು–ದುಃಖಗಳೂ ಇಲ್ಲ, ಸುಖ–ಸಂತೋಷಗಳೂ ಇಲ್ಲ. ಇದೇ ಮೋಕ್ಷ, ಮುಕ್ತಿ.

ಮಂದಿರ–ಮಸೀದಿಗಳ ಹೊಸ ವಿವಾದ: ಭಾಗವತ್ ಕಳವಳ

ಒಂದನೇ ಪುಟದಿಂದ...

‘ನಾವು ಅನಾದಿ ಕಾಲದಿಂದಲೂ ಸಾಮರಸ್ಯದಿಂದ ಬದುಕುತ್ತಿದ್ದೇವೆ. ಈ ಸೌಹಾರ್ದವನ್ನು ನಾವು ಜಗತ್ತಿಗೆ ನೀಡಬೇಕಾದರೆ, ನಾವು ಅದರ ಮಾದರಿಯನ್ನು ರೂಪಿಸಬೇಕಾಗಿದೆ’ ಎಂದು ಅವರು ಅಭಿಪ್ರಾಯಪಟ್ಟರು. ‘ಹಿಂದೂಗಳ ನಂಬಿಕೆಯ ವಿಷಯವಾಗಿದ್ದರಿಂದ ರಾಮಮಂದಿರವನ್ನು ನಿರ್ಮಿಸಲಾಗಿದೆ’ ಎಂದು ಹೇಳಿದ ಭಾಗವತ್, ‘ಪ್ರತಿದಿನ ಹೊಸ ವಿವಾದ ಉದ್ಭವಿಸುತ್ತಿವೆ. ಇದಕ್ಕೆ ಹೇಗೆ ಅನುಮತಿಸುವುದು? ಇಂತಹದ್ದನ್ನು ಮುಂದುವರಿಸಲು ಸಾಧ್ಯವಿಲ್ಲ. ನಾವೆಲ್ಲರೂ ಒಟ್ಟಿಗೆ ಬದುಕಬಲ್ಲೆವು ಎಂಬುದನ್ನು ಭಾರತವು ತೋರಿಸಬೇಕಾಗಿದೆ’ ಎಂದು, ಯಾವುದೇ ನಿರ್ದಿಷ್ಟ ವಿವಾದಿತ ಸ್ಥಳ ಉಲ್ಲೇಖಿಸದೇ ಹೇಳಿದರು.

ದೇವಾಲಯಗಳ ಪುನರುತ್ಥಾನಕ್ಕೆ ಮಸೀದಿಗಳ ಸಮೀಕ್ಷೆ ನಡೆಸಬೇಕೆಂಬ ಬೇಡಿಕೆಗಳು ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯಗಳ ಮೆಟ್ಟಿಲೇರಿರುವಾಗ, ಭಾಗವತ್ ತಮ್ಮ ಉಪನ್ಯಾಸದಲ್ಲಿ ಯಾವುದನ್ನೂ ಉಲ್ಲೇಖಿಸಲಿಲ್ಲ.

‘ಹೊರಗಿನಿಂದ ಬಂದ ಕೆಲವು ಗುಂಪುಗಳು ತಮ್ಮೊಂದಿಗೆ ಸ್ಥೈರ್ಯವನ್ನು ತಂದವು. ಅವರು ತಮ್ಮ ಹಳೆಯ ಆಡಳಿತ ಹಿಂದಿರುಗಿಸಬೇಕೆಂದು ಬಯಸುತ್ತಾರೆ. ಆದರೆ, ಈಗ ಸಂವಿಧಾನದ ಪ್ರಕಾರ ದೇಶ ನಡೆಯುತ್ತಿದೆ. ಈ ವ್ಯವಸ್ಥೆಯಲ್ಲಿ, ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ, ಅವರು ಸರ್ಕಾರವನ್ನು ನಡೆಸುತ್ತಾರೆ. ಹೊರಗಿನವರ ಪ್ರಾಬಲ್ಯದ ದಿನಗಳು ಮುಗಿದುಹೋಗಿವೆ’ ಎಂದರು.

‘ಮೊಘಲ್ ಚಕ್ರವರ್ತಿ ಔರಂಗಜೇಬನ ಆಳ್ವಿಕೆ ಧಾರ್ಷ್ಟ್ಯದಿಂದ ಕೂಡಿತ್ತು. ಆದರೆ ಅವರ ವಂಶಸ್ಥ ಬಹದ್ದೂರ್ ಶಾ ಜಾಫರ್ 1857ರಲ್ಲಿ ಗೋಹತ್ಯೆ ನಿಷೇಧಿಸಿದ್ದರು ಎಂಬುದು ಇಲ್ಲಿ ಉಲ್ಲೇಖನೀಯ’ ಎಂದರು.

‘ಬ್ರಿಟಿಷರಿಂದಾಗಿ ಪಾಕಿಸ್ತಾನ ಅಸ್ತಿತ್ವಕ್ಕೆ’

ಒಂದನೇ ಪುಟದಿಂದ...

‘ಇಲ್ಲಿ ಯಾರೂ ಅಲ್ಪಸಂಖ್ಯಾತರಲ್ಲ ಮತ್ತು ಯಾರೂ ಬಹುಸಂಖ್ಯಾತರಲ್ಲ. ಇಲ್ಲಿ ಎಲ್ಲರೂ ಸಮಾನರು. ಈ ರಾಷ್ಟ್ರದ ಸಂಪ್ರದಾಯವೆಂದರೆ ಎಲ್ಲರೂ ತಮ್ಮದೇ ಆದ ಪೂಜಾ ವಿಧಾನಗಳನ್ನು ಅನುಸರಿಸಬಹುದು. ಸಾಮರಸ್ಯದಿಂದ ಬದುಕುವುದು ಮತ್ತು ದೇಶದ ಕಾನೂನುಗಳಿಗೆ ಎಲ್ಲರೂ ಬದ್ಧವಾಗಿರುವುದಾಗಿದೆ’ ಎಂದು ಭಾಗವತ್ ಹೇಳಿದರು.

ಇಂದಿನಿಂದ ವಿಜಯ್ ಹಜಾರೆ ಟ್ರೋಫಿ ಟೂರ್ನಿ: ಆಕಾಂಕ್ಷಿಗಳ ಮೇಲೆ ಆಯ್ಕೆ ಸಮಿತಿ ಕಣ್ಣು

ಚಾಂಪಿಯನ್ಸ್ ಟ್ರೋಫಿಗೆ ಮುನ್ನುಡಿ

ನವದೆಹಲಿ (ಪಿಟಿಐ): ಭಾರತ ತಂಡ ಇನ್ನು ಎಂಟು ವಾರಗಳ ಒಳಗೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಏಕದಿನ ಟೂರ್ನಿಯಲ್ಲಿ ಆಡಬೇಕಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಶನಿವಾರ ದೇಶದ ವಿವಿಧೆಡೆ ವಿಜಯ್ ಹಜಾರೆ ಟ್ರೋಫಿಗಾಗಿ ರಾಷ್ಟ್ರೀಯ ಏಕದಿನ ಚಾಂಪಿಯನ್‌ಷಿಪ್ ಆರಂಭವಾಗಲಿದೆ.

ಭಾರತ ತಂಡಕ್ಕೆ ಅಗತ್ಯವಿರುವ ಗುಣಮಟ್ಟದ ರಿಸ್ಟ್ ಸ್ಪಿನ್ನರ್, ರಿಷಭ್ ಪಂತ್‌ಗೆ ಬ್ಯಾಕಪ್ ಆಗಿ ಎರಡನೇ ವಿಕೆಟ್ ಕೀಪರ್ ಸ್ಥಾನಕ್ಕೆ ಪೈಪೋಟಿಯಿದೆ. ಈ ಎರಡು ಸ್ಥಾನಗಳ ಜೊತೆ, ಪ್ರಮುಖ ಆಟಗಾರರ ಲಯದ ಮೇಲೂ ಆಯ್ಕೆಗಾರರ ಕಣ್ಣು ಇರಲಿದೆ.

ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡುವ ಹೆಚ್ಚಿನ ಆಟಗಾರರು ಈಗ ಆಸ್ಟ್ರೇಲಿಯಾದ ಟೆಸ್ಟ್ ಸರಣಿಯಲ್ಲಿ ಆಡುತ್ತಿದ್ದಾರೆ. ಇದರ ನಡುವೆಯೂ ಈ ಟೂರ್ನಿ ತನ್ನದೇ ಆದ ಮಹತ್ವ ಹೊಂದಿದೆ. ಪ್ರಮುಖ ಆಟಗಾರ, ಬರೋಡಾದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅಂಥ ಆಟಗಾರರಿಗೆ ಇದು ತಾಲೀಮಿಗೆ ಸದವಕಾಶ.

ಪಂಜಾಬ್‌ನ ಅರ್ಷದೀಪ್ ಸಿಂಗ್, ಮಧ್ಯಪ್ರದೇಶದ ಆವೇಶ್ ಖಾನ್, ರಾಜಸ್ಥಾನದ ಖಲೀಲ್ ಅಹ್ಮದ್, ಬಂಗಾಳದ ಮುಕೇಶ್ ಕುಮಾರ್, ಉತ್ತರ ಪ್ರದೇಶದ ಯಶ್ ದಯಾಳ್ ಅವರು ಬೌಲಿಂಗ್ ವಿಭಾಗದ ಅಕಾಂಕ್ಷಿಗಳಾಗಿದ್ದಾರೆ. ಕುಲದೀಪ್ ಯಾದವ್ ಅವರು ತೊಡೆಯ ನೋವಿನಿಂದಾಗಿ ದೀರ್ಘಕಾಲದಿಂದ ಎನ್‌ಸಿಎನಲ್ಲಿ


ಹಾರ್ದಿಕ್ ಪಾಂಡ್ಯ

ಪುನಶ್ಚೇತನ ಪ್ರಕ್ರಿಯೆಯಲ್ಲಿದ್ದಾರೆ. ಹೀಗಾಗಿ ಆಯ್ಕೆ ಸಮಿತಿ ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಜೊತೆ ಇನ್ನೊಬ್ಬ ಸ್ಪಿನ್ನರ್ ತಲಾಷೆಯಲ್ಲಿದೆ. ತಮಿಳುನಾಡಿನ ವರುಣ್ ಚಕ್ರವರ್ತಿ, ಗುಜರಾತಿನ ಗೂಗ್ಲಿ ಬೌಲರ್ ರವಿ ಬಿಷ್ಣೋಯಿ ಅವರ ಮೇಲೆ ಕುತೂಹಲದ ಕಣ್ಣು ಇದೆ. ಇಬ್ಬರೂ ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು.

ಅಯ್ಯರ್ ಪೈಪೋಟಿ: ಶ್ರೇಯಸ್ ಅಯ್ಯರ್ 62 ಏಕದಿನ ಪಂದ್ಯಗಳಲ್ಲಿ 47ಕ್ಕಿಂತ ಹೆಚ್ಚಿನ ಸರಾಸರಿ ಹೊಂದಿದ್ದು, ಚಾಂಪಿಯನ್ಸ್ ಟ್ರೋಫಿಯಲ್ಲಿ ಅವಕಾಶ ಪಡೆಯುವ ಸಾಧ್ಯತೆಯಿದೆ. ಆದರೆ ತಿಲಕ್ ವರ್ಮಾ ಅಂಥ ಆಟಗಾರರಿಂದಾಗಿ ಅವರಿಗೆ ಪೈಪೋಟಿ ಎದುರಾಗಬಹುದು. ಹೈದರಾಬಾದಿಗೆ ಆಡುವ ತಿಲಕ್ ವರ್ಮಾ ಪ್ರದರ್ಶನದ ಮೇಲೂ ಆಯ್ಕೆಗಾರರ ನಿಗಾ ಇದೆ.

ಮಯಂಕ್ ಬಳಗಕ್ಕೆ ಇಂದು ಮುಂಬೈ ಸವಾಲು

ಬೆಂಗಳೂರು: ಮಯಂಕ್ ಅಗರವಾಲ್ ಸಾರಥ್ಯದ ಕರ್ನಾಟಕ ತಂಡ, ಅಹಮದಾಬಾದಿನ ಸರ್ದಾರ್ ಪಟೇಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆಯುವ 'ಸಿ' ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ಪ್ರಬಲ ಮುಂಬೈ ತಂಡವನ್ನು ಎದುರಿಸಲಿದೆ.

ರಣಜಿ ಟ್ರೋಫಿಯಲ್ಲಿ ಪ್ರತಿಕೂಲ ಹವಾಮಾನದ ಕಾರಣ ಕರ್ನಾಟಕ ಕೆಲವು ಪಂದ್ಯಗಳಲ್ಲಿ ಅಮೂಲ್ಯ ಪಾಯಿಂಟ್‌ಗಳನ್ನು ಕಳೆದುಕೊಂಡಿತ್ತು. ಆದರೆ ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ತಂಡದ ಪ್ರದರ್ಶನ ನಿರೀಕ್ಷಿತ ಮಟ್ಟದಲ್ಲಿರಲಿಲ್ಲ.

ಮನೀಷ್ ಪಾಂಡೆ ಅವರಿಗೆ ವಿಜಯ್ ಹಜಾರೆ ಟ್ರೋಫಿಯಲ್ಲಿ ಆಡುವ ತಂಡದಿಂದ ಕೊಕ್ ನೀಡಲಾಗಿದೆ. ಶ್ರೇಯಸ್ ಗೋಪಾಲ್ ಅವರಿಗೆ ಉಪನಾಯಕ ಸ್ಥಾನ


ಮಯಂಕ್

ನೀಡಲಾಗಿದೆ. ಕಳಪೆ ಪ್ರದರ್ಶನ ನೀಡುವ ಇತರ ಹಿರಿಯ ಆಟಗಾರರ ಮೇಲೂ ಕಣ್ಣಿಡಲಾಗುವುದು ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಜೆ.ಅಭಿರಾಮ್ ಎಚ್ಚರಿಸಿದ್ದಾರೆ.

ಕರ್ನಾಟಕದ ಪಂದ್ಯಗಳು: ಡಿ. 21: ಮುಂಬೈ ವಿರುದ್ಧ; ಡಿ 23: ಪುದುಚೇರಿ ವಿರುದ್ಧ; ಡಿ. 26: ಪಂಜಾಬ್ ವಿರುದ್ಧ; ಡಿ. 28: ಅರುಣಾಚಲ ಪ್ರದೇಶ ವಿರುದ್ಧ; ಡಿ. 31: ಹೈದರಾಬಾದ್ ವಿರುದ್ಧ; ಜನವರಿ 3: ಸೌರಾಷ್ಟ್ರ ವಿರುದ್ಧ; ಜನವರಿ 5: ನಾಗಾಲ್ಯಾಂಡ್ ವಿರುದ್ಧ.

ಆಯುಷಿ ಮಿಂಚು; ಭಾರತ ಫೈನಲ್‌ಗೆ

ಏಷ್ಯಾ 19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್

ಸಿಂಗಪುರ (ಪಿಟಿಐ): ಭಾರತ ತಂಡ 19 ವರ್ಷದೊಳಗಿನ ಮಹಿಳಾ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಯಶಸ್ಸಿನ ಓಟ ಮುಂದುವರಿಸಿದ್ದಾರೆ. ಶುಕ್ರವಾರ ನಡೆದ ತಮ್ಮ ಕೊನೆಯ ಸೂಪರ್ ಫೋರ್ ಪಂದ್ಯದಲ್ಲಿ ಭಾರತ ತಂಡ ನಾಲ್ಕು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಸೋಲಿಸಿ ಫೈನಲ್‌ಗೆ ಲಗ್ಗೆಹಾಕಿತು.

ಆಯುಷಿ ಶುಕ್ಲಾ ಅವರು 4 ಓವರುಗಳಲ್ಲಿ 10 ರನ್ನಿಗೆ 4 ವಿಕೆಟ್ ಪಡೆದು ಲಂಕಾ ತಂಡದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ದ್ವೀಪರಾಷ್ಟ್ರದ ತಂಡ 9 ವಿಕೆಟ್‌ಗೆ 98 ರನ್ ಗಳಿಸಲಷ್ಟೇ ಶಕ್ತವಾಯಿತು. ಭಾರತ ತಂಡದ ನಾಯಕಿ ನಿಕಿ ಪ್ರಸಾದ್ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದರು. ಆಯುಷಿ ಅವರಿಗೆ ಬೆಂಬಲ ನೀಡಿದ ಎಡಗೈ ಸ್ಪಿನ್ನರ್ ಪರುನಿಕಾ ಸಿಸೋಡಿಯಾ 27 ರನ್ನಿಗೆ 2 ವಿಕೆಟ್ ಪಡೆದರು.


ಆಯುಷಿ ಶುಕ್ಲಾ —ಎಕ್ಸ್ ಚಿತ್ರ

ಭಾರತದ ಪ್ರಾಬಲ್ಯ ಎಷ್ಟಿತ್ತೆಂದರೆ, ಸುಮುದು ನಿಸನ್ಸಲ (21) ಮತ್ತು ನಾಯಕಿ ಮನುದಿ ನಯಯಕ್ಕರ (33) ಬಿಟ್ಟರೆ ಲಂಕಾದ ಉಳಿದವರರೂ ಎರಡಂಕಿ ಮೊತ್ತ ಗಳಿಸಲಾಗಲಿಲ್ಲ.

ಭಾರತದ ಆರಂಭವೂ ಉತ್ತಮವಾಗಿರಲಿಲ್ಲ. ಎಡಗೈ ಸ್ಪಿನ್ನರ್ ಚಮೋದಿ ಪ್ರಬೋಧಾ (16ಕ್ಕೆ3) ಪರಿಣಾಮಕಾರಿ ಎನಿಸಿದರು. ಆದರೆ ಆರಂಭ ಆಟಗಾರ್ತಿ ಜಿ.ಕಮಲಿನಿ ಮತ್ತು ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ಗೋಂಗಡಿ ತ್ರಿಶಾ (32, 24ಎ,) ತಂಡವು ಗುರಿ ತಲುಪಲು ನೆರವಾದರು.

ಭಾರತ ಭಾನುವಾರ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರುಗಳಲ್ಲಿ 9 ವಿಕೆಟ್‌ಗೆ 98 (ಮನುದಿ ನನಯಕ್ಕರ 33, ಎಸ್.ನಿಸನ್ಸಲ 21; ಆಯುಷಿ ಶುಕ್ಲಾ 10ಕ್ಕೆ4, ಪರುನಿಕಾ ಸಿಸೋಡಿಯಾ 27ಕ್ಕೆ2); ಭಾರತ: 14.5 ಓವರುಗಳಲ್ಲಿ 6 ವಿಕೆಟ್‌ಗೆ 102 (ಜಿ.ತ್ರಿಶಾ 32, ಜಿ.ಕಮಲಿನಿ 28; ಚಮೋದಿ ಪ್ರಬೋಧಾ 16ಕ್ಕೆ3).

ಯುವ ಬ್ಯಾಟರ್ ಸ್ಯಾಮ್‌ಗೆ ಅವಕಾಶ


ಸ್ಯಾಮ್ ಕೊನ್ಸಾಸ್ಟ್

ಮೆಲ್ಬರ್ನ್ (ಪಿಟಿಐ): ಹದಿಹರೆಯದ ಬ್ಯಾಟರ್ ಸ್ಯಾಮ್ ಕೊನ್ಸಾಸ್ಟ್ ಅವರು ಭಾರತ ಎದುರಿನ ಬಾರ್ಡರ್–ಗಾವಸ್ಕರ್ ಕ್ರಿಕೆಟ್ ಟ್ರೋಫಿ ಸರಣಿಯ ಕೊನೆಯ ಎರಡು ಟೆಸ್ಟ್‌ಗಳಲ್ಲಿ ಆಡುವ ಆಸ್ಟ್ರೇಲಿಯಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದ್ದು, ನೀಳಕಾಯದ ಆರಂಭ ಆಟಗಾರ ನಥಾನ್ ಮೆಕ್‌ಸ್ವೀನಿ ಅವರನ್ನು ಕೈಬಿಡಲಾಗಿದೆ.

19ವರ್ಷವಯಸ್ಸಿನಕೊನ್ಸಾಸ್ಟ್‌ಅವರು70ವರ್ಷಗಳ ನಂತರ ಆಸ್ಟ್ರೇಲಿಯಾ ತಂಡದಲ್ಲಿ ಸ್ಥಾನ ಪಡೆದಿರುವ ಅತಿ ಕಿರಿಯ ಬ್ಯಾಟರ್ ಎನಿಸಿದ್ದಾರೆ. ಈ ಹಿಂದೆ, ಇಯಾನ್ ಕ್ರೇಗ್ 1953ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಎಂಸಿಜಿಯಲ್ಲಿ ಪದಾರ್ಪಣೆ ಮಾಡಿದಾಗ ಅವರ ವಯಸ್ಸು 17 ವರ್ಷ 239 ದಿನಗಳಾಗಿದ್ದವು. ಸರಣಿಯ ಮೊದಲ ಮೂರು ಟೆಸ್ಟ್‌ಗಳಲ್ಲಿ ಆಡಿದ್ದ ಮೆಕ್‌ಸ್ವೀನಿ ಅವರು ನಿರಾಶಾದಾಯಕ ಆಟಕ್ಕಾಗಿ ಸ್ಥಾನ ಕಳೆದುಕೊಂಡಿದ್ದಾರೆ.

ಶೆಫೀಲ್ಡ್ ಶೀಲ್ಡ್‌ನಲ್ಲಿ ಎರಡು ಶತಕ ಬಾರಿಸಿ ಕೊನ್ಸಾಸ್ಟ್ ಅವರು ಆಯ್ಕೆಗಾರರ ಗಮನ ಸೆಳೆದಿದ್ದರು. ಉಸ್ಮಾನ್ ಖ್ವಾಜಾ ಜೊತೆ ಇನಿಂಗ್ಸ್ ಆರಂಭಿಸಲು ಸೂಕ್ತ ಆಟಗಾರ ಎನಿಸಿದ್ದರು. ಭಾರತ ಎ ವಿರುದ್ಧ ಎಂಸಿಜಿಯಲ್ಲಿ ನಡೆದ ಪಂದ್ಯದಲ್ಲಿ 73 ರನ್ ಬಾರಿಸಿದ್ದ ಈ ಆಟಗಾರ, ಕ್ಯಾನ್‌ಬೆರಾದಲ್ಲಿ ಭಾರತ ವಿರುದ್ಧ ನಡೆದ ಪ್ರೈಮ್ ಮಿನಿಸ್ಟರ್ಸ್ ಇಲೆವೆನ್ (ಪಿಂಕ್ ಬಾಲ್) ಪಂದ್ಯದಲ್ಲಿ 107 ರನ್ ಗಳಿಸಿ ಗಮನ ಸೆಳೆದಿದ್ದರು.

ಆಸ್ಟ್ರೇಲಿಯಾ ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಸೀನ್ ಅಬಾಟ್, ಸ್ಕಾಟ್ ಬೋಲ್ಯಾಂಡ್, ಅಲೆಕ್ಸ್ ಕ್ಯಾರಿ, ಟ್ರಾವಿಸ್ ಹೆಡ್ (ಉಪ ನಾಯಕ), ಜೋಶ್ ಇಂಗ್ಲಿಸ್, ಉಸ್ಮಾನ್ ಖ್ವಾಜಾ ಸ್ಯಾಮ್ ಕೊನ್ಸಾಸ್ಟ್, ಮಾರ್ನಸ್ ಲಾಬುಷೇನ್, ನಥಾನ್ ಲಯನ್, ಮಿಚೆಲ್ ಮಾರ್ಷ್, ಜೇ ರಿಚರ್ಡ್‌ಸನ್, ಸ್ಟೀವ್ ಸ್ಮಿತ್ (ಉಪನಾಯಕ), ಮಿಚೆಲ್ ಸ್ಟಾರ್ಕ್, ಬ್ಯೂ ವೆಬ್‌ಸ್ಟರ್.

ಜ.12ರಂದು ಮುಂಬೈನಲ್ಲಿ ಬಿಸಿಸಿಐ ವಿಶೇಷ ಸಾಮಾನ್ಯ ಸಭೆ

ನವದೆಹಲಿ (ಪಿಟಿಐ): ಜಯ್ ಶಾ ಮತ್ತು ಆಶಿಶ್ ಶೆಲಾರ್ ಅವರಿಂದ ಈ ತಿಂಗಳ ಆರಂಭದಲ್ಲಿ ತೆರವಾದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಮತ್ತು ಖಜಾಂಚಿ ಸ್ಥಾನಗಳನ್ನು ತುಂಬಲು ಜನವರಿ 12 ರಂದು ಮುಂಬೈನಲ್ಲಿ ಮಂಡಳಿಯ ವಿಶೇಷ ಸಾಮಾನ್ಯ ಸಭೆ (ಎಸ್‌ಜಿಎಂ) ಕರೆಯಲಾಗಿದೆ.

ಬಿಸಿಸಿಐ ನಿಯಮಾವಳಿಗಳ ಪ್ರಕಾರ 45 ದಿನಗಳ ಒಳಗೆ ವಿಶೇಷ ಸಾಮಾನ್ಯ ಸಭೆ ಕರೆದು ತೆರವಾದ ಹುದ್ದೆ ಭರ್ತಿ ಮಾಡಿಕೊಳ್ಳಬೇಕಿದೆ. ಈಗಿನ ಸಭೆ ಗಡುವಿಗಿಂತ ಮೊದಲೇ, 43 ದಿನಗಳ ಒಳಗೆ ನಡೆಯುತ್ತಿದೆ.

'ಮಂಡಳಿಯ ಅಪೆಕ್ಸ್ ಕೌನ್ಸಿಲ್ ಸಭೆ ಗುರುವಾರ ನಡೆದಿದ್ದು, ವಿಶೇಷ ಸಾಮಾನ್ಯ ಸಭೆಯ ದಿನಾಂಕದ ಅಧಿಸೂಚನೆಯನ್ನು ರಾಜ್ಯ ಘಟಕಗಳಿಗೆ ಕಳುಹಿಸಲಾಗಿದೆ. ಈ ಸಭೆ ಬಿಸಿಸಿಐ ಕೇಂದ್ರ ಕಚೇರಿಯಲ್ಲಿ ಜನವರಿ 12ರಂದು ನಡೆಯಲಿದೆ' ಎಂದು ರಾಜ್ಯ ಘಟಕದ ಅಧ್ಯಕ್ಷರೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜಯ್ ಶಾ ಡಿಸೆಂಬರ್ 1ರಂದು ಐಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದರು. ಮಂಡಳಿಯಲ್ಲಿ ಖಜಾಂಚಿಯಾಗಿದ್ದ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಆಶಿಶ್ ಶೆಲಾರ್ ಈಚೆಗೆ ಮಹಾರಾಷ್ಟ್ರದಲ್ಲಿ ಅಸ್ತಿತ್ವಕ್ಕೆ ಬಂದ ನೂತನ ಸಂಪುಟದಲ್ಲಿ ಸಚಿವರಾಗಿ ನೇಮಕಗೊಂಡಿದ್ದಾರೆ. ಲೋಧಾ ಸಮಿತಿ ನಿಯಮಗಳ ಪ್ರಕಾರ ಸಚಿವರು ಅಥವಾ ಜನಪ್ರತಿನಿಧಿಗಳು ಮಂಡಳಿಯ ಪದಾಧಿಕಾರಿಗಳಾಗಲು ಅವಕಾಶವಿಲ್ಲ.

ಸಂಕ್ಷಿಪ್ತ ಸುದ್ದಿ

ಕಬಡ್ಡಿ: ಹಿನ್ನಡೆಯಿಂದ ಚೇತರಿಸಿ ಗೆದ್ದ ಜೈಪುರ

ಪುಣೆ (ಪಿಟಿಐ): ಹಿನ್ನಡೆಯಿದ ಚೇತರಿಸಿಕೊಂಡ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ, 11ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶುಕ್ರವಾರ ಬೆಂಗಾಲ್ ವಾರಿಯರ್ಸ್ ತಂಡವನ್ನು 31–28 ಅಂಕಗಳಿಂದ ಸೋಲಿಸಿತು. ಈ ಗೆಲುವಿನೊಡನೆ ಜೈಪುರ ತಂಡ ಐದನೇ ಸ್ಥಾನಕ್ಕೇರಿತು.

12 ತಂಡಗಳ ಲೀಗ್‌ನಲ್ಲಿ ಮೊದಲ ಆರು ಸ್ಥಾನ ತಂಡಗಳು ಪ್ಲೇಆಫ್ ಹಂತಕ್ಕೇರುತ್ತವೆ. ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ನಡೆಯುತ್ತಿರುವ ಕೊನೆಯ ಹಂತದ ಲೀಗ್‌ನ ಈ ಪಂದ್ಯದಲ್ಲಿ ವಿರಾಮದ ವೇಳೆ ವಾರಿಯರ್ಸ್ ತಂಡ 19–9ರಲ್ಲಿ ಹತ್ತು ಪಾಯಿಂಟ್‌ಗಳ ಮುನ್ನಡೆ ಸಾಧಿಸಿತ್ತು. ವಿರಾಮದ ನಂತರ ಜೈಪುರ ತಂಡ ಪುನರಾಗಮನ ಮಾಡಿತು. ಮುಕ್ತಾಯಕ್ಕೆ 9 ನಿಮಿಷಗಳಿರುವಾಗ ಎದುರಾಳಿ ತಂಡವನ್ನು ಆಲೌಟ್ ಮಾಡಿದ ಜೈಪುರ ಮೊದಲ ಬಾರಿ ಮುನ್ನಡೆ ಗಳಿಸಿತು. ಅಂತಿಮವಾಗಿ ಮೂರು ಅಂಕಗಳಿಂದ ಜಯ ಸಾಧಿಸಿತು.

ದಿನದ ಎರಡನೇ ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡ 48–36 ಪಾಯಿಂಟ್‌ಗಳಿಂದ ಪುಣೇರಿ ಪಲ್ಟನ್ ವಿರುದ್ಧ ಜಯಗಳಿಸಿತು. ಟೈಟನ್ಸ್ 22 ಪಂದ್ಯಗಳಿಂದ 66 ಅಂಕ ಸಂಗ್ರಹಿಸಿ ಪ್ಲೇಆಫ್‌ನಿಂದ ಹೊರಬಿತ್ತು.

ಫುಟ್‌ಬಾಲ್: ಇನ್ಫಿನಿಟಿಗೆ ಜಯ

ಬೆಂಗಳೂರು: ಇನ್ಫಿನಿಟಿ ಬೆಳಗಾವಿ ಎಫ್‌ಸಿ ತಂಡವು ಬಿಡಿಎಫ್‌ಎ 'ಬಿ' ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1 ಗೋಲುಗಳಿಂದ ಸ್ಟ್ರೈಡ್ ಎಫ್‌ಸಿ ತಂಡವನ್ನು ಮಣಿಸಿತು.

ಸಾಯ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊಹಮ್ಮದ್ ಶಾಮಿಲ್ ಪಿ. (41ನೇ ನಿಮಿಷ) ಮತ್ತು ಅನ್ಷಫ್ ಎ. (54ನೇ) ಅವರು ಇನ್ಫಿನಿಟಿ ತಂಡದ ಪರ ಗೋಲು ಗಳಿಸಿದರು. ವೇದಾಂತ್ ಬ್ಯಾನರ್ಜಿ (43ನೇ) ಸ್ಟ್ರೈಡ್ ಪರ ಗೋಲು ತಂದಿತ್ತರು.